ಮೇ ವಿಶೇಷಾಂಕ

ಬೆಲೆ : ಒಂದು ರೂಪಾಯಿ



ಚಿತ್ರರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 ಸಂಚಿಕೆ 17, 18 ಮೇ 4, 1980 ಬೆಲೆ : ರೂ. 1/-

ಮುಖಪುಟ ವಿನ್ಯಾಸ — ವಸಂತ

ಸಂದೇಶಗಳು

ಇ. ಕೆ. ನಯನಾರ್
ಮುಖ್ಯಮಂತ್ರಿ, ಕೇರಳ

ತಿರುವನಂತಪುರ
26ನೇ ಮಾರ್ಚಿ 1980

1980ರ ಮೇ ದಿನದಂದು ಬಿಡುಗಡೆಯಾಗುವ ನಿಮ್ಮ ಪತ್ರಿಕೆಯ ವಿಶೇಷಾಂಕದ ಸಂದರ್ಭದಲ್ಲಿ ದಯವಿಟ್ಟು ನನ್ನ ಹಾರ್ದಿಕ ಶುಭಾಶಯ ಹಾಗೂ ಹಾರೈಕೆಗಳನ್ನು ಸ್ವೀಕರಿಸಿ.

ಸಹಿ/-
(ಇ. ಕೆ. ನಯನಾರ್)

ಮುಖ್ಯಮಂತ್ರಿ
ತ್ರಿಪುರಾ ಸರಕಾರ

ಅಗರ್ತಲಾ
ತಾ. 21ನೇ ಮಾರ್ಚಿ 1980

ಮೇ ದಿನದಂದು ನೀವು ವಿಶೇಷಾಂಕವನ್ನು ತರುತ್ತಿದ್ದೀರೆಂದು ತಿಳಿದು ಸಂತೋಷವಾಯಿತು, ಏಕೆಂದರೆ ಈ ದಿನ ಜಗತ್ತಿನಾದ್ಯಂತ ಇರುವ ದುಡಿಯುವ ವರ್ಗದೊಂದಿಗೆ ತಾಸುಹೊಕ್ಕಾಗಿದೆ.

ಗಡಿ ಭಾಗದಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಆತಂಕಕಾರಿ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಸರ್ವಾಧಿಕಾರಿ ಶಕ್ತಿಗಳು ರಾಜ್ಯಗಳ ಸ್ವಾಯತ್ತತೆಯ ವಿರುದ್ಧ ಹೊಸ ಧಾಳಿಯನ್ನು ನಡೆಸುತ್ತಿದ್ದಾರೆ, ಇದರೊಂದಿಗೆ ಬಂಡವಾಳಶಾಹಿ ಭೂಮಾಲಕವರ್ಗ ಜನ ಸಾಮಾನ್ಯರ ಜೀವನಮಟ್ಟದ ಮೇಲೆ ಪ್ರತಿದಿನವೂ ನಾನಾವಿಧವಾದ ದುರ್ಭರ ಆಕ್ರಮಣ ನಡೆಸಿದ್ದಾರೆ. ಈ ಚಾರಿತ್ರಿಕ ದಿನದಂದು ಪ್ರಜಾಸತ್ತೆ ಹಾಗೂ ಸುಧಾರಿತ ಜೀವನಕ್ಕಾಗಿ ಐಕ್ಯತೆಯಿಂದ ಹೋರಾಡುವ ಪ್ರತಿಜ್ಞೆಯನ್ನು ನಾವು ಪುನಃ ಸ್ವೀಕರಿಸೋಣ,

ಸಹಿ/-
(ನೃಪೇನ್ ಚಕ್ರವರ್ತಿ)
ಮುಖ್ಯಮಂತ್ರಿ

ಮಂತ್ರಿ
ವಾರ್ತಾ ಮತ್ತು ಸಾಂಸ್ಕೃತಿಕ ವ್ಯವಹಾರಗಳ ಇಲಾಖೆ
ಪ. ಬಂಗಾಳ ಸರಕಾರ

ಡಿ. ಓ. ಸಂ. 242/ಎಂ/80

"ಐಕ್ಯರಂಗ" ಮೇ ದಿನದಂದು ವಿಶೇಷಾಂಕವನ್ನು ತರುವುದೆಂದು ತಿಳಿದು ಸಂತೋಷವಾಯಿತು. ಮೇ ದಿನ ಅಂತರ್‌ರಾಷ್ಟ್ರೀಯ ದುಡಿಯುವ ವರ್ಗದ ದಿನವಾಗಿದ್ದು, ಇಂತಹ ಚಾರಿತ್ರಿಕ ದಿನ ನಿಮ್ಮ ಪತ್ರಿಕೆಯು ವಿಶೇಷ ಸಂಚಿಕೆಯಾಗಿ ಬರುವುದು ಸಮಯೋಚಿತವಾಗಿದೆ. ಇಂದಿನ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ರಾಜಕೀಯ ಪರಿಸ್ಥಿತಿಯಲ್ಲಿ ಎಲ್ಲಾ ದುಡಿಯುವ ಜನತೆಯ ಐಕ್ಯಹೋರಾಟದ ಅಗತ್ಯವಿದ್ದು ಇದರಲ್ಲಿ ಕಾರ್ಮಿಕವರ್ಗ ಮುಂದಾಳುತ್ವವನ್ನು ವಹಿಸಬೇಕಾಗಿದೆ. ನಮ್ಮ ದೇಶವು ಕ್ಲಿಷ್ಟಕರ ರಾಜಕೀಯ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಸರ್ವಾಧಿಕಾರ ಮತ್ತೆ ತನ್ನ ಕುರೂಪಿ ತಲೆಯನ್ನು ಎತ್ತಿದೆ, ಇದನ್ನು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ತಮ್ಮ ಎಲ್ಲಾ ಶಕ್ತಿ, ಸ್ಥೈರ್ಯಗಳನ್ನು ಉಪಯೋಗಿಸಿ ಎದುರಿಸಬೇಕಾಗಿದೆ. ನಿಮ್ಮ ಪತ್ರಿಕೆಯು ಸದ್ಯದ ಈ ತುರ್ತು ಜವಾಬ್ದಾರಿಯ ಬಗ್ಗೆ ದೇಶದ ದುಡಿಯುವ ವರ್ಗದ ಗಮನ ಸೆಳೆಯುತ್ತದೆಂದು ಭಾವಿಸುತ್ತೇನೆ,

ಶುಭಾಶಯಗಳೊಂದಿಗೆ,

ಸಹಿ/-
(ಬುದ್ಧದೇವ ಭಟ್ಟಾಚಾರ್ಯ)

ಮೇ ದಿನದ ಶುಭಾಶಯ

ಐಕ್ಯರಂಗ ಮೇ ವಿಶೇಷಾಂಕವನ್ನು ಹೊರತರಲು ಸಹಾಯ ಮಾಡಿದ ನಮ್ಮ ಓದುಗರು ಮತ್ತು ಚಂದಾದಾರರಿಗೂ, ಪತ್ರಿಕಾ ಏಜೆಂಟರುಗಳಿಗೂ, ವರದಿಗಾರರು ಮತ್ತು ಲೇಖಕರುಗಳಿಗೂ, ಮತ್ತು ಜಾಹೀರಾತುಗಳನ್ನಿತ್ತು ಸಹಕರಿಸಿದವರಿಗೂ ನಮ್ಮ ಮೇ ದಿನದ ಶುಭಾಶಯಗಳು. ನಮ್ಮೊಡನೆ ಸಹಕರಿಸಿದ ನಿಮ್ಮೆಲ್ಲರಿಗೆ ಧನ್ಯವಾದಗಳು.

ಸಂಪಾದಕ ಮಂಡಲಿ

"ನುಗ್ಗಿ ಮುಂದೆ"

ನುಗ್ಗಿ ಮುಂದೆ ನುಗ್ಗಿ ಮುಂದೆ
ಶ್ರಮಿಕರೆಲ್ಲ ಒಂದೇ
ಒಂದೆಗುರಿ ಒಂದೆ ಮನ
ಶ್ರಮಿಕ ಪ್ರಭುತ್ವವ ಕಟ್ಟಲು ಇಂದೇ
ಗಡಿಯಿಲ್ಲ ಗುಡಿಯಿಲ್ಲ
ದೇಶಕೋಶಗಳಿಲ್ಲ
ಶೋಷಿತರು ನಾವೆಲ್ಲರೊಂದೇ
ಮಿಂಚಾಗಿ ಹೊಳೆದು
ಸಿಡಿಲಾಗಿ ಸಿಡಿದು ನಿಲ್ಲಿ
ಮುಗಿಲೊಡೆದು ಬನ್ನಿ
ಕೆಂಬಾವುಟವ ಹಿಡಿದು ತನ್ನಿ
ಗುಡ್ಡಗಳನೊದ್ದು
ಬೆಟ್ಟಗಳ ಕಿತ್ತು
ಸಮತೆ ಬಿತ್ತ ಬನ್ನಿ
ಸುಳಿಗಾಳಿಯಾಗಿ
ಬಿರುಗಾಳಿಯಾಗಿ
ಕಡಲುಕ್ಕಿ ಬನ್ನಿ
ಆಳುವನೆಲದೊಳಗಿಂತ
ತುದಿವ ಕುಲುಮೆಗಳಿಂದ
ಕೆಂಡದುಂಡೆಗಳಾಗಿ
ಕುಡುಗೋಲು ಸುತ್ತಿಗೆಯ
ಹಿಡಿದು ಬನ್ನಿ

—ಚಾರುಕೇಶಿ

ಸ್ವಾಗತ

ಸ್ವಾಗತವು ನಿನಗೆ
ಕೆಂಪು ವಂದನೆಗಳೊಂದಿಗೆ
ಕುಡುಗೋಲು ಸುತ್ತಿಗೆ
'ಐಕ್ಯರಂಗ'ವೆಂಬ
ಶಿರೋನಾಮೆಯೊಂದಿಗೆ
ಕಾರ್ಮಿಕರೆಂಬ
ವರ ವಿಶೇಷ ಸುದ್ದಿಗಳೊಂದಿಗೆ
ಬರುವೆ ವಾರಕ್ಕೊಮ್ಮೆ
ಬರಬಾರದೆ ದಿನಕ್ಕೊಮ್ಮೆ ?

—ಕೆ. ಬಿ. ಶೆಟ್ಟಿ

ವಿಶೇಷಾಂಕದಲ್ಲಿ ಸುದ್ದಿ, ಸಮಾಚಾರಗಳನ್ನು ಪ್ರಕಟಿಸಿಲ್ಲ. ಮುಂದಿನ ಸಂಚಿಕೆಯಲ್ಲಿ ಇವುಗಳನ್ನು ಎಂದಿನಂತೆ ಪ್ರಕಟಿಸಲಾಗುವುದು,

ಸಂಪಾದಕ ಮಂಡಲಿ

ಅಮರ ನಗರದ ಅಮರ ಪುರುಷರು

ಕಾರ್ಮಿಕನಾ ಹೃದಯದಲಿ
ನೋವಿನ ಮಡಿಯಲ್ಲಿ
ಗೆಲುವಿನ ಕನ್ನಡಿಯೊಂತಿದೆ ಚಿಕಾಗೋ...ಚಿಕಾಗೋ...

ಏರಿದೇ ಹಾರಿದೇ ಮೇರೆಯೇ ಮೀರಿದೇ
ಬಾನೆತ್ತರ ನಿಂತಿದೆ ರಕ್ತಧ್ವಜಾ
ಕಲಿಸಿದೆ ಪಾಠ ಹೋರಾಟ
ಅಳಿಯದೆ ಬೆಳೆಯುವ ಸೆಣಸಾಟ

ಗುಂಡಿನ ಮಳೆಯಲ್ಲೂ ಚೀರದೆ ಕೂಗದೆ
ಮುನ್ನಡೆ ಇಡುವ ಕಾರ್ಮಿಕರು
ಅನ್ಯಾಯದ ಉರುಳನ್ನು ಕಡಿದೆಸೆದು
ಚರಿತ್ರೆಯ ನಿರ್ಮಿಸಿದ ಪುಣ್ಯವಂತರು

ಯಜಮಾನರ ಹೊದೆಯೇಟಿಗೆ ನೆರಳಾಗಿ
ದುಡಿಯುವ ಗುಲಾಮರು ತಾವಾಗೀ
ನೋವಿನ ಕೂಗಿಗೆ ಬೆಲೆ ಇರದಾಗ
ನಡೆದಿದೆ ಸಂಗ್ರಾಮಾ...ನಡೆದಿದೆ ಸಂಗ್ರಾಮಾ....

ರಕ್ತದ ಧಾರೆ ಹರಿದಾಗ ಮೈವಸ್ತ್ರವೆ ರಕ್ತದಿ ತೊಯ್ಯುವಾಗ
ಹಾರಿದವು ಕೆಂಧ್ವಜ ಸಾಲಾಗೀ...
ಸಾರಿದವು ವಿಜಯದ ಮುನ್ನಡೆಯಾ...
ಸಾರಿದವು ವಿಜಯದ ಮುನ್ನಡೆಯಾ...

—ಸುದರ್ಶನ್

ಮೇ ದಿನಾಚರಣೆ ಮತ್ತು ಕಾರ್ಮಿಕ ವರ್ಗದ ಕರ್ತವ್ಯ

ಇಂದು ಜಗತ್ತಿನಾದ್ಯಂತ ಆಚರಿಸುತ್ತಲಿರುವ "ಮೇ ದಿನ"ದ ಹುಟ್ಟು ಕಾರ್ಮಿಕ ವರ್ಗವು ಕೆಲಸದ ಸಮಯವನ್ನು ಕಡಿತಗೊಳಿಸುವುದಕ್ಕಾಗಿ ನಡೆಸಿದ ಹೋರಾಟದಲ್ಲಿದೆ. ಇದರ ಉಗಮ ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯ ತೊಟ್ಟಿಲಾಗಿರುವ ಅಮೇರಿಕಾ ಸಂಯುಕ್ತಸಂಸ್ಥಾನದಲ್ಲಾಯಿತು. ದಿನಕ್ಕೆ ಹದಿನಾಲ್ಕು, ಹದಿನೆಂಟು ಗಂಟೆಗಳ ಕೆಲಸದಿಂದ ಬೇಸತ್ತ ಕೆಲಸಗಾರರು ಮೊದಲು "ದಿನಕ್ಕೆ 10 ಗಂಟೆಗಳ ಕೆಲಸ"ವೆಂದೂ, ಆಮೇಲೆ "ದಿನಕ್ಕೆ 8 ಗಂಟೆಗಳ ಕೆಲಸ"ಮಾತ್ರ ಬೇಕೆಂದೂ ಚಳುವಳಿ ಪ್ರಾರಂಭಿಸಿದರು. ಈ ಬೇಡಿಕೆಯ ಹೋರಾಟವನ್ನು ನಡೆಸುವುದಕ್ಕಾಗಿ ಕಾರ್ಮಿಕರು ಮೇ ಒಂದನೇ ತಾರೀಖನ್ನು ಆರಿಸಿಕೊಂಡರು. ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ನಡೆದ ಚಳುವಳಿಗಳಲ್ಲಿ ಮೇ ಒಂದು, 1886ರದ್ದು ತುಂಬಾ ಪ್ರಸಿದ್ಧವಾದದ್ದು. ಅಂದು ಗುಂಡಿನೇಟಿಗೆ ಅನೇಕ ಕಾರ್ಮಿಕರು ಬಲಿಯಾದರು. ಇದು ಜಗತ್ತಿನಾದ್ಯಂತ ಕಾರ್ಮಿಕ ಚಳುವಳಿಗೆ ಹೊಸ ಸ್ಫೂರ್ತಿಯನ್ನಿತ್ತಿತು.

1889ರಲ್ಲಿ ಸಮಾವೇಶಗೊಂಡ ಎರಡನೇ ಇಂಟರ್‌ನ್ಯಾಷನಲ್‌ನಲ್ಲಿ, ಕಾರ್ಮಿಕರ ಬೇಡಿಕೆಯನ್ನು ಮುಂದಿಡುವುದಕ್ಕೆ ಮೇ ಒಂದನೇ ತಾರೀಖನ್ನು ಅಧಿಕೃತವಾಗಿ ಆರಿಸಿಕೊಳ್ಳಲಾಯಿತು. 1890ರ ಮೇ ಒಂದರಿಂದ ಮೊದಲುಗೊಂಡು ಮೇ ದಿನವನ್ನು ಕಾರ್ಮಿಕ ವರ್ಗದ ಅಂತರಾಷ್ಟ್ರೀಯ ದಿನವನ್ನಾಗಿ ಆಚರಿಸುವುದು ಪ್ರಾರಂಭವಾಯಿತು. 1890ರ ಮೇ ದಿನದ ನಂತರ ಎಂಟು ಗಂಟೆ ಕೆಲಸದ ಬೇಡಿಕೆಯೊಂದೇ ಅಲ್ಲದೆ, ಕಾರ್ಮಿಕರ ದುಡಿಮೆ ಪರಿಸ್ಥಿತಿ ಸುಧಾರಣೆ ಮತ್ತಿತರ ಬೇಡಿಕೆಗಳೂ ಸೇರಿದವು. 1893ರಲ್ಲಿ ಇಂಟರ್‌ನ್ಯಾಷನಲ್‌ನ ಜ್ಯೂರಿಚ್ ಅಧಿವೇಶನ ನಡೆದಾಗ ಮೇ ದಿನದ ವರ್ಗಛಾಯೆಯನ್ನು ಮತ್ತಷ್ಟು ಖಚಿತಗೊಳಿಸಲಾಯಿತು. ವರ್ಗಬೇಧವನ್ನು ಕಿತ್ತುಹಾಕಲೂ, ಅಂತರಾಷ್ಟ್ರೀಯ ಶಾಂತಿಯನ್ನು ಸ್ಥಾಪಿಸಲೂ, ಕಾರ್ಮಿಕ ವರ್ಗದ ದೃಢತೆಯ ಸಂಕೇತವಾಗಿ ಮೇ ದಿನಾಚರಣೆಯನ್ನು ನಡೆಸುವ ನಿರ್ಧಾರ ಕೈಗೊಳ್ಳಲಾಯಿತು. ಅಲ್ಲಿಂದೀಚೆಗೆ "ಮೇ ದಿನ"ವು ಜಗತ್ತಿನ ಕಾರ್ಮಿಕ ವರ್ಗದ ಕೆಂಪುದಿನವನ್ನಾಗಿ ಆಚರಿಸಲ್ಪಡುತ್ತಿದೆ.

ಸಾಮ್ರಾಜ್ಯಶಾಹಿ ಯುದ್ಧ, ಮತ್ತು ಮಹಾಜಕುಶಾಹಿದಬ್ಬಾಳಿಕೆಗೆವಿರೋಧ, ಕಾರ್ಮಿಕ ವರ್ಗಕ್ಕೆ ಮತದಾನದ ಹಕ್ಕು, ರಾಜಕೀಯ ಕೈದಿಗಳ ಬಿಡುಗಡೆ, ಅಂತರಾಷ್ಟ್ರೀಯ ಕಾರ್ಮಿಕ ವರ್ಗದ ಸೌಹಾರ್ದತೆ ಮುಂತಾದ ಬೇಡಿಕೆಗಳನ್ನು ಕ್ರಮೇಣವಾಗಿ ಸೇರಿಸಿಕೊಂಡು ಮೇ ದಿನಾಚರಣೆಯನ್ನು ಇನ್ನೂ ಅರ್ಥಪೂರ್ಣವನ್ನಾಗಿ ಮಾಡಲಾಗಿದೆ.

ಚಾರಿತ್ರಿಕ ಹಿನ್ನೆಲೆ ಇರುವ ಮೇ ದಿನವನ್ನು ಎಲ್ಲೆಡೆಗಳಲ್ಲೂ ಆಚರಿಸುತ್ತಲಿರುವ ಈ ಸಂದರ್ಭದಲ್ಲಿ ಜಗತ್ತಿನಾದ್ಯಂತ ಬಹಳ ಬದಲಾವಣೆಗಳಾಗಿವೆ. 1886ರಲ್ಲಿ ಎಂಟು ಗಂಟೆ ಕೆಲಸಕ್ಕಾಗಿ ಚಳವಳಿ ಹೂಡಿದ ಕಾರ್ಮಿಕ ವರ್ಗವು ಇಂದು ಜಗತ್ತಿನ ಮೂರರನೇ ಒಂದು ಭಾಗದಲ್ಲಿ ಅಧಿಕಾರದಲ್ಲಿದೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿನ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಬಿಕ್ಕಟ್ಟುಗಳು ದಿನೇ ದಿನೇ ತೀವ್ರಗೊಳ್ಳುತ್ತಲಿದ್ದು, ಬೆಲೆ ಏರಿಕೆ, ನಿರುದ್ಯೋಗ, ಬಡತನ, ದಾರಿದ್ರ್ಯದಂತಹ ಸಮಸ್ಯೆಗಳಿಂದ ಜನಸಾಮಾನ್ಯರ, ದುಡಿಯುವ ಜನರ ಜೀವನವೇ ದುಸ್ಸರವಾಗಿದೆ. ಆದರೆ ಕಾರ್ಮಿಕ ವರ್ಗದ ಅಧಿಕಾರವಿರುವ ಸಮಾಜವಾದಿ ದೇಶಗಳಲ್ಲಿ ಈ ಒಂದೂ ಸಮಸ್ಯೆಗಳಿಲ್ಲದೆ ಸಮಾಜದ ಒಟ್ಟು ಪ್ರಗತಿ ಮತ್ತು ಅಭ್ಯುದಯವನ್ನು ಸಾಧಿಸಲಾಗುತ್ತಿದೆ. ಸಮಾಜವಾದಿ ರಾಷ್ಟ್ರಗಳೊಳಗೆ ಎಷ್ಟೇ ರಾಜಕೀಯ ಮತ್ತು ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿದ್ದರೂ, ಬಂಡವಾಳಶಾಹಿ ವ್ಯವಸ್ಥೆಗಿಂತ ಸಮಾಜವಾದಿ ವ್ಯವಸ್ಥೆಯು ಶ್ರೇಷ್ಠವೆಂಬುದನ್ನು ಸಾಧಿಸಿ ತೋರಿಸಲಾಗಿದೆ. ಇನ್ನು ಕೆಲವೆಡೆ ಎಂಟುಗಂಟೆ ಕೆಲಸ ಮಾತ್ರವಲ್ಲ, ರಾಜಕೀಯ ಅಧಿಕಾರವನ್ನು ಹಿಡಿಯಲು ಕಾರ್ಮಿಕ ವರ್ಗ ಮುಂದಾಗುತ್ತಲಿದೆ.

ಆದರೆ ಬಂಡವಾಳಶಾಹಿ ಜಗತ್ತಿನ ಹಲವೆಡೆ ಕಾರ್ಮಿಕರು ಇಂದಿಗೂ ಎಂಟುಗಂಟೆ ಕೆಲಸ, ಮತ್ತಿತರ ಸೌಲಭ್ಯಗಳಿಗಾಗಿಯೇ ಹೋರಾಡುವ ಪರಿಸ್ಥಿತಿ ಇದೆ. ಆರ್ಥಿಕ ಬೇಡಿಕೆಗಳಿಗೆ ಸೀಮಿತವಾದ ಆರ್ಥಿಕವಾದವು ಕಾರ್ಮಿಕ ವರ್ಗದ ಚಳುವಳಿಯನ್ನು ರಾಜಕೀಯ ಚಳುವಳಿಯ ಮಟ್ಟಕ್ಕೇರಿಸುವುದಕ್ಕೆ ಅಡಚಣೆಯನ್ನುಂಟುಮಾಡಿದೆ. ಬಂಡವಾಳಶಾಹಿ ಜಗತ್ತಿನ ಅವಿಭಾಜ್ಯ ಅಂಗವಾದ 'ಭೂಮಾಲೀಕ-ಬಂಡವಾಳಶಾಹಿ' ವ್ಯವಸ್ಥೆ ಇರುವ ನಮ್ಮ ದೇಶವೂ ಇದಕ್ಕೆ ಹೊರತಲ್ಲ. ಬಂಗಾಲ, ಕೇರಳ, ತ್ರಿಪುರಾ ರಾಜ್ಯ ಹಾಗೂ ಇನ್ನೂ ಕೆಲವೆಡೆ ಕಾರ್ಮಿಕ ವರ್ಗದ ರಾಜಕೀಯ ಜಾಗೃತಿಯು ಬೆಳೆದಿದೆಯಾದರೂ, ಒಟ್ಟಾಗಿ ಹೇಳುವುದಿದ್ದರೆ ಭಾರತ ದೇಶದ ಕಾರ್ಮಿಕ ವರ್ಗದ ಚಳುವಳಿಯಲ್ಲಿ ಆರ್ಥಿಕವಾದವು ಬೇರೂರಿದೆ. ಕಾರ್ಮಿಕ ವರ್ಗದ ಚಳುವಳಿಯಲ್ಲಿರುವ ಆರ್ಥಿಕವಾದ ಮತ್ತು ಸುಧಾರಣಾವಾದಗಳನ್ನು ವಿರೋಧಿಸಿ, ವರ್ಗಹೋರಾಟವನ್ನು ಪ್ರತಿಪಾದಿಸುವ ಸಿ. ಐ. ಟಿ. ಯು.ವಿನ ಸ್ಥಾಪನೆಯಾದ ಮೇಲೆ (1970ರಲ್ಲಿ), ದೇಶದ ಕಾರ್ಮಿಕ ವರ್ಗದ ಸಂಘಟನೆ ಮತ್ತು ಹೋರಾಟಗಳಿಗೆ ನವಚೈತನ್ಯ ಬರತೊಡಗಿದೆ. ಹಾಗೆಂದಾಕ್ಷಣ ಸಿ ಐ ಟಿ. ಯು. ನೇತೃತ್ವದ ಕಾರ್ಮಿಕ ಸಂಘಟನೆಗಳಲ್ಲಿ ಆರ್ಥಿಕವಾದವಿಲ್ಲವೆಂದಲ್ಲ. ಈ ನಿಶ್ಶಕ್ತಿಯನ್ನು ಅರಿತುಕೊಂಡು, ಇದನ್ನು ಹೋಗಲಾಡಿಸಲು ಸಿ ಐ.ಟಿ.ಯು.ವು ಮುಂದಾಗಿದೆ.

"ಕಾರ್ಮಿಕರು ಕೇವಲ ತಮ್ಮ ಬೇಡಿಕೆಗಳನ್ನು ಈಡೇರಿಸುವುದಕ್ಕಾಗಿ ಹೋರಾಡಿದರೆ ಸಾಲದು. ಎಲ್ಲಾ ಕಾರ್ಮಿಕರು ಒಟ್ಟಾಗಿ, ಉಳಿದ ಶೋಷಣೆಗೊಳಗಾದ ಜನತೆಗೂ ನಾಯಕತ್ವವನ್ನಿತ್ತು ಇಡಿಯ ಸಮಾಜ ವ್ಯವಸ್ಥೆಯನ್ನೇ ಬದಲಾಯಿಸಬೇಕು. ಕೂಲಿ ಹೆಚ್ಚಳಕ್ಕಾಗಿ ಹೋರಾಡುವುದಲ್ಲ, ಕೂಲಿ ಪದ್ಧತಿಯೇ ಇಲ್ಲದಂತೆ ಮಾಡಬೇಕು. ಆಗ ಮಾತ್ರ ಕಾರ್ಮಿಕ ವರ್ಗಕ್ಕೆ ತನ್ನ ವಿಮೋಚನೆ ಸಾಧ್ಯ" ಎಂಬ ಅರಿವನ್ನು ಕಾರ್ಮಿಕವರ್ಗದಲ್ಲಿ ಉಂಟುಮಾಡುವುದು ಕ್ರಾಂತಿಕಾರಿಗಳ, ಕಮ್ಯುನಿಸ್ಟರ ಕರ್ತವ್ಯವಾಗಿದೆ. ಪ್ರಾರಂಭದಲ್ಲಿ ಆರ್ಥಿಕ ಬೇಡಿಕೆಗಳಿಗಾಗಿ ಸಂಘಟಿಸಲ್ಪಡುವ ಕಾರ್ಮಿಕರಿಗೆ ಟ್ರೇಡ್‌ಯೂನಿಯನ್ ಜಾಗೃತಿ ಇರುತ್ತೆ. ಇದಕ್ಕೆ ಬದಲಾಗಿ ವರ್ಗ ಜಾಗೃತಿ, ಸಮಾಜವಾದಿ ಜಾಗೃತಿ ಬರುವಂತೆ ಮಾಡಬೇಕು. ಈ ದಿಸೆಯಲ್ಲಿ ಕೆಲಸ ಮಾಡುವುದೇ ಒಬ್ಬ ಕಮ್ಯುನಿಸ್ಟ್ ಟ್ರೇಡ್‌ಯೂನಿಯನ್ ಮುಖಂಡನನ್ನು ಸಾಮಾನ್ಯ ಟ್ರೇಡ್ ಯೂನಿಯನ್ ಮುಖಂಡನಿಗಿಂತ ಬೇರೆ ಎಂಬುದನ್ನು ತೋರಿಸುತ್ತದೆ. ಆರ್ಥಿಕವಾದ, ಸುಧಾರಣಾವಾದ ಹಾಗೂ ಇನ್ನಿತರ ಹಳೆಯ ಅವೈಜ್ಞಾನಿಕ ಮೌಲ್ಯಗಳ ವಿರುದ್ಧ ತೀವ್ರವಾದ ಸೈದ್ಧಾಂತಿಕ ಹೋರಾಟವನ್ನು ನಡೆಸದೆ, ಕಾರ್ಮಿಕವರ್ಗವನ್ನು ಹಂತಹಂತವಾಗಿ ರಾಜಕೀಯ ಹೋರಾಟಗಳಿಗಿಳಿಸದೆ ಕಾರ್ಮಿಕ ವರ್ಗದ ಚಾರಿತ್ರಿಕ ಜವಾಬ್ದಾರಿಯನ್ನು ಪೂರೈಸುವಂತೆ ಮಾಡುವುದು ಸಾಧ್ಯವಿಲ್ಲ. ಈ ದಿಕ್ಕಿನಲ್ಲಿ ನಾವೆಲ್ಲರೂ ಬಹಳಷ್ಟು ಶ್ರಮಿಸಬೇಕಾಗಿದೆ. ಜಾತಿ ಪದ್ಧತಿಯಂತಹ ಅನಿಷ್ಟಗಳು ಸಮಾಜದ ಒಟ್ಟು ಬೆಳವಣಿಗೆಗೆ ಆತಂಕಕಾರಿಯಾಗಿರುವ ನಮ್ಮ ದೇಶದ ಪರಿಸ್ಥಿತಿಯಲ್ಲಿ ಇದರ ವಿರುದ್ಧ ಹಾಗೂ ಇನ್ನಿತರ ಅನಿಷ್ಟ ಸಾರ್ವಜನಿಕ, ಧಾರ್ಮಿಕ ಮೌಲ್ಯಗಳ ವಿರುದ್ಧ ಹೋರಾಡುವುದು ಕಾರ್ಮಿಕವರ್ಗದ ಕರ್ತವ್ಯವಾಗಿದೆ.

ಇಂದು ಬಹಳಷ್ಟು ಕಡೆ ಕಾರ್ಮಿಕ ವರ್ಗದ ಚಳುವಳಿಯು ಜನತೆಯಿಂದ ಪ್ರತ್ಯೇಕಿಸಲ್ಪಟ್ಟಿದೆ. ಸಂಘಟಿತ ಕಾರ್ಮಿಕವರ್ಗವು ಜನಕೀಯ ಸಮಸ್ಯೆಗಳ ವಿರುದ್ಧ ಹೋರಾಡುವುದರ ಮೂಲಕ ಮತ್ತು ಜನತೆಯ ಒಟ್ಟು ವಿಮೋಚನೆಯು ಕಾರ್ಮಿಕವರ್ಗದ ನೇತೃತ್ವದಲ್ಲಿ ಕ್ರಾಂತಿ ನಡೆದು ಸಮಾಜವಾದಿ ಸಮಾಜ ಸ್ಥಾಪನೆಯಾಗುವುದರಿಂದ ಮಾತ್ರ ಎಂಬುದನ್ನು ತಿಳಿಸುವುದರ ಮೂಲಕ ಜನತೆಗೂ ಸಂಘಟಿತ ಕಾರ್ಮಿಕವರ್ಗಕ್ಕೂ ಜೀವಂತ ಸಂಬಂಧ ಕಲ್ಪಿಸಬೇಕು. ಹಳ್ಳಿಯ ಬಡವರೊಡನೆ ಸಖ್ಯಬೆಳೆಸಿ ಇಂದಿನ ಭೂಮಾಲಿಕ-ಬಂಡವಾಳಶಾಹಿ ವ್ಯವಸ್ಥೆಗೆ ಬದಲಾಗಿ "ಕಾರ್ಮಿಕ-ರೈತರ" ಅಧಿಕಾರವಿರುವ ಜನತಾ ಪ್ರಜಾಪ್ರಭುತ್ವವನ್ನು ಸ್ಥಾಪಿಸಿ, ಸಮಾಜವಾದದತ್ತ ಮುನ್ನಡೆಯುವಂತೆ ಮಾಡಲು ನಮ್ಮ ಕಾರ್ಮಿಕವರ್ಗವನ್ನು ತಯಾರು ಮಾಡಬೇಕಾಗಿದೆ.

ನಮ್ಮ ರಾಜ್ಯದ ಕಾರ್ಮಿಕ ಚಳುವಳಿಗೆ ಇತ್ತೀಚೆಗಿನ ದಿನಗಳಲ್ಲಿ ಹೊಸ ತಿರುವು ಬರುತ್ತಲಿದೆ. ರಾಜ್ಯದ ಹತ್ತಿಗಿರಣಿ ಕಾರ್ಮಿಕರ ಹೋರಾಟ, ಮೈಕೋ ಕಾರ್ಮಿಕರ ಚಾರಿತ್ರಿಕ ಹೋರಾಟ, ದಾಂಡೇಲಿ ಪೇಪರ್ ಮಿಲ್ಲಿನ ಕಾರ್ಮಿಕರ ದೀರ್ಘ ಮತ್ತು ಧೀರ ಹೋರಾಟ–ಇವೆಲ್ಲಾ ಹೆಚ್ಚು ಹೆಚ್ಚಾಗಿ "ಕಾರ್ಮಿಕವರ್ಗದ ಸೌಹಾರ್ದತೆಯನ್ನು" ಸಂಘಟಿಸುವತ್ತ ಹೊಸ ದಾಖಲೆಗಳನ್ನು ಸ್ಥಾಪಿಸಿವೆ. "ಒಬ್ಬ ಕಾರ್ಮಿಕನ ಹೋರಾಟ ಎಂದರೆ ಎಲ್ಲಾ ಕಾರ್ಮಿಕರ ಹೋರಾಟ" ಎಂಬುದನ್ನು ಪ್ರಾಯೋಗಿಕವಾಗಿ ಸಾಧಿಸುವ ಪ್ರಯತ್ನಗಳು ನಡೆದಿವೆ, ಸ್ವಲ್ಪಮಟ್ಟಿನ ಯಶಸ್ಸೂ ದೊರೆತಿದೆ. ಆದರೆ ರಾಜ್ಯದಲ್ಲಿನ ಪರಿಸ್ಥಿತಿ ಬಗ್ಗೆ ಒಟ್ಟಾಗಿ ಹೇಳುವುದಿದ್ದರೆ ಸಂಘಟಿತ ಕಾರ್ಮಿಕವರ್ಗದಲ್ಲಿ ಆರ್ಥಿಕವಾದವು ಬಲವಾಗಿದೆ. ಸಂಘಟಿತ ಕಾರ್ಮಿಕರಲ್ಲದೆ ಅಸಂಘಟಿತ ಕಾರ್ಮಿಕರು ಬಹಳಷ್ಟಿರುವರು. ಸಂಘಟಿತ ಕಾರ್ಮಿಕರನ್ನು ಐಕ್ಯಕಾರ್ಯಾಚರಣೆ ಮತ್ತು ಸೌಹಾರ್ದ ಕಾರ್ಯಾಚರಣೆಗಳಿಗಿಳಿಸುವುದು, ವರ್ಗಜಾಗೃತಿ ಮೂಡಿಸುವುದು, ಅಸಂಘಟಿತ ಕಾರ್ಮಿಕರನ್ನು ಸಂಘಟಿಸುವುದು, ಕಾರ್ಮಿಕವರ್ಗದಲ್ಲಿ ರಾಜಕೀಯ ಜಾಗೃತಿ ಮೂಡಿಸಿ ಎಲ್ಲಾ ಶೋಷಣೆಗೊಳಗಾದ ಜನತೆಗೆ ನಾಯಕತ್ವವನ್ನೀಯುವುದು–ಈ ದಿಕ್ಕಿನಲ್ಲಿ ಹೆಚ್ಚಿನ ಮುತುವರ್ಜಿಯಿಂದ ಶ್ರಮಿಸಬೇಕಾಗಿದೆ.

ಸರ್ವಾಧಿಕಾರಿ ಶಕ್ತಿಯು ಇಡೀ ದೇಶದಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಲು ಹವಣಿಸುತ್ತಿರುವ ಭಾರತ ದೇಶದ ಇಂದಿನ ಪರಿಸ್ಥಿತಿಯಲ್ಲಿ ಸರ್ವಾಧಿಕಾರ ಶಕ್ತಿಯನ್ನು ವಿರೋಧಿಸುವುದು, ಪ್ರಜಾಪ್ರಭುತ್ವ ಮೌಲ್ಯಗಳನ್ನು ರಕ್ಷಿಸುವುದು, ಬಂಗಾಲ, ತ್ರಿಪುರಾ ಮತ್ತು ಕೇರಳ ರಾಜ್ಯಗಳಲ್ಲಿನ ಎಡರಂಗ ಮತ್ತು ಎಡ ಪ್ರಜಾಪ್ರಭುತ್ವರಂಗ ಸರಕಾರಗಳನ್ನು ಬೆಂಬಲಿಸಿ ರಕ್ಷಿಸಲು ಮುಂದಾಗುವುದು, ಬೇರೆಬೇರೆ ರಾಜ್ಯಗಳಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಚಳುವಳಿಯನ್ನು ಬೆಳೆಸಿ ರಾಷ್ಟ್ರಮಟ್ಟದಲ್ಲಿ ಇಂದಿನ ಭೂಮಾಲಿಕ-ಬಂಡವಾಳಶಾಹಿ ವ್ಯವಸ್ಥೆಗೆ ಒಂದು ಎಡ ಮತ್ತು ಪ್ರಜಾಪ್ರಭುತ್ವ ಬದಲಿಯನ್ನು ಉಂಟುಮಾಡುವುದು, ಮಣ್ಣಿನ ಮಕ್ಕಳ ವಾದದಂತಹ ಛಿದ್ರಕಾರಿ ಘೋಷಣೆ ಮತ್ತು ಚಳುವಳಿಗಳನ್ನು ವಿರೋಧಿಸುವುದು, ರಾಷ್ಟ್ರದ ಗಡಿಯಲ್ಲಿ ಸಾಮ್ರಾಜ್ಯಶಾಹಿಯು ನಡೆಸುವ ಪಿತೂರಿಯನ್ನು ವಿರೋಧಿಸುವುದು ಇವೆಲ್ಲಾ ಕಾರ್ಮಿಕವರ್ಗದ ತುರ್ತಿನ ಕರ್ತವ್ಯಗಳಾಗಿವೆ. ಈ ದಿಸೆಯಲ್ಲಿ ಕರ್ನಾಟಕ ರಾಜ್ಯದ ಕಾರ್ಮಿಕವರ್ಗವನ್ನು ಸಂಘಟಿಸಿ, ರಾಷ್ಟ್ರಮಟ್ಟ ಮತ್ತು ಅಂತರಾಷ್ಟ್ರೀಯ ಕಾರ್ಮಿಕವರ್ಗದ ಚಳುವಳಿಗೆ ನಮ್ಮ ಕೊಡುಗೆಯನ್ನು ಸಲ್ಲಿಸಲು ಮುಂದಾಗಲು ಮೇ ದಿನದ ಸಂದರ್ಭದಲ್ಲಿ ಪ್ರತಿಜ್ಞೆಗೈಯ್ಯೋಣ.

—ಎಂ. ಕೆ. ಭಟ್

o

ಭಾರತ

ಅಂದು ಭಾರತ
ಪರಕೀಯರ ಕೈಯೊಳಗಿತ್ತು
ಸಂಪತ್ತೆಲ್ಲ ಇಂಗ್ಲೀಷರ ಪಾಲಾಗಿತ್ತು
ಮಾತೆತ್ತಿದರೆ ಶಿಕ್ಷೆಯಾಗುತ್ತಿತ್ತು
ಆದರೆ ಹೊಟ್ಟೆ ತುಂಬ ಕೂಳಿತ್ತು

ಇಂದು ಭಾರತ
ಸರ್ವತಂತ್ರ ಸ್ವತಂತ್ರ
ಪ್ರಜಾತಂತ್ರ ಗಣರಾಜ್ಯ
ಓಟು ಹಾಕುವುದು ಮಾತ್ರ ಗೊತ್ತು
ಅಧಿಕಾರ ಮಾತ್ರ ಶ್ರೀಮಂತರ ಸೊತ್ತು
ಮಾಡಿದ ಸುಧಾರಣೆಗಳೆಲ್ಲ
ಬಡವರಿಗೆ ಆಪತ್ತು
ದುಡಿಯುವವರ ಹೊಟ್ಟೆಗಿಲ್ಲ
ಒಪ್ಪತ್ತಿನ ಊಟ
ಕೆಲವರ ದುಂದು ವೆಚ್ಚಕ್ಕಿಲ್ಲ ಲೂಟಿ
ಎಲ್ಲಿ ನೋಡಿದಲ್ಲೆ ಮುಷ್ಕರ
ಬಡವರ ಗೋಳು ಕೇಳುವವರಿಲ್ಲ
ಕಾರ್ಮಿಕ ಬೇಡಿಕೆ ಈಡೇರಿಸುವವರಿಲ್ಲ.

—ಕೆ. ಬಿ. ಶೆಟ್ಟಿ

o

ಭಾರತೀಯ ಕಾಫಿ ಉದ್ಯಮ

ಉತ್ಕೃಷ್ಟವಾದ ಮತ್ತು ಸುವಾಸನೆಗಳಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿರುವ ಭಾರತದ ಕಾಫಿಯು ಭಾರತದ ಫಲವತ್ತಾದ ಮಣ್ಣು, ವಾತಾವರಣ ಮತ್ತು ಸಂಸ್ಕೃತಿಗಳಿಂದ ಈ ವಿಶೇಷ ಪರಿಮಳವನ್ನು ಪಡೆಯುತ್ತದೆ.

ಪೂರ್ವದವರೆಗೂ ವಿಸ್ತರಿಸಿರುವ ಪಶ್ಚಿಮಘಟ್ಟಗಳ ತಂಪಾದ ಇಳಿಜಾರುಗಳಲ್ಲಿ ಭಾರತೀಯ ಕಾಫಿಯನ್ನು ಪೋಷಿಸಿ, ಶ್ರೇಷ್ಠತಮ ಕಾಫಿ ಬೆಳವಣಿಗೆಗೆ ಯೋಗ್ಯವಾದ ವಾತಾವರಣದಲ್ಲಿ ಅದನ್ನು ಬೆಳೆಸಲಾಗುತ್ತದೆ.

ಭಾರತದಲ್ಲಿ ಕಾಫಿಯನ್ನು 1,88,447 ಹೆಕ್ಟೇರುಗಳಲ್ಲಿ ಬೆಳೆಸಲಾಗುತ್ತದೆ. ಇಲ್ಲಿ 91,246 ಕಾಫಿ ಎಸ್ಟೇಟುಗಳಿವೆ. ಇದರಲ್ಲಿ 10 ಹೆಕ್ಟೇರುಗಳಿಗಿಂತ ಕಡಿಮೆ ಇರುವರಿ 89, 314 ರಷ್ಟಿದ್ದು 1,192 ಎಸ್ಟೇಟುಗಳು ಹತ್ತು ಹೆಕ್ಟೇರುಗಳಿಂತ ಹೆಚ್ಚು ವಿಸ್ತಾರವಾಗಿವೆ. ಈ ಎಸ್ಟೇಟುಗಳಲ್ಲಿ ದಿನವಹಿ 2,31,208 ಜನ ಕೆಲಸಗಾರರು ಉದ್ಯೋಗ ಪಡೆದಿದ್ದಾರೆ.

ಕಾಫಿ ಬೆಳೆಯ ಅಭಿವೃದ್ಧಿಗಾಗಿ ನಿಯೋಜಿತವಾಗಿರುವ ಕಾಫಿ ಮಂಡಳಿಯ ಪ್ರಧಾನ ಸಂಶೋಧನಾ ಕೇಂದ್ರವು ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರಿನಲ್ಲಿದೆ, ಕಾಫಿಯನ್ನು ವೈಜ್ಞಾನಿಕವಾಗಿ ಅಭಿವೃದ್ಧಿಗೊಳಿಸುವಲ್ಲಿ ಸಂಶೋಧನಾ ಮಂಡಳಿಯು ಮಹತ್ತರ ಪಾತ್ರವನ್ನು ವಹಿಸಿದೆ.

ಕಾಫಿ ಕೃಷಿಯಲ್ಲಿ ತೊಡಗಿಸಲಾಗಿರುವ ಜಮೀನಿನ ವಿಸ್ತೀರ್ಣ :-

ಕಾಫಿ ಬೆಳೆಯುವ ಪ್ರದೇಶ

ರಾಜ್ಯ	ಅರೆಬಿಕಾ (ಹೆಕ್ಟೇರುಗಳು)	ರೊಬಸ್ಟಾ (ಹೆಕ್ಟೇರುಗಳು)	ಒಟ್ಟು (ಹೆಕ್ಟೇರುಗಳು)
ಕರ್ನಾಟಕ	68,369	32,557	100,926
ತಮಿಳುನಾಡು	26,705	5,520	32,225
ಕೇರಳ	2.926	49,718	52,644
ಆಂಧ್ರಪ್ರದೇಶ	1,529	29	1,558
ಅಸ್ಸಾಂ	684	50	734
ಇತರ ರಾಜ್ಯಗಳು :			
ಒರಿಸ್ಸಾ, ಪ. ಬಂಗಾಳ, ಅಂಡಮಾನ್ಸ್ ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರ (ಪ್ರಾಯೋಗಿಕ ತೋಟಗಳು)	358	2	360
	100,571	87,876	188,447

ಭಾರತದ ಶ್ರೇಷ್ಠ ಕಾಫಿಯ ಒಟ್ಟು ಉತ್ಪಾದನೆ ಒಂದು ಲಕ್ಷ ಟನ್ನುಗಳಷ್ಟಿದೆ.

ಕಾಫಿ ಬೆಳೆಯನ್ನು ಸಂಸ್ಕರಿಸುವ ಕೇಂದ್ರಗಳು ದೇಶದಲ್ಲಿ ಸುಮಾರು 31 ರಷ್ಟಿವೆ. ಕಾಫಿ ಬೆಳೆಯನ್ನು ಕಟಾವು ಮಾಡುವುದು, ವೈಜ್ಞಾನಿಕವಾಗಿ ಸರಿಯಾದ ಗುಣಮಟ್ಟಕ್ಕೆ ಸಂಸ್ಕರಿಸುವುದು ಮುಂತಾದ ಕಾರ್ಯಗಳನ್ನು ಇಲ್ಲಿ ಕೈಗೊಳ್ಳಲಾಗುತ್ತಿದೆ.

1978-79ರಲ್ಲಿ ಕಾಫಿ ರಫ್ತಿನಿಂದ 157 ಕೋಟಿ ರೂಪಾಯಿಗಳಷ್ಟು ವಿದೇಶಿ ವಿನಿಮಯ ದೊರೆತಿದೆ.

ರಫ್ತಿನಲ್ಲಿ ಕಂಡುಬರುತ್ತಿರುವ ಹೆಚ್ಚಳದ ಬೇಡಿಕೆಗಳು ಮತ್ತು ಭವಿಷ್ಯದ ಅಂತರರಾಷ್ಟ್ರೀಯ ಕಾಫಿ ಸೇವನೆಯಲ್ಲಿ ಉಂಟಾಗಲಿರುವ ಹೆಚ್ಚಳ ಇವುಗಳಿಗೆ ತಕ್ಕಂತೆ ಸರಕನ್ನು ಸರಬರಾಜು ಮಾಡುವುದಕ್ಕೋಸ್ಕರ, ಸಾಂಪ್ರದಾಯಿಕ ಪ್ರದೇಶಗಳಲ್ಲಿ ಹೆಚ್ಚು ಉತ್ಪಾದನೆ ಮತ್ತು ಅಸಾಂಪ್ರದಾಯಿಕ ಪ್ರದೇಶಗಳನ್ನು ಕಾಫಿ ಬೆಳೆಗೆ ಒಗ್ಗಿಸುವುದು ಮುಂತಾದ ಪ್ರಯತ್ನಗಳನ್ನು ಕಾಫಿ ಮಂಡಳಿಯು ತನ್ನ ಪ್ರಸಕ್ತ ಉದ್ದೇಶವನ್ನಾದಿರಿಸಿಕೊಂಡಿದೆ.

ಕಾಫಿ ಮಂಡಳಿ, ಭಾರತ

ಮಹಾನ್ ಕ್ರಾಂತಿಕಾರಿ ಸರ್ದಾರ್ ಭಗತ್‌ಸಿಂಗ್

—ವಿ. ಪಿ. ಕುಲಕರ್ಣಿ

1929 ಏಪ್ರಿಲ್ 8ರಂದು ದೆಹಲಿಯಲ್ಲಿ ಕೇಂದ್ರ ವಿಧಾನಸಭೆಯ ಅಧಿವೇಶನ ನಡೆಯುತ್ತಿತ್ತು. ಸರ್ಕಾರ ಕೆಲವು ಜನವಿರೋಧಿ ಮಸೂದೆಗಳನ್ನು ಸಭೆಯ ಮುಂದೆ ಮಂಡಿಸುವದಿತ್ತು. ಅವುಗಳಲ್ಲಿ ಮುಖ್ಯವಾದವು ಒಂದು ಕಾರ್ಮಿಕ ವಿವಾದಗಳನ್ನು ಕುರಿತದ್ದು, ಇನ್ನೊಂದು ಸಾರ್ವಜನಿಕ ಸುರಕ್ಷಣಾ ಕಾಯ್ದೆ. ಚರ್ಚೆಯು ಪ್ರಾರಂಭವಾದ ಕೆಲಹೊತ್ತಿನಲ್ಲಿ ಸಭೆಯಲ್ಲಿ ಎರಡು ಬಾಂಬುಗಳು ಸ್ಫೋಟಿಸಲ್ಪಟ್ಟವು. ಹಾಲ್‌ನಲ್ಲಿ ಸೇರಿದ್ದ ಜನ ಚೆಲ್ಲಾಪಿಲ್ಲಿಯಾಯಿತು. ಬಾಂಬು ಎಸೆದವರ ಉದ್ದೇಶ, ಅಲ್ಲಿ ನೆರೆದವರ ಕೊಲೆಮಾಡುವದಾಗಿರಲಿಲ್ಲ. ಬದಲಾಗಿ ಜನವಿರೋಧಿ, ಕಾರ್ಮಿಕ ವಿರೋಧಿ ಮಸೂದೆಗಳನ್ನು ಜನತೆಯ ಮೇಲೆ ಹೇರುವದರ ವಿರುದ್ಧ ಪ್ರತಿಭಟನೆಯಾಗಿತ್ತು. ಕಾರ್ಮಿಕ ಧುರೀಣರನ್ನು, ಕಮ್ಯುನಿಸ್ಟರನ್ನು ವಿನಾಕಾರಣ ಬಂಧಿಸಿದುದರ ವಿರುದ್ಧ (ಮೀರತ್ ಮೊಕದ್ದಮೆಯಲ್ಲಿ), ಲಾಲಾಲಜಪತರಾಯರ ಹೇಯ ಕೊಲೆಯ ಕೃತ್ಯದ ವಿರುದ್ಧ ಪ್ರತಿಭಟಿಸುವದಾಗಿತ್ತು. ಈ ಅಂಶಗಳನ್ನೊಳಗೊಂಡ ಕರಪತ್ರಗಳನ್ನು ಇಬ್ಬರು ಯುವಕರು ಪ್ರೇಕ್ಷಕರ ಗ್ಯಾಲರಿಯಿಂದ ಎಸೆಯುತ್ತ "ಇನ್‌ಕ್ವಿಲಾಬ್ ಜಿಂದಾಬಾದ್" ಎಂದು ಆರ್ಭಟಿಸುತ್ತ ತಮ್ಮ ಕೈಯಲ್ಲಿರುವ ಪಿಸ್ತೂಲಗಳನ್ನು ನೆಲದ ಮೇಲೆಸೆದು ಸ್ವಯಂ ಬಂಧಿತರಾದರು. "ಸರ್ದಾರ್ ಭಗತ್ ಸಿಂಗ್ ಮತ್ತು ಬಟುಕೇಶ್ವರ ದತ್ತ" ಇವರೇ ಆ ಇಬ್ಬರು ಯುವಕರು.

1921-22ರ ಮಹಾತ್ಮಗಾಂಧಿ ನೇತೃತ್ವದ ಅಸಹಕಾರ ಚಳುವಳಿ ದೇಶದಲ್ಲೆಲ್ಲ ಒಂದು ಹೊಸ ಅಲೆಯನ್ನು ಎಬ್ಬಿಸಿತ್ತು. ಇಡೀ ದೇಶ ಮಹಾತ್ಮರ ಕರೆಗೆ ಓಗೊಟ್ಟಿತ್ತು. ಚೌರಿಚೌರಾ ಘಟನೆ (ಉತ್ತರ ಪ್ರದೇಶದ ಚೌರಿಚೌರಾ ಎಂಬಲ್ಲಿ ರೊಚ್ಚಿಗೆದ್ದ ಜನತೆ ಪೋಲೀಸ್ ಸ್ಟೇಶನ್‌ಗೆ ಬೆಂಕಿ ಇಟ್ಟಿದ್ದರು. ಈ ಘಟನೆಯಲ್ಲಿ 8 ಜನ ಪೋಲೀಸರು ಜೀವಂತ ದಹಿಸಲ್ಪಟ್ಟಿದ್ದರು) ನಂತರ ಅಸಹಕಾರ ಚಳುವಳಿಯನ್ನು ಗಾಂಧಿ ನಿಲ್ಲಿಸಿದರು. ಗಾಂಧೀಜಿಯ ಈ ಕ್ರಮ ಜನತೆಯಲ್ಲಿ ನಿರಾಶೆ ಹುಟ್ಟಿಸಿತು. ಅದರಲ್ಲೂ ಯುವಕರು ಅಸಹನೆಯಿಂದ ಕುದಿಯುತ್ತಿದ್ದರು. ಈ ಹಿಂದೆ 1919 ಏಪ್ರಿಲ್ 13ರಂದು ಅಮೃತಸರದ "ಜಾಲಿಯನ್ ವಾಲಾಬಾಗ್" ಬ್ರಿಟಿಷರು ನಡೆಸಿದ ಬರ್ಬರ ಹತ್ಯಾಕಾಂಡ ಜನತೆಯ ಮನಸ್ಸಿನಲ್ಲಿ ಕಿಚ್ಚೆಬ್ಬಿಸಿತ್ತು. ಗಾಂಧಿ ಮತ್ತವರ ಕಾಂಗ್ರೆಸ್ ನಡೆಸುತ್ತಿದ್ದ ಅಹಿಂಸಾತ್ಮಕ ಚಳುವಳಿ ದೇಶದ ಯುವಜನತೆಯಲ್ಲಿ ಅತೃಪ್ತಿ ಮೂಡಿಸಿತ್ತು. ಬ್ರಿಟಿಷ ಸಾಮ್ರಾಜ್ಯಶಾಹಿಗಳನ್ನು ದೇಶದಿಂದ ಹೊರದಟ್ಟಬೇಕಾದರೆ ಹಿಂಸಾತ್ಮಕ ಕ್ರಮಗಳಿಂದ ಮಾತ್ರ ಸಾಧ್ಯವೆಂಬ ಭಾವನೆ ಯುವಕರಲ್ಲಿ ಸರ್ವಸಾಧಾರಣವಾಗಿ ಉಂಟಾಗಿತ್ತು. ದೇಶದ ಬೇರೆಬೇರೆ ಕಡೆ ಚಿಕ್ಕಚಿಕ್ಕ ಭಯೋತ್ಪಾದಕ ರಹಸ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದವು. 1925 ಆಗಸ್ಟ 9ರ ಕಾಕೋರಿ ಘಟನೆ (ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಕ್ರಾಂತಿಕಾರಿಗಳು ಕಾಕೋರಿ ರೇಲ್ವೆ ನಿಲ್ದಾಣದಲ್ಲಿ ರೈಲೊಂದನ್ನು ತಡೆದು ಸರಕಾರೀ ಹಣವನ್ನು ವಶಪಡಿಸಿಕೊಂಡಿದ್ದರು. ಈ ಮೊಕದ್ದಮೆಯಲ್ಲಿ ಪಂಡಿತ ರಾಮ್‌ಪ್ರಸಾದ್ ಬಿಸ್ಮಿಲ್, ಮತ್ತಿತರ 8 ಜನರ ಮೇಲೆ ಮೊಕದ್ದಮೆ ಹೂಡಲಾಗಿತ್ತು. ಈ ಮೊಕದ್ದಮೆ 18 ತಿಂಗಳು ನಡೆದು 1927 ಡಿಸೆಂಬರ್‌ನಲ್ಲಿ ರಾಮಪ್ರಸಾದ ಬಿಸ್ಮಿಲ್, ಅಷ್ಫರ್ ಉಲ್ಲಾಖಾನ್ ಮತ್ತಿಬ್ಬರನ್ನು ಗಲ್ಲಿಗೇರಿಸುವದರಲ್ಲಿ ಪರ್ಯವಸಾನಗೊಂಡಿತ್ತು.)ಯ ಕ್ರಾಂತಿಕಾರಿಗಳನ್ನು ಗಲ್ಲಿಗೇರಿಸಿ ಬ್ರಿಟಿಷ್ ಸರಕಾರ ಕ್ರಾಂತಿಕಾರಿಗಳನ್ನು ನಿರ್ದಯವಾಗಿ ತುಳಿಯಲು ಯೋಚಿಸಿತ್ತು. ಆದರೆ ದಬ್ಬಾಳಿಕೆ ಹೆಚ್ಚಾದಂತೆಲ್ಲ ಯುವಕರು ಇನ್ನೂ ಧೃಡಸಂಕಲ್ಪದಿಂದ ಧ್ಯೇಯದೆಡೆಗೆ ಮುನ್ನುಗ್ಗಲು ಹಾತೊರೆಯುತ್ತಿದ್ದರು. ಕಾಕೋರಿ ಮೊಕದ್ದಮೆಯಲ್ಲಿ ಬ್ರಿಟಿಷರ ಕೈಗೆ ಸಿಕ್ಕದ ಚಂದ್ರಶೇಖರ ಆಜಾದ್‌ರ ನೇತೃತ್ವದಲ್ಲಿ "ಹಿಂದುಸ್ತಾನ್ ಸೋಷಲಿಸ್ಟ್ ರಿಪಬ್ಲಿಕನ್ ಆರ್ಮಿ" ಎಂಬ ಸಂಘಟನೆ ಯು.ಪಿ., ಬಿಹಾರಗಳಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಪಂಜಾಬ್‌ನ ಲಾಹೋರ್‌ನಲ್ಲಿ ಸರ್ದಾರ್ ಭಗತ್‌ಸಿಂಗರ ನೇತೃತ್ವದಲ್ಲಿ ಕ್ರಾಂತಿಕಾರಿಗಳು ಸಂಘಟಿತರಾಗಿ "ನೌಜವಾನ್ ಭಾರತ ಸಭಾ" ಎಂಬ ಸಂಸ್ಥೆಯನ್ನು ಪ್ರಾರಂಭಿಸಿದ್ದರು. ಗದರ್ ಚಳುವಳಿಯ ವಿಫಲತೆಯಿಂದಾಗಿ ಭಯೋತ್ಪಾದಕ ಚಟುವಟಿಕೆಗಳಿಂದ ಬ್ರಿಟಿಷರನ್ನು ಹೊರಗಟ್ಟುವ ಸಾಧ್ಯತೆಗಳ ಬಗ್ಗೆ ಯುವಕರಲ್ಲಿ ಆಂದೋಲನವೆದ್ದಿತ್ತು. ಹೆಚ್ಚುಹೆಚ್ಚು ಯುವಕರು ರಷ್ಯದಲ್ಲಿ ಕಾಂ. ಲೇನಿನ್‌ರ ನೇತೃತ್ವದಲ್ಲಿ ನಡೆದ ಸಮಾಜವಾದಿ ಕ್ರಾಂತಿಯಿಂದ ಆಕರ್ಷಿತರಾಗಿದ್ದರು. ಹಾಗೂ ಭಾರತದಲ್ಲೂ ದುಡಿಯುವ ಜನತೆಯನ್ನು ಸಂಘಟಿಸಿ ರಾಜಕೀಯ ಅಧಿಕಾರದ ಹೋರಾಟಕ್ಕೆ ಸಜ್ಜುಮಾಡಿ, ಬ್ರಿಟಿಷರನ್ನು ಹೊರಗಟ್ಟುವದು ಹಾಗೂ ದೇಶದಲ್ಲಿ ವೈಜ್ಞಾನಿಕ ಸಮಾಜವಾದ ತರುವ ಸಾಧ್ಯತೆಗಳ ಬಗ್ಗೆ ಯುವಜನತೆ ಯೋಚಿಸುತ್ತಿತ್ತು. ಲಾಹೋರ್‌ನ ನೌಜವಾನ ಭಾರತಸಭಾ ಕಾಲೇಜ್ ವಿದ್ಯಾರ್ಥಿಗಳನ್ನು, ಯುವಜನರನ್ನು ಹೆಚ್ಚುಹೆಚ್ಚು ಆಕರ್ಷಿಸುತ್ತಿತ್ತು. ಇದೇ ವೇಳೆ ಅಮೃತಸರದಲ್ಲಿ "ಕೀರ್ತಿ ಕಿಸಾನ್ ಪಾರ್ಟಿ" ಎಂಬ ಸಂಸ್ಥೆ ಪ್ರಾರಂಭವಾಗಿತ್ತು. ಹಾಗೂ ಈ ಸಂಸ್ಥೆ ಕೀರ್ತಿ ಎಂಬ ಪಂಜಾಬೀ ಮಾಸಿಕ ಪತ್ರಿಕೆಯನ್ನು ಹೊರತರುತ್ತಿತ್ತು. ಪತ್ರಿಕೆಯ ಉದ್ದೇಶ ಪೂರ್ಣ ಸ್ವರಾಜ್ಯ ಸಮಾಜವಾದಗಳ ವಿಚಾರವನ್ನು ಜನರಲ್ಲಿ ಪ್ರಚುರಪಡಿಸುವದಾಗಿತ್ತು. 1915ರ ಗದರ್ ಚಳುವಳಿಯ ವಿಫಲತೆಯ ನಂತರ ಗದರ್ ಕ್ರಾಂತಿಕಾರಿಗಳು ನಿಧಾನವಾಗಿ ಮಾರ್ಕ್ಸವಾದದೆಡೆಗೆ ಆಕರ್ಷಿತರಾಗಿ ಪಂಜಾಬದ ರೈತ ಮತ್ತು ಕಾರ್ಮಿಕರನ್ನು ಸಂಘಟಿಸಿ ಸ್ವಾತಂತ್ರ್ಯ ಹೋರಾಟವನ್ನು ಹೊಸ ರೂಪದಲ್ಲಿ ಕೊಂಡೊಯ್ಯುವ ಹಂಚಿಕೆಯಲ್ಲಿದ್ದರು.

ಕೀರ್ತಿ ಆಡಳಿತವರ್ಗ ಪಂಜಾಬ್‌ನ ಯುವಜನತೆಯ ಸಮಾವೇಶವನ್ನು ಅಮೃತಸರದಲ್ಲಿ 1928 ಏಪ್ರಿಲ್ 11, 12, 13 ರಂದು ಸೇರಿಸಲು ನಿರ್ಧರಿಸಿತು. ಸಮ್ಮೇಳನದ ಪೂರ್ವಸಿದ್ಧತೆಯ ಜವಾಬ್ದಾರಿಯನ್ನು ಬಾಗ್‌ಸಿಂಗ್ ಕೆನಡಿಯನ್ ಮತ್ತು ಕಾಂ. ಸೋಹನ್‌ಸಿಂಗ್ ಜೋಷರು ವಹಿಸಿಕೊಂಡರು. ಪಂಜಾಬ ಯುವಕರಿಗೆ, ಈ ಸಮಾವೇಶಕ್ಕೆ ಆಣಿಯಾಗಲು ಕರೆನೀಡಲಾಯಿತು. ಸಮಾವೇಶದ ಮೂಲ ಉದ್ದೇಶ ಮಾರ್ಕ್ಸವಾದಿ ವಿಚಾರದ ಆಡಿಯಲ್ಲಿ ಸಮಾಜವಾದಿ ಕಾರ್ಯಕ್ರಮಗಳನ್ನು ರೂಪಿಸುವದಾಗಿತ್ತು. ಈ ಸಮಾವೇಶಕ್ಕೆ ಲಾಹೋರಿನ ನೌಜವಾನ್ ಭಾರತಸಭಾ ಮುಂದಾಳು ಭಗತ ಸಿಂಗ್ ಮತ್ತಿತರರು ಹಾಜರಾಗಿದ್ದರು. ಸಮಾವೇಶದ ಅಧ್ಯಕ್ಷರಾಗಿ ಗದರ್ ಕ್ರಾಂತಿಕಾರಿ ಕೇದಾರ್‌ನಾಥ್ ಸೆಹಗಾಲ್‌ರು ಆಯ್ಕೆಯಾದರು. ನೂರಾರು ಹಿಂದೂ, ಸಿಕ್ ಮತ್ತು ಮುಸ್ಲಿಮ್ ಯುವಕರು ಸಮಾವೇಶಕ್ಕೆ ಸೇರಿದ್ದರು. ಕೇದಾರ್ ಸೆಹಗಾಲ್‌ರು ತಮ್ಮ ಅಧ್ಯಕ್ಷ ಭಾಷಣದಲ್ಲಿ, "ಪಂಜಾಬ್ ಯುವಕರ ಕ್ರಾಂತಿಕಾರಿ ಪರಂಪರೆಯನ್ನು ವಿವರಿಸುತ್ತಾ, ಪ್ರಸಕ್ತ ರಾಜಕೀಯ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಕರೆ ಕೊಟ್ಟರು" ಪಂಜಾಬ್‌ನಲ್ಲಿ ಬ್ರಿಟಿಷ್ ಮತ್ತವರ ಏಜಂಟರಿಂದ ಪ್ರಚೋದಿತ ಕೋಮುವಾದಿ ಗಲಭೆಗಳಿಗೆ ತಮ್ಮ ಕಳವಳ ವ್ಯಕ್ತಪಡಿಸುತ್ತ ಜಾತೀಯತೆಯನ್ನು ಧಿಕ್ಕರಿಸಿ ಜನರನ್ನು ಸಂಘಟಿಸುವ ಅವಶ್ಯಕತೆಯನ್ನು ಯುವಕರಿಗೆ ತಿಳಿಹೇಳಿದರು. ಪೂರ್ಣ ಸ್ವರಾಜ್ಯ ಮತ್ತು ಸಮಾಜವಾದ ವಿಚಾರಗಳಿಗೆ ಅಂಟಿಕೊಳ್ಳಬೇಕೆಂಬುದು ಯುವಜನರ ಅಭಿಪ್ರಾಯವಾಗಿತ್ತು. ಸಂಘಟನೆ ಜಾತ್ಯಾತೀತತೆ, ಪ್ರಜಾಪ್ರಭುತ್ವಕ್ಕೆ ಬದ್ಧರಾಗಬೇಕೆಂಬುದು ತೀರ್ಮಾನಿಸಲಾಯಿತು. ಜಾತೀಯ ಭಾವನೆಗಳನ್ನು ಒಳಗೊಂಡ ಯಾರನ್ನೂ ಸಂಘಟನೆಗೆ ಸೇರಿಸದಿರಲು ತೀರ್ಮಾನಿಸಲಾಯಿತು. ಹಾಗೂ ಸಂಘಟನೆಗೆ "ಪಂಜಾಬ್ ನೌಜವಾನ ಭಾರತ ಸಭಾ" ಎಂದು ಹೆಸರಿಡಲಾಯಿತು. ಅಮೃತಸರ ಸಂಘಟನೆಯ ಕೇಂದ್ರಸ್ಥಳವೆಂದು ತೀರ್ಮಾನಿಸಲಾಯಿತು. ಸೈಮನ್ ಕಮಿಷನ್ ಬಗ್ಗೆ, ರಾಷ್ಟ್ರಧ್ವಜದ ಬಗ್ಗೆ, ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವ ಬಗ್ಗೆ ಮತ್ತು ಧಾರ್ಮಿಕ ಅಸ್ಪೃಶ್ಯತೆ ಮತ್ತಿತರ 9 ನಿರ್ಣಯಗಳನ್ನು ಸ್ವೀಕರಿಸಲಾಯಿತು. ಪ್ರತಿ ಹಳ್ಳಿ, ಪ್ರತಿಜಿಲ್ಲೆಗಳಲ್ಲಿ ಯುವಕರನ್ನು ಸಂಘಟನೆ ಪೂರ್ಣ ಸ್ವರಾಜ್ಯವನ್ನು ಧ್ಯೇಯವಾಗಿಟ್ಟುಕೊಂಡು ದೇಶದ ಇತರ ಎಡಸಂಘಟನೆಗಳೊಂದಿಗೆ ಸಹಕರಿಸಿ ರೈತ ಕಾರ್ಮಿಕ ಸ್ಥಾಪಿಸುವತ್ತ ಮುನ್ನಡೆಯಬೇಕೆಂದು ನಿರ್ಧರಿಸಲಾಯಿತು.

ಸಮಾವೇಶದಲ್ಲಿ ರೂಪಗೊಂಡ ಕಾರ್ಯಕ್ರಮಗಳ ಆಧಾರದ ಮೇಲೆ ಅಮೃತಸರದಲ್ಲಿ "ಮೆಕಾನಿಕಲ್ ಎಂಜಿನೀಯರಿಂಗ್ ಯೂನಿಯನ್", "ರೈಲ್ವೇ ಮೋಟರ್ಸ್ ಯೂನಿಯನ್", ಮತ್ತು "ಡ್ರೆಸ್ ವರ್ಕರ್ಸ ಯೂನಿಯನ್" ಮತ್ತಿತರ ಕೆಲಸಗಾರರ ಮತ್ತು ರೈತರ ಸಾಮೂಹಿಕ ಸಂಘಟನೆಗಳನ್ನು ಅವರ ಆರ್ಥಿಕ ಬೇಡಿಕೆಗಳ ಆಧಾರದ ಮೇಲೆ ಸಂಘಟಿಸಿ ಅವರನ್ನು ರಾಜಕೀಯ ಸ್ವಾತಂತ್ರ್ಯದ ಬೇಡಿಕೆಗೆ ಮುನ್ನಡೆಸುವ ಕಾರ್ಯಗಳು ಚುರುಕಾಗಿ ಪ್ರಾರಂಭವಾದವು.

1920ರ ದಶಕದ ಯುವವೃಂದ ಕಾಂಗ್ರೆಸ್ ಪಕ್ಷದ ಬಗ್ಗೆ ಅಸಹನೆ ವ್ಯಕ್ತಪಡಿಸುತ್ತಿತ್ತು. ಕಾಂಗ್ರೆಸ್ ಉದಾರ ಮನೋಭಾವದ ಸಂಘಟನೆಯಾಗಿದ್ದು ಬ್ರಿಟಿಷ್ ಸಾಮ್ರಾಜ್ಯವಾದಿಗಳ ಬಗ್ಗೆ ಎಲ್ಲ ತರದ ಭ್ರಮೆಗಳನ್ನು ಹೊಂದಿತ್ತು. ಕಾರಣ ಯುವಕರು ಕಾಂಗ್ರೆಸ್ ಪಕ್ಷದ ರಾಜೀಧೋರಣೆಯನ್ನು ಸಂಪೂರ್ಣ ತಿರಸ್ಕರಿಸಿ ಬ್ರಿಟಿಷರಿಗೆ ಜೋರಾದ ಏಟನ್ನು ಕೊಡುವ ಕ್ರಾಂತಿಕಾರಿ ಮನೋಭಾವ ಹೊಂದಿದ್ದರು. ನೌಜವಾನ್ ಭಾರತಸಭಾದ ಕೆಲತಿಂಗಳ ಚಟುವಟಿಕೆನಂತರ ಸರ್ದಾರ್ ಭಗತ್ ಸಿಂಗ್ ಪ್ರತಿನಿಧಿಸುತ್ತಿದ್ದ ಒಂದು ಗುಂಪು, ನಿಧಾನಗತಿಯದಾದ ರೈತ ಕಾರ್ಮಿಕ ಸಂಘಟನೆ ಬಗ್ಗೆ ಅತೃಪ್ತಿ ತೋರಿಸುತ್ತಿದ್ದರು. ಅವರಿಗೆ ತಕ್ಷಣ ಕ್ರಾಂತಿಯಾಗುವದು ಬೇಕಾಗಿತ್ತು. ಬಾಂಬ್ ಮತ್ತು ಪಿಸ್ತೂಲ್‌ಗಳ ಮೂಲಕ ಬ್ರಿಟಿಷ್ ಸಾಮ್ರಾಜ್ಯಶಾಹಿಗಳನ್ನು ಮರ್ಧಿಸಿ ವಿದ್ಯಾರ್ಥಿಗಳನ್ನು ಯುವಕರನ್ನು ಎಚ್ಚರಿಸಬೇಕೆಂಬುದರತ್ತ ಅವರ ಯೋಚನೆ ಸಾಗಿತ್ತು. ಈ ಉದ್ದೇಶಕ್ಕಾಗಿ ಅವರು ತಮ್ಮನ್ನು ಸಂಪೂರ್ಣ ಸಮರ್ಪಿಸಿಕೊಳ್ಳಲು ಸಿದ್ಧರಾದರಲ್ಲದೇ ಯಾವುದೇ ತ್ಯಾಗಕ್ಕೂ ತಯಾರಾದರು. ಭಯೋತ್ಪಾದಕ ಚಟುವಟಿಕೆಗಳಿಂದ ಬ್ರಿಟಿಷ್ ಸಾಮ್ರಾಜ್ಯವಾದಿಗಳ ಹೃದಯದಲ್ಲಿ ಭಯವನ್ನು ಹುಟ್ಟಿಸಲು ಸಾಧ್ಯ ಅಲ್ಲದೇ ಬಲಾತ್ಕಾರದಿಂದ ಮಾತ್ರ ಉದ್ದೇಶ ಸಾಧಿಸಲು ಸಾಧ್ಯವೆಂಬುದು ಅವರ ಯೋಚನಾಲಹರಿಯಾಗಿತ್ತು. ಭಾವನಾತ್ಮಕವಾಗಿ ಉದ್ರೇಕಗೊಂಡು ಪರಿಸ್ಥಿತಿಯನ್ನು ಸರಿಯಾಗಿ ಅರ್ಥೈಸಿಕೊಳ್ಳಲು ಅವರಿಗೆ ಸಾಧ್ಯವಾಗದೇ ಹೋಯಿತು. ಇದೇ ರೀತಿಯ ಪಕ್ವವಲ್ಲದ ವಿಚಾರಸರಣಿ ಆ ಕಾಲದ ಹೆಚ್ಚಿನ ಯುವಕರದಾಗಿತ್ತು. ನೌಜವಾನ ಭಾರತಸಭಾದ ಇನ್ನೊಂದು ಗುಂಪಿನ ವಿಚಾರ ಸರಣಿ ಮಾರ್ಕ್ಸವಾದಿ ದೃಷ್ಟಿಕೋನದ್ದಾಗಿತ್ತು. ಈ ಗುಂಪು ಭಯೋತ್ಪಾದನೆ ಚಟುವಟಿಕೆ ಮತ್ತು ನೈಜ ಭಾರತದ ಪ್ರತಿನಿಧಿಗಳಾದ ಶೋಷಣೆಗೆ ಒಳಪಟ್ಟಿರುವ ರೈತ ಕಾರ್ಮಿಕ ಸಂಘಟನೆಯ ಅಗತ್ಯತೆಗಳ ನಡುವಿನ ವ್ಯತ್ಯಾಸ ಚೆನ್ನಾಗಿ ಅರಿತಿತ್ತು. ಈ ಗುಂಪಿಗೆ ಗದರ್ ಚಳುವಳಿಯ ವಿಫಲತೆಗೆ ಕಾರಣಗಳನ್ನು ಮನಗಂಡಿತ್ತು. ಬಹುಮತದ್ದಾದ ಈ ಗುಂಪು (Kirti group) ತನ್ನ ಗೊತ್ತಾದ ಕಾರ್ಯಕ್ರಮಗಳ ಪ್ರಕಾರ ರೈತಕಾರ್ಮಿಕರನ್ನು ಸಂಘಟಿಸುವ ಪ್ರಯತ್ನದಲ್ಲಿ ಮಗ್ನವಾಗಿತ್ತು. ಭಗತ್‌ಸಿಂಗ್ ಮತ್ತವರ ಗುಂಪು ತಾವು ನಂಬಿದ್ದ ಆದರ್ಶವನ್ನು ಕಾರ್ಯರೂಪಕ್ಕೆ ತರಲು ಹಾತೊರೆಯುತ್ತಿದ್ದರು.

ಪಂಜಾಬಿ "ಕೀರ್ತಿ" ಪತ್ರಿಕೆಯ ಮುಖ್ಯ ಸಂಪಾದಕರಾಗಿ ಕಾಂ. ಸೋಹನ್‌ಸಿಂಗ ಜೋಷಿ ಮತ್ತು ಉಪಸಂಪಾದಕರಾಗಿ ಫಿರೋಜ್‌ಪಾಮನಸ್ಸೂರ ಕಾರ್ಯನಿರ್ವಹಿಸುತ್ತಿದ್ದರು. ಕೀರ್ತಿ ಪತ್ರಿಕೆಯ ಉರ್ದು ಸಂಚಿಕೆಯನ್ನು ತರಲು ಯೋಚಿಸಿ ಭಗತ್‌ಸಿಂಗ್‌ರನ್ನು ಕೀರ್ತಿ ಸಂಪಾದಕ ಬಳಗಕ್ಕೆ ಸೇರಿಸಿಕೊಳ್ಳಲಾಯಿತು. ಈ ಸಮಯದಲ್ಲಿ ಭಗತ್‌ಸಿಂಗರು ತಮ್ಮ ವೈಯಕ್ತಿಕ ಸಮಸ್ಯೆಯೊಂದನ್ನು ಎದುರಿಸುತ್ತಿದ್ದರು. ಭಗತ್‌ಸಿಂಗರ ತಂದೆ ಸರ್ದಾರ್ ಕಿಷನ್ ಸಿಂಗರಿಗೆ ತಮ್ಮ ಮಗ ರಹಸ್ಯ ಸಂಸ್ಥೆಗಳೊಡನೆ ಸಂಪರ್ಕ ಇಟ್ಟುಕೊಳ್ಳುವದು ಇಷ್ಟವಿರಲಿಲ್ಲ. ರಹಸ್ಯ ಸಂಸ್ಥೆಗಳೊಡಗಿನ ಸಂಪರ್ಕ ಕಡಿದುಕೊಂಡು ಕಾಂಗ್ರೆಸ್ ಜೊತೆಗೂಡಿ ಕೆಲಸ ಮಾಡಲು ಭಗತ್‌ಸಿಂಗರನ್ನು ಒತ್ತಾಯಿಸುತ್ತಿದ್ದರು. ಆದರೆ ಈ ವೇಳೆಗಾಗಲೇ ಭಗತ್‌ಸಿಂಗ್ ಮತ್ತವರ ಸಂಗಾತಿಗಳು (ಸುಖದೇವ್, ಎಹಸಾನ್ ಇಲಾಹಿ, ಭಗವತೀ ಚರಣ, ಧನವಂತ್ರಿ ಮತ್ತಿತರರು) ಯು. ಪಿ. ಬಿಹಾರ ಮತ್ತು ಬಂಗಾಲಗಳಲ್ಲಿ "ಹಿಂದುಸ್ತಾನ ರಿಪಬ್ಲಿಕನ್ ಸೋಷಲಿಸ್ಟ್ ಆರ್ಮಿ" ಮತ್ತು "ಅನುಶೀಲನ ಸಮಿತಿ"ಗಳೊಟ್ಟಿಗೆ ತಮ್ಮ ಸಂಪರ್ಕ ಸ್ಥಾಪಿಸಿದರು. ಕಾನ್ಪುರದ ಮಹಾನ್ ದೇಶಭಕ್ತ ಶ್ರೀ ಗಣೇಶ್ ಸಿಂಗರ ವಿದ್ಯಾರ್ಥಿಯವರೊಟ್ಟಿಗೂ ಸಂಬಂಧ ಬೆಳೆಸಿದರು. ಭಗತ್‌ಸಿಂಗರು ಕಾಂ. ಸೋಹನ್ ಸಿಂಗರ ಒತ್ತಾಯದ ಮೇರೆಗೆ ಕೀರ್ತಿ ಸಂಪಾದಕ ಬಳಗಕ್ಕೆ ಸೇರಿ ಕೇವಲ 3 ತಿಂಗಳು ಕೆಲಸಮಾಡಿದರು.

(24ನೇ ಪುಟ ನೋಡಿ)

ಸಮಾಜ ಬದಲಾವಣೆಯಲ್ಲಿ ಯುವಜನರ ಪಾತ್ರವೇನು ?

ಡಾ|| ಪಿ. ಕೆ. ಆರ್. ವಾರಿಯರ್

ಭಾಷಣ ಮಾಡುವುದರಲ್ಲಿ ನನಗೆ ಆಸಕ್ತಿ ಕಡಿಮೆ. ವಿದ್ಯಾರ್ಥಿಗಳಿಗೆ ಭಾಷಣ ಮಾಡುವುದು (ಪಾಠ ಹೇಳುವುದು) ನನ್ನ ಉದ್ಯೋಗ. ಆದರೆ ಬರೇ ಭಾಷಣದಿಂದ ಏನೂ ಸಾಧಿಸಿದಂತಾಗುವುದಿಲ್ಲ. ನಾನು ಬಹಳ ದೊಡ್ಡ ಭಾಷಣ ಮಾಡಬಹುದು. ಅದನ್ನು ಕೇಳಿ ಭಾಷಣ ಚೆನ್ನಾಗಿದೆಯೆಂದು ಚಪ್ಪಾಳೆ ತಟ್ಟಿ ನೀವೆಲ್ಲಾ ಹೊರಟು ಹೋಗಬಹುದು. ಕೆಲವೊಮ್ಮೆ ಇದೊಂದು ಸಂಗೀತ ಕಚೇರಿ ಇದ್ದಂತೆ. ಶ್ರೀಮತಿ ಎಂ. ಎಸ್. ಸುಬ್ಬಲಕ್ಷ್ಮಿ ಚೆನ್ನಾಗಿ ಹಾಡುತ್ತಾರೆ, ಅಮೇರಿಕಾದಲ್ಲೂ ಹಾಡಿ ಬರುತ್ತಾರೆ. ಇಲ್ಲಿಯೂ ಹಾಡಬಹುದು. ಆದರೆ ಸಂಗೀತ ಚೆನ್ನಾಗಿತ್ತೆಂದು ಹೇಳುವುದಕ್ಕಿಂತ ಹೆಚ್ಚಿನ ಪರಿಣಾಮವೇನೂ ಶ್ರೋತೃಗಳ ಮೇಲೆ ಆಗುವುದಿಲ್ಲ. ಭಾಷಣಗಳಿಗಿಂತ ಹೆಚ್ಚಾಗಿ ನಾನು ಚರ್ಚೆಗಳನ್ನೂ, ಅಭಿಪ್ರಾಯ ವಿನಿಮಯವನ್ನೂ ಬಯಸುತ್ತೇನೆ. "ಈ ದೇಶದ ಪರಿಸ್ಥಿತಿ ಹೇಗಿದೆ? ನಾವೆಲ್ಲರೂ ಸಂತೋಷದಲ್ಲಿದ್ದೇವೆಯೆ? ನಮ್ಮ ಸುತ್ತಲೂ ಕಾಣುವ ಕಷ್ಟಕಾರ್ಪಣ್ಯಗಳನ್ನು ಪರಿಹರಿಸುವ ಬಗೆಯೇನು? ಈ ಸಾಮಾಜಿಕ ವ್ಯವಸ್ಥೆಯನ್ನು ಬದಲಾಯಿಸಬೇಕೆ? ಸಮಾಜದಲ್ಲಿ ನೆಮ್ಮದಿಯಿರಬೇಕಾದರೆ ಅದರಲ್ಲಿ ಯುವಕರಾದ ನಿಮ್ಮ ಪಾತ್ರವೇನು? ಈ ಪ್ರಶ್ನೆಗಳಿಗೆ ಉತ್ತರ ಹುಡುಕಬೇಕಾಗಿದೆ",

ಕರ್ನಾಟಕದಲ್ಲಿ ಪುರೋಗಾಮಿ ಚಳುವಳಿ ತುಂಬಾ ದುರ್ಬಲವಾಗಿದೆ. ಇದಕ್ಕೆ ಕಾರಣವನ್ನು ಹುಡುಕುವಾಗ ನನಗೆ 1935-36ರ ಕಾಲಘಟ್ಟದ ನೆನಪಾಗುತ್ತಿದೆ. ಆಗ ನಾನು ಹೈಸ್ಕೂಲು ವಿದ್ಯಾರ್ಥಿಯಾಗಿದ್ದೆ. ಬ್ರಿಟಿಷರನ್ನು ಈ ದೇಶದಿಂದ ಹೊರಗೆ ಅಟ್ಟಲು ದೇಶಾದ್ಯಂತ ಸ್ವಾತಂತ್ರ್ಯ ಹೋರಾಟ ನಡೆಯುತ್ತಿತ್ತು. ಕರ್ನಾಟಕದಲ್ಲೂ, ಈ ಚಳುವಳಿ ನಡೆಯುತ್ತಿದ್ದು, ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಬಲವಾದ ಹೋರಾಟ ನಡೆಯುತ್ತಿತ್ತು. ಒಬ್ಬ ವಿದ್ಯಾರ್ಥಿಯಾಗಿ ನಾನೂ ಈ ರಾಷ್ಟ್ರೀಯ ಹೋರಾಟದೆಡೆಗೆ ಆಕರ್ಷಿತನಾದೆ. ಆ ಸಮಯದಲ್ಲಿ ಕೇರಳದಲ್ಲಿ ಪ್ರಪ್ರಥಮವಾಗಿ ಒಂದು ಮುಷ್ಕರ ನಡೆಯಿತು. ಮುಷ್ಕರ ನಡೆದದ್ದು ಬಟ್ಟೆಗಿರಣಿಯಲ್ಲಿ. ಆ ಗಿರಣಿಯಲ್ಲಿ 2000 ಕಾರ್ಮಿಕರು ಕೆಲಸಮಾಡುತ್ತಿದ್ದರು. ಒಂದು ದಿನ ನಾನು ಅಲ್ಲಿಗೆ ಹೋಗಿ ನೋಡುವಾಗ, ಗಿರಣಿಯ ಮುಂದಿನ ಗೇಟಿನ ಬಳಿ ಜನರು ನಿಂತಿದ್ದರು. ಅವರ ಪೈಕಿ ಒಬ್ಬರು ಇತರರ ಬೆನ್ನು ತಟ್ಟುತ್ತಾ ಅವರೊಡನೆ ಸಂಭಾಷಣೆಯಲ್ಲಿ ನಿರತರಾಗಿದ್ದರು. ನಿಮಗೆ ಅತೀ ಕಡಿಮೆ ಕೂಲಿ ಸಿಗುತ್ತಿದೆ. ನೀವು ಉಪವಾಸ ಬೀಳುತ್ತಿದ್ದೀರಿ. ಇದಕ್ಕೆ ಕಾರಣ ಏನು? ಮಿಲ್ಲಿನ ಮಾಲೀಕ ನಿಮ್ಮನ್ನು ಶೋಷಿಸುತ್ತಿದ್ದಾನೆ. ಮಾತ್ರವಲ್ಲ, ಈ ಮಾಲಕರಿಗೆ ಬ್ರಿಟಿಷ್ ಸರಕಾರದ ಬೆಂಬಲವಿದೆ, ಬ್ರಿಟಿಷರು ನಮ್ಮನ್ನು ಹಲವು ವಿಧದಿಂದ ಸುಲಿಗೆ ಮಾಡುತ್ತಿದ್ದಾರೆ. ಹೀಗೆ ಅವರು ಬಹಳ ತಾಳ್ಮೆಯಿಂದ ವಿವರಿಸುತ್ತಿದ್ದರು. ಮಿಲ್ಲಿನ ಇತರ ಕಾರ್ಮಿಕರು ಹೊರಗೆ ಬರುವಾಗ ಈ ಎಂಟು ಮಂದಿಯತ್ತ ಒಮ್ಮೆ ನೋಡಿ, ನೇರವಾಗಿ ತಮ್ಮ ದಾರಿ ಹಿಡಿಯುತ್ತಿದ್ದರು. ಅವರು ಯಾರೂ ಈ ಜನರ ಬಳಿ ಒಂದು ನಿಮಿಷವಾದರೂ ನಿಲ್ಲುತ್ತಿರಲಿಲ್ಲ. ಹೀಗೆ ಎರಡು ಸಾವಿರ ಕಾರ್ಮಿಕರಿರುವ ಮಿಲ್ಲಿನ ಬಳಿ ಬರೇ ಎಂಟು ಮಂದಿಯೊಂದಿಗೆ ಮಾತನಾಡುತ್ತಾ ನಿಂತ ಈ ವ್ಯಕ್ತಿ ಯಾರೆಂದು ತಿಳಿಯಲು ನನಗೆ ಕುತೂಹಲವುಂಟಾಯಿತು. ಒಬ್ಬನ ಬಳಿಗೆ ಹೋಗಿ ಮೆಲ್ಲನೆ ಕೇಳಿದೆ. ಆ ವ್ಯಕ್ತಿಯ ಹೆಸರು ಎ. ಕೆ. ಗೋಪಾಲನ್ ಎಂದು ಗೊತ್ತಾಯಿತು.

ಎರಡು ತಿಂಗಳುಗಳ ನಂತರ ನಮ್ಮ ಮನೆಯ ಮುಂದಿನಿಂದ ಒಂದು ದೊಡ್ಡ ಮೆರವಣಿಗೆ ಹೋಗುತ್ತಿರುವುದನ್ನು ನೋಡಿದೆ. ಮೆರವಣಿಗೆಯಲ್ಲಿ ನಾಲ್ಕು ಸಾವಿರದಷ್ಟು ಜನರಿದ್ದರು. ಮೆರವಣಿಗೆಯ ಮುಂಚೂಣಿಯಲ್ಲಿ ಎ. ಕೆ. ಜಿ. ನಡೆಯುತ್ತಿದ್ದರು. ಅವರು ಒಂದು ಹಾಡನ್ನು ಗಟ್ಟಿಯಾಗಿ ಹಾಡುತ್ತಿದ್ದರು. ಇತರರು ಅವರೊಂದಿಗೆ ಧ್ವನಿಗೂಡಿಸುತ್ತಿದ್ದರು. ನಾವು ಗಿರಣಿ ಕಾರ್ಮಿಕರು. ನಾವು ದಿನವಿಡೀ ದುಡಿದರೂ ಉಪವಾಸವಿರುತ್ತೇವೆ. ಮಾಲಕರು ಮಾಡುವ ಶೋಷಣೆಗಿದಿರಾಗಿ ಮುಷ್ಕರ ಮಾಡುತ್ತಿದ್ದೇವೆ. ಕಾರ್ಮಿಕರ ಸುಲಿಗೆ ಕೊನೆಗೊಳ್ಳಬೇಕಾದರೆ ಬ್ರಿಟಿಷರು ಈ ದೇಶಬಿಟ್ಟು ತೊಲಗಬೇಕು, ಇತ್ಯಾದಿ ಅರ್ಥವಿರುವ ಸಾಲುಗಳನ್ನು ಅವರು ಹಾಡುತ್ತಿದ್ದರು. ನನಗೆ ಆಶ್ಚರ್ಯವಾಯಿತು. ಕೇವಲ ಎಂಟು ಮಂದಿಯಲ್ಲಿ ಸಂಘಟನಾ ಪ್ರಜ್ಞೆ ಹುಟ್ಟಿಸುವ ಮೂಲಕ ಆರಂಭಿಸಿದ ಚಳುವಳಿಯಲ್ಲಿ ಬರೇ ಎರಡು ತಿಂಗಳ ಅವಧಿಯಲ್ಲಿ ಎರಡು ಸಾವಿರ ಕಾರ್ಮಿಕರನ್ನು ಮಾತ್ರವಲ್ಲದೆ ಅವರ ಬೆಂಬಲಕ್ಕಾಗಿ ಇತರ ಎರಡು ಸಾವಿರ ಜನಸಾಮಾನ್ಯರನ್ನೂ ಒಟ್ಟು ಸೇರಿಸಿ ಮೆರವಣಿಗೆ ನಡೆಸಲು ಅವರಿಗೆ ಸಾಧ್ಯವಾಗಿತ್ತು.

"ಜನಸಾಮಾನ್ಯರ ಮುಂದೆ ಎರಡು ಉದ್ದೇಶಗಳನ್ನು ಇಡಲಾಗಿತ್ತು. ಕಾರ್ಮಿಕರ ಕೂಲಿ ಹೆಚ್ಚಿಸಬೇಕೆಂಬುದು ಮೊದಲನೆಯ ಉದ್ದೇಶ. ಬ್ರಿಟಿಷರನ್ನು ದೇಶದಿಂದ ತೊಲಗಿಸಬೇಕೆಂಬುದು ಎರಡನೆಯ ಉದ್ದೇಶ". ಕೇರಳದಲ್ಲಿ ಆ ದಿನಗಳಲ್ಲಿ ರಾಜಕೀಯ ಪ್ರಜ್ಞೆ ಹೆಚ್ಚೇನೂ ಇರಲಿಲ್ಲ. ಎ. ಕೆ. ಜಿ. ಪ್ರತಿಯೊಬ್ಬರೊಡನೆಯೂ ಚರ್ಚಿಸುತ್ತಿದ್ದರು. ನೀನೇಕೆ ಉಪವಾಸವಿದ್ದೀ? ನಿನ್ನ ಮಕ್ಕಳನ್ನು ಶಾಲೆಗೆ ಕಳುಹಿಸಲು ಯಾಕೆ ಸಾಧ್ಯವಾಗುವುದಿಲ್ಲ? ನಿನ್ನ ಕುಟುಂಬದಲ್ಲಿ ಕಾಯಿಲೆ ಬಂದರೆ ಔಷಧ ತರಲು ಯಾಕೆ ಸಾಧ್ಯವಾಗುವುದಿಲ್ಲ? ಇದಕ್ಕೆಲ್ಲಾ ಕಾರಣ ಬಂಡವಾಳಶಾಹಿಗಳು ನಿನ್ನನ್ನು ಶೋಷಿಸುತ್ತಿರುವುದೇ ಆಗಿದೆ, ಬ್ರಿಟಿಷ್ ಸರಕಾರವು ಇಲ್ಲಿನ ಬಂಡವಾಳಶಾಹಿಗಳನ್ನು ಪೋಷಿಸುತ್ತಿದೆ. ಬ್ರಿಟಿಷರು ನಮ್ಮನ್ನು ಗುಲಾಮರನ್ನಾಗಿ ಮಾಡಿದ್ದಾರೆ. ಇದರಿಂದ ಬಿಡುಗಡೆ ಸಿಗಬೇಕಾದರೆ ನಾವೆಲ್ಲಾ ಸಂಘಟಿತರಾಗಬೇಕು. ಈರೀತಿ ಮಾತನಾಡುತ್ತಾ ನಿರಂತರವಾಗಿ ಅವರು ಜನರಲ್ಲಿ ಜಾಗೃತಿ ಹುಟ್ಟಿಸಿದರು.

ಮುಂದೆ ಎ. ಕೆ. ಜಿ. ಹೇಗೆ ಕಾರ್ಮಿಕವರ್ಗದ ಮಹಾನ್ ನಾಯಕನಾಗಿ ಬೆಳೆದುಬಂದರೆಂಬುದು ನಿಮಗೆ ಗೊತ್ತಿರಬಹುದು, ವೆಲ್ಲೂರು ಜೈಲಿನಲ್ಲಿದ್ದಾಗ ಜೈಲಿನ ಗೋಡೆ ಕೊರೆದು ತಪ್ಪಿಸಿ ಹೊರಬಂದ ಎ. ಕೆ. ಜಿ. 1946ರ ತನಕ ಭೂಗತರಾಗಿದ್ದರು. ಬ್ರಿಟಿಷ್ ಸರಕಾರವು ಅವರನ್ನು ಹಿಡಿದುಕೊಟ್ಟವರಿಗೆ ಒಂದುಸಾವಿರ ರೂಪಾಯಿ ಬಹುಮಾನ ಕೊಡುವುದಾಗಿ ಘೋಷಿಸಿತ್ತು. ಅಂದಿನ ಒಂದು ಸಾವಿರ ರೂಪಾಯಿಯೆಂದರೆ ಇವತ್ತಿನ ಒಂದು ಲಕ್ಷದಷ್ಟು ದೊಡ್ಡದು. ಆದರೆ ಜನರು ಎ. ಕೆ. ಜಿ. ಯನ್ನು ಪ್ರೀತಿಸುತ್ತಿದ್ದರು. ಅವರು ಎ.ಕೆ.ಜಿ.ಗೆ ರಕ್ಷಣೆ ನೀಡಿದರು. ಒಂದು ಸಾವಿರ ರೂಪಾಯಿಯ ಆಮಿಷಕ್ಕೆ ಯಾರೂ ಒಳಗಾಗಲಿಲ್ಲ.

1946ರಲ್ಲಿ ಅವರ ಮೇಲಿನ ವಾರಂಟು ರದ್ದಾದ ಮೇಲೆ ಎ.ಕೆ.ಜಿ ಮದ್ರಾಸಿನಲ್ಲಿ ಒಂದು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದ್ದರು. ಆ ಸಭೆಯ ಅಧ್ಯಕ್ಷತೆ ವಹಿಸಲು ನನ್ನನ್ನು ಕರೆಯಲಾಯಿತು. ನನಗೆ ಮುಜುಗರವಾಯಿತು. ಇಷ್ಟು ದೊಡ್ಡ ವ್ಯಕ್ತಿಯ ಮುಂದೆ ನಾನು ತೃಣಸಮಾನ ನಾನು ಅಧ್ಯಕ್ಷತೆ ವಹಿಸುವುದೆ? ನನ್ನ ಮುಜುಗರವನ್ನು ಎ. ಕೆ. ಜಿ. ಅರ್ಥಮಾಡಿಕೊಂಡರು. ನನ್ನ ಬೆನ್ನು ತಟ್ಟಿ ಪ್ರೋತ್ಸಾಹದ ಮಾತುಗಳನ್ನಾಡಿದರು. ಕೆಲವೇ ಕ್ಷಣಗಳಲ್ಲಿ ಅವರು ನನ್ನ ಒಲವಿನ ಸಂಗಾತಿಯಾದರು. ನಾನು ಅವರೊಡನೆ ಒಂದು ಪ್ರಶ್ನೆ ಕೇಳಿದೆ ಅದು 1936 ರಿಂದಲೂ ನನ್ನ ತಲೆ ತಿನ್ನುತ್ತಿದ್ದ ಪ್ರಶ್ನೆ. "ಬರೇ ಎಂಟು ಮಂದಿ ಕಾರ್ಮಿಕರ ಮೂಲಕ ನೀವು ಹೇಗೆ 2000 ಕಾರ್ಮಿಕರನ್ನೂ ಇತರ ಸಾವಿರಾರು ಬೆಂಬಲಿಗರನ್ನೂ ಒಟ್ಟುಸೇರಿಸಿದಿರಿ ಎಂಬುದೇ ನನ್ನ ಪ್ರಶ್ನೆ. ಎ. ಕೆ. ಜಿ. ಉತ್ತರಿಸಿದರು: ಅವರೆಲ್ಲರೂ ಸಮಾನವಾಗಿ ಕಷ್ಟವನ್ನನುಭವಿಸುವವರು. ಎಂಟು ಮಂದಿಯಲ್ಲಿ ಸಂಘಟನಾಪ್ರಜ್ಞೆ ಮೂಡಿದಾಗ ಅವರು ಇತರ ಎಂಟು ಮಂದಿಯನ್ನು ತಯಾರು ಮಾಡುತ್ತಾರೆ. ಆಗ ಹದಿನಾರು ಮಂದಿ ನಮ್ಮೊಂದಿಗೆ ಬಂದಂತಾಯಿತು, ಈ ಹದಿನಾರು ಮಂದಿ ಇತರ ಹದಿನಾರು ಮಂದಿಯೊಂದಿಗೆ ಮಾತನಾಡುತ್ತಾರೆ. ಸರಿಯಾದ ತರಬೇತಿ ಮತ್ತು ಮಾರ್ಗದರ್ಶನವಿದ್ದರೆ ಈರೀತಿಯಲ್ಲಿ ಸಾವಿರಾರು ಜನರು ಸಂಘಟಿತರಾಗುತ್ತಾರೆ ಎಂದರು",

ಎ. ಕೆ. ಜಿ. ಹುಟ್ಟಿದ್ದು ಕಲ್ಯಾಶೇರಿಯಲ್ಲಿ, ಸ್ವಲ್ಪ ಕಾಲ ಅವರು ಅದೇ ಊರಿನಲ್ಲಿ ಪ್ರಾಥಮಿಕ ಶಾಲೆಯ ಅಧ್ಯಾಪಕರಾಗಿದ್ದರು. ಆಗ ಆ ಊರಿನ ಹೆಸರು ಯಾರಿಗೂ ಗೊತ್ತಿರಲಿಲ್ಲ. ಆದರೆ ಮುಂದೆ ಕಲ್ಯಾಶೇರಿಯು ರೈತ ಚಳುವಳಿಯ ಪ್ರಮುಖ ಕೇಂದ್ರಗಳಲ್ಲೊಂದಾಯಿತು. 1939 ರಲ್ಲಿ ಕೇರಳದ ಕಾಂಗ್ರೆಸ್ ಅಧಿವೇಶನವು ಕಲ್ಯಾಶೇರಿಯಲ್ಲಿ ಜರಗಿತು. ಆಗ ಎ. ಕೆ. ಜಿ., ಇ. ಎಂ. ಎಸ್. ಮೊದಲಾದವರೆಲ್ಲರೂ ಕಾಂಗ್ರೆಸ್ಸಿನಲ್ಲಿದ್ದರು. ಈ ಸಮ್ಮೇಳನವು ಒಂದು ಅತೀ ಮಹತ್ವದ ತೀರ್ಮಾನವನ್ನು ಕೈಗೊಂಡಿತು. "ಸ್ವಾತಂತ್ರ್ಯ ಹೋರಾಟವು ಯಶಸ್ವಿಯಾಗಬೇಕಾದರೆ ಮತ್ತು ಸ್ವಾತಂತ್ರ್ಯವು ಅರ್ಥಪೂರ್ಣವಾಗಿರಬೇಕಾದರೆ ಕಾರ್ಮಿಕವರ್ಗವು ಹೋರಾಟದ ಮುಂಚೂಣಿಯಲ್ಲಿರಬೇಕೆಂದು ಈ ಸಮ್ಮೇಳನವು ಕರೆಕೊಟ್ಟಿತು". ಕಾಂಗ್ರೆಸ್ಸಿನಲ್ಲಿದ್ದ ಬಲಪಂಥೀಯರು ಇದನ್ನು ವಿರೋಧಿಸಿದರು. ಆದರೆ ಕೇರಳದ ರಾಷ್ಟ್ರೀಯ ಹೋರಾಟದಲ್ಲಿ ಎಡಪಂಥೀಯರು ಪ್ರಬಲರಾಗಿದ್ದರು.

ಅಂದಿನಿಂದ ಕೇರಳದಲ್ಲಿ ರಾಷ್ಟ್ರೀಯ ಹೋರಾಟದ ಮುಂಚೂಣಿಯಲ್ಲಿದ್ದದ್ದು ಕಾರ್ಮಿಕವರ್ಗ. ನಿಜವಾದ ಸ್ವಾತಂತ್ರ್ಯವೆಂದರೆ ಬ್ರಿಟಿಷರನ್ನು ಹೊರಕ್ಕೆ ಅಟ್ಟುವುದು ಮಾತ್ರವಲ್ಲ, ಕೆಲವೇ ಮಂದಿಯ ಕೈಯಲ್ಲಿ ರಾಜಕೀಯ ಅಧಿಕಾರವನ್ನು ಕೊಡುವುದಲ್ಲ, ದುಡಿಯುವ ಜನರ ಕೈಗಳಿಗೆ ರಾಜಕೀಯ ಅಧಿಕಾರ ಬಂದರೆ ಮಾತ್ರ ನಿಜವಾದ ಸ್ವಾತಂತ್ರ್ಯ ಸಿಗಬಲ್ಲದೆಂಬುದು ಕೇರಳದ ಕಾರ್ಮಿಕವರ್ಗದ ದೃಢ ವಿಶ್ವಾಸವಾಗಿತ್ತು. ಆದರೆ ಅಂದಿನ ಮೈಸೂರು ಸಂಸ್ಥಾನ ಮತ್ತು ಮದ್ರಾಸ್ ಸಂಸ್ಥಾನ (ದಕ್ಷಿಣ ಕನ್ನಡ ಜಿಲ್ಲೆಯು ಅಂದು ಮದ್ರಾಸ್ ಸಂಸ್ಥಾನದಲ್ಲಿತ್ತು)ದಲ್ಲಿ ದುರ್ದೈವವಶಾತ್ ಕಾಂಗ್ರೆಸ್ ಪಕ್ಷ ಮತ್ತು ರಾಷ್ಟ್ರೀಯ ಹೋರಾಟಗಳು ಸಂಪೂರ್ಣವಾಗಿ ಬಲಪಂಥೀಯರ ಕೈಯಲ್ಲಿದ್ದವು ಈ ರಾಜ್ಯಗಳಲ್ಲಿ ಕಾರ್ಮಿಕವರ್ಗವನ್ನು ಹೋರಾಟದ ಪ್ರವಾಹದಲ್ಲಿ ಸೇರಿಸಿಕೊಳ್ಳಲಿಲ್ಲ "ರಾಷ್ಟ್ರೀಯ ಹೋರಾಟದಲ್ಲಿ ಕಾರ್ಮಿಕವರ್ಗ ಭಾಗವಹಿಸುವುದು ಬಲಪಂಥೀಯ ಕಾಂಗ್ರೆಸಿಗರಿಗೆ ಬೇಕಿರಲಿಲ್ಲ. ಕಾರ್ಮಿಕವರ್ಗವು ರಾಷ್ಟ್ರೀಯ ಹೋರಾಟದಲ್ಲಿ ಇಳಿದರೆ ಎಡಪಂಥೀಯ ರಾಜಕೀಯ ಪ್ರಜ್ಞೆ ಬೆಳೆಯುವುದು. ಇದು ಬಂಡವಾಳಶಾಹಿಗಳ ಹಿತಾಸಕ್ತಿಗಳಿಗೆ ಧಕ್ಕೆ ತರುವುದೆಂದು ರಾಜಗೋಪಾಲಾಚಾರಿ, ಕಾಮರಾಜ್‌ರಂತಹ ಬಲಪಂಥೀಯರಿಗೆ ತಿಳಿದಿತ್ತು. ಕಾರ್ಮಿಕರು ಹೋರಾಟಕ್ಕಿಳಿದರೆ ಹಿಂಸಾಚರಣೆಗಿಳಿಯುತ್ತಾರೆಂದೂ ಅವರನ್ನು ಸ್ವಾತಂತ್ರ್ಯ ಹೋರಾಟದಿಂದ ದೂರವಿಡುವುದೇ ಕ್ಷೇಮವೆಂದೂ ಅವರು ಹೇಳುತ್ತಿದ್ದರು. ಬ್ರಿಟಿಷರಿಂದ ಕೆಲವೊಂದು ಸವಲತ್ತುಗಳನ್ನು ಪಡೆದುಕೊಳ್ಳಲು ಅವರ ಮೇಲೆ ಒತ್ತಡ ಹೇರುವ ಸಾಧನವಾಗಿ ಮಾತ್ರವೇ ಅವರು ಕಾರ್ಮಿಕವರ್ಗವನ್ನು ಉಪಯೋಗಿಸುತ್ತಿದ್ದರು." ಕಾರ್ಮಿಕರ ಟ್ರೇಡ್ ಯೂನಿಯನ್ ಸಂಘಟನೆಯನ್ನು ತೋರಿಸಿ, "ನೋಡಿ, ಇವರು ಹೋರಾಟಕ್ಕಿಳಿದರೆ ನಿಮಗೆ ಕಷ್ಟವಾಗಬಹುದು. ಆದುದರಿಂದ ನಿಮ್ಮ ಅಗಾಧ ಪ್ರಮಾಣದ ಲಾಭದಿಂದ ಸಣ್ಣದೊಂದು ಅಂಶವನ್ನು ಇವರಿಗೆ ಕೂಲಿ ಹೆಚ್ಚಳದ ಮೂಲಕ ಕೊಡಿರಿ" ಎಂದು ಹೇಳಿ ಮಾಲಕವರ್ಗ ಮತ್ತು ಬ್ರಿಟಿಷ್ ಸರಕಾರದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಾ ಈ ರಾಜ್ಯಗಳಲ್ಲಿ ಕಾರ್ಮಿಕವರ್ಗವನ್ನು ಅವರು ರಾಷ್ಟ್ರೀಯ ಹೋರಾಟದ ಕಣದಿಂದ ದೂರವಿಡುವುದರಲ್ಲಿ ಯಶಸ್ವಿಯಾದರು. ಉತ್ತರ ಪ್ರದೇಶ, ಬಿಹಾರ, ಪಂಜಾಬ್ ಇತ್ಯಾದಿ ರಾಜ್ಯಗಳಲ್ಲೂ ಇದೇ ಪರಿಸ್ಥಿತಿಯಿತ್ತು. ಆದರೆ ಕೇರಳ, ಪಶ್ಚಿಮಬಂಗಾಳ ಮತ್ತು ಸ್ವಲ್ಪ ಮಟ್ಟಿಗೆ ಆಂಧ್ರದಲ್ಲಿ ಹೋರಾಟದ ನೇತೃತ್ವವು ಕಾರ್ಮಿಕವರ್ಗದ ಕೈಯಲ್ಲಿತ್ತು. "ಈ ಐತಿಹಾಸಿಕ ಕಾರಣಗಳಿಂದಾಗಿಯೇ ಕರ್ನಾಟಕದಂತಹ ಪ್ರದೇಶಗಳಲ್ಲಿ ಪುರೋಗಾಮಿ ಚಳುವಳಿಯು ದುರ್ಬಲವಾಯಿತು".

ಕೇರಳ, ಪಶ್ಚಿಮಬಂಗಾಳ ಮತ್ತು ಇತರ ಕೆಲವು ಸಣ್ಣ ಪ್ರದೇಶಗಳನ್ನು ಬಿಟ್ಟರೆ ದೇಶಾದ್ಯಂತ ರಾಷ್ಟ್ರೀಯ ಚಳುವಳಿಯು ಬಲಪಂಥೀಯರ ನೇತೃತ್ವದಲ್ಲಿದ್ದುದರಿಂದ 1947ರಲ್ಲಿ ರಾಜಕೀಯ ಅಧಿಕಾರವು ಜನಸಾಮಾನ್ಯರ ಕೈಗಳಿಗೆ ಬರಲಿಲ್ಲ. "ಯಾರು ಜನಸಾಮಾನ್ಯರ ಸಂಘಟಿತ ಶಕ್ತಿಗೆ ಹೆದರುತ್ತಿದ್ದರೋ, ಯಾರು ಈ ದೇಶದ ಕಾರ್ಮಿಕವರ್ಗವನ್ನು ನಿರಂತರವಾಗಿ ಶೋಷಣೆಮಾಡಿ ಕೆಲವೇ ಶ್ರೀಮಂತರ ಕೈಯಲ್ಲಿ ದೇಶದ ಸಂಪತ್ತನ್ನು ಕೇಂದ್ರೀಕರಿಸಿಡಬಯಸಿದ್ದರೋ, ಅಂತಹ ವ್ಯಕ್ತಿಗಳು ಬ್ರಿಟಿಷರಿಂದ ರಾಜಕೀಯ ಅಧಿಕಾರವನ್ನು ವಹಿಸಿಕೊಂಡರು".

ಇಂದು ದೇಶದ ಪರಿಸ್ಥಿತಿ ಏನಾಗಿದೆ? ಇಂದಿರಾಗಾಂಧಿ ಪುನಃ ಅಧಿಕಾರಕ್ಕೆ ಬಂದುದರಿಂದಾಗಿ ಅಮೇರಿಕವು ಹೆಚ್ಚು ಬಂಡವಾಳ ಹೂಡಲು ಭಾರತದ ವಾತಾವರಣವು ಅನುಕೂಲಕರವಾಗಿದೆ ಎಂದು ಜಾಗತಿಕ ಬ್ಯಾಂಕಿನ ಓರ್ವಿಲ್ ಫ್ರೀಮನ್ ಹೇಳುತ್ತಿದ್ದಾನೆ,

ವಿದೇಶೀ ಬಂಡವಾಳಶಾಹಿಗಳು ನಮ್ಮ ದೇಶದ ಸಂಪತ್ತನ್ನು ಹೆಚ್ಚೆಚ್ಚು ಸೂರೆ ಮಾಡಲು ಅವಕಾಶ ಮಾಡಿಕೊಡಲಾಗುತ್ತಿದೆ. ನಮ್ಮ ದೇಶದ ಗುತ್ತೇದಾರಿ ಬಂಡವಾಳಶಾಹಿಗಳು ತಮ್ಮ ಸಂಪತ್ತನ್ನು ಹಲವು ಪಟ್ಟು ಹೆಚ್ಚಿಸಿಕೊಂಡಿದ್ದಾರೆ. "ಸ್ವಾತಂತ್ರ್ಯ ದೊರಕಿದಾಗ ಬಿರ್ಲಾ ಮತ್ತು ಟಾಟಾರ ಸಂಪತ್ತು ರೂ. 51 ಕೋಟಿ ಮತ್ತು ರೂ. 95 ಕೋಟಿಗಳಾಗಿದ್ದರೆ, ಮುಂದೆ ಮೂವತ್ತು ವರ್ಷಗಳಲ್ಲಿ 1977ರಷ್ಟರಲ್ಲಿ ಅವರ ಪ್ರತಿಯೊಬ್ಬರ ಸಂಪತ್ತೂ ರೂ. 1070 ಕೋಟಿ ದಾಟಿದೆ. ಇವರ ಸಂಪತ್ತು ಹೆಚ್ಚುತ್ತಲೇ ಇದೆ. ಹಾಗೆಯೇ ಮಫತ್‌ಲಾಲ್, ಸಿಂಘಾನಿಯಾ, ಥಾಪರ್, ಸಿಂಧಿಯಾ ಮುಂತಾದ ಗುತ್ತೇದಾರಿ ಕೈಗಾರಿಕಾ ಕುಟುಂಬಗಳ ಸಂಪತ್ತು ಅಪಾರವಾಗಿ ಹೆಚ್ಚಾಗಿದೆ, ಹೆಚ್ಚುತ್ತಲೇ ಇದೆ. 1972ರಿಂದ 1977ರ ಕೇವಲ ಐದು ವರ್ಷಗಳಲ್ಲಿ 20 ಅತಿ ದೊಡ್ಡ ಗುತ್ತೇದಾರಿ ಕೈಗಾರಿಕಾ ಕುಟುಂಬಗಳ ಸಂಪತ್ತು ರೂ. 3072 ಕೋಟಿಗಳಿಂದ ರೂ. 5402 ಕೋಟಿಗಳಿಗೇರಿದೆ. ಅಂದರೆ ಶೇ. 76 ರಷ್ಟು ಅವರ ಸಂಪತ್ತು ಹೆಚ್ಚಿದೆ"! ಕೇಂದ್ರದಲ್ಲಿ ಸಚಿವರಾಗಿದ್ದ ಸಿ. ಸುಬ್ರಹ್ಮಣ್ಯಂರ ಪ್ರಕಾರ ದೇಶದ ಶೇ. 62 ರಷ್ಟು ಜನರು ಇಂದು ಬಡತನ ರೇಖೆಗಿಂತ ಕೆಳಗಿನ ಮಟ್ಟದಲ್ಲಿ ಜೀವಿಸುತ್ತಿದ್ದಾರೆ. ಅಂದರೆ ಈ ಶೇ.62ರಷ್ಟು ಜನರಿಗೆ ವರ್ಷದ 365 ದಿನಗಳಲ್ಲಿ ಪ್ರತಿ ದಿನ ಒಂದು ಊಟ ಸಿಗುತ್ತಿಲ್ಲ.

ಕೇರಳದಲ್ಲಿ ಎ. ಕೆ. ಜಿ. ಮತ್ತು ಇ. ಎಂ. ಎಸ್. ರಂತಹ ನಾಯಕರೂ, ಆಂಧ್ರದಲ್ಲಿ ಸುಂದರಯ್ಯ, ಪಶ್ಚಿಮ ಬಂಗಾಳದಲ್ಲಿ ಮುಜಾಫರ್ ಅಹಮದ್ ರಂಥವರೂ 1937 ರಲ್ಲಿ ಹೇಳಿದ ಮಾತುಗಳು ಇಂದು ಅಕ್ಷರಶಃ ಸತ್ಯವಾದಿ ಕಾಣುತ್ತಿವೆ. ಕಾರ್ಮಿಕ ವರ್ಗಕ್ಕೆ ರಾಜಕೀಯ ಅಧಿಕಾರ ಸಿಗುವ ತನಕ ನಿಜವಾದ ಸ್ವಾತಂತ್ರ್ಯ ಸಿಗಲಾರದೆಂದು ಅವರು ಹೇಳಿದ್ದರು. ಹಿಂದೆ ಬ್ರಿಟಿಷರು ಮಾತ್ರ ನಮ್ಮನ್ನು ಶೋಷಿಸುತ್ತಿದ್ದರು. ಈಗ ಬ್ರಿಟಿಷರಲ್ಲದೆ ಅಮೆರಿಕನರೂ ಇತರ ವಿದೇಶೀ ಬಂಡವಾಳಶಾಹಿಗಳೂ ಸ್ವದೇಶೀ ಬಂಡವಾಳಶಾಹಿಗಳೂ ನಮ್ಮನ್ನು ಸೂರೆಮಾಡುತ್ತಿದ್ದಾರೆ.

"ದೇಶದಲ್ಲಿ ಇಂದು 21 ಮಿಲಿಯ ನಿರುದ್ಯೋಗಸ್ಥರಿರುವರೆಂದೂ ಮುಂದಿನ ಹತ್ತು ವರ್ಷಗಳಲ್ಲಿ ನಿರುದ್ಯೋಗಸ್ಥರ ಸಂಖ್ಯೆ 70ಮಿಲಿಯಕ್ಕೂ ಮೀರುವುದೆಂದೂ ಅಂದಾಜು ಮಾಡಲಾಗಿದೆ. ಉದ್ಯೋಗ ವಿನಿಮಯ ಸಂಸ್ಥೆಗಳಲ್ಲಿ ದಾಖಲಾದ ನಿರುದ್ಯೋಗಸ್ಥರ ಸಂಖ್ಯೆಯೇ ಸಧ್ಯ 14 ಮಿಲಿಯವಾಗಿದೆ. ಇದರಲ್ಲಿ ಅರ್ಧಾಂಶದಷ್ಟು ಜನರು ವಿದ್ಯಾವಂತ ಯುವಕ ನಿರುದ್ಯೋಗಸ್ಥರು"! "ನಿರುದ್ಯೋಗದಿಂದ ಬಡತನ ಹೆಚ್ಚುತ್ತಿದೆ. ಕೃಷಿಕಾರ್ಮಿಕರಿಗೆ ವರ್ಷದಲ್ಲಿ 180 ದಿನಗಳಷ್ಟು ಕೆಲಸ ಸಿಗುವುದಿಲ್ಲ. ಜೀವನಾವಶ್ಯಕ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿವೆ".

"ಜನಸಾಮಾನ್ಯರ, ದುಡಿಯುವ ಜನರ ಗ್ರಾಹಕ ಶಕ್ತಿಯು ಕ್ಷಯಿಸುತ್ತಿದೆ. ಆಂತರಿಕ ಮಾರುಕಟ್ಟೆ ಕುಸಿಯುತ್ತಿದೆ".

ಸ್ವಲ್ಪ ಸಮಯದ ಹಿಂದೆ 2ರೂಪಾಯಿಗೆ ಸಿಗುತ್ತಿದ್ದ ಸಕ್ಕರೆಗೆ ಇವತ್ತು ಕೆ.ಜಿ.ಗೆ 7-8ರೂಪಾಯಿ ಆಗಿದೆ. ಇನ್ನು ಮುಂದೆ ಸಕ್ಕರೆಯನ್ನು ರಫ್ತು ಮಾಡುವುದಿಲ್ಲವೆಂದು ಸರಕಾರ ಹೇಳುತ್ತಿದೆ. ಆದರೆ, ಸಕ್ಕರೆಯ ರಫ್ತನ್ನು ನಿಲ್ಲಿಸಲು ಇಂದಿರಾಸರಕಾರಕ್ಕೆ ಸಾಧ್ಯವಿಲ್ಲ. ಈದೇಶದಲ್ಲಿ 5ಪಂಚವಾರ್ಷಿಕ ಯೋಜನೆಗಳಾದವು. ಹಲವು ಸಾವಿರ ಕೋಟಿ ಅಮೇರಿಕನ್ ಡಾಲರ್‌ಗಳು 'ಸಹಾಯದ' ಹೆಸರಿನಲ್ಲಿ ಈ ದೇಶಕ್ಕೆ ಬಂದಿವೆ. "ಇದು ತನಕ ಪಡೆದ ವಿದೇಶಿ ಸಾಲ ರೂ. 20000 ಕೋಟಿಗೂ ಮೀರಿದೆ. ಕಳೆದ ಹತ್ತು ವರ್ಷಗಳಲ್ಲಿಯೇ ಅಮೇರಿಕಾ ಮೊದಲಾದ ಸಾಮ್ರಾಜ್ಯಶಾಹಿ ರಾಷ್ಟ್ರಗಳಿಂದಲೇ ರೂ. 10000 ಕೋಟಿಗೂ ಹೆಚ್ಚು ಸಾಲ ಪಡೆಯಲಾಗಿದೆ. ಅದರಲ್ಲಿ ಅಮೇರಿಕದಿಂದ ಪಡೆದ ಸಾಲ ಶೇ. 75ರಷ್ಟು"! ವರ್ಷಕ್ಕೆ ಸುಮಾರು ರೂ.867 ಕೋಟಿಯಷ್ಟು, ಅಂದರೆ ನಮ್ಮ ರಫ್ತು ಆದಾಯದ ಸುಮಾರು ಶೇ. 17 ರಷ್ಟು, ವಿದೇಶಗಳಿಗೆ ನಾವು ಸಾಲದ ಮೇಲಿನ ಬಡ್ಡಿ, ಸಾಲ ಮರುಪಾವತಿ, ಅವರ ಲಾಭದ ಮರುಪಾವತಿ, ಇತ್ಯಾದಿಗಳ ರೂಪದಲ್ಲಿ ಕೊಡಬೇಕಾಗಿದೆ. (1976-77ರಲ್ಲಿ). ಇಷ್ಟೊಂದು ಹಣ ವಿದೇಶಗಳಿಗೆ ಹೇಗೆ ಕೊಡುವುದು? ವಿದೇಶಿ ವಿನಿಮಯ ಹೇಗೆ ಗಳಿಸುವುದು? ಸಕ್ಕರೆಯಂತಹ ಅವಶ್ಯಕ ಸಾಮಗ್ರಿಗಳನ್ನೂ ಕಡಿಮೆ ಬೆಲೆಗೆ ಅಮೇರಿಕ ಮೊದಲಾದ ಸಾಮ್ರಾಜ್ಯಶಾಹಿ ರಾಷ್ಟ್ರಗಳಿಗೆ ರಫ್ತು ಮಾಡಲೇಬೇಕಾಗಿದೆ. ಆದುದರಿಂದ ಸರಕಾರವು ಸಕ್ಕರೆ ರಫ್ತನ್ನು ನಿಲ್ಲಿಸುತ್ತದೆಂಬುದು ಶುದ್ಧ ಸುಳ್ಳು.

ಇವತ್ತು ಸಿಮೆಂಟ್ ಸಿಗುತ್ತಿಲ್ಲ. ಸಿಮೆಂಟ್ ವ್ಯಾಪಾರದಲ್ಲಿ ಕಳ್ಳಸಂತೆ ವ್ಯಾಪಾರ ನಡೆಯುತ್ತಿದೆ. ನಾವು ಕಚ್ಚಾಎಣ್ಣೆ ಆಮದು ಮಾಡುತ್ತೇವೆ, ತೆರಿಗೆಯ ರೂಪದಲ್ಲಿ ಇದಕ್ಕೆ ನಾವು ಜನಸಾಮಾನ್ಯರು ಹಣ ಕೊಡುತ್ತೇವೆ. ಯಾಕೆಂದರೆ ನಮ್ಮ ಸರಕು ಸಾಮಗ್ರಿಗಳು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಾಣಿಕೆಯಾಗಬೇಕು. ಸೀಮೆಎಣ್ಣೆ ಬೆಲೆಯಲ್ಲಿಯೇ ಶೇ. 38 6ರಷ್ಟು ಅಪ್ರತ್ಯಕ್ಷ ತೆರಿಗೆಯ ಅಂಶ ಇದೆ. ಜೀವನಾವಶ್ಯಕ ವಸ್ತುಗಳ ಮೇಲೆ ಅಪ್ರತ್ಯಕ್ಷ ತೆರಿಗೆಗಳಿಂದಾಗಿ ಬೆಲೆಗಳು ವರ್ಷವರ್ಷವೂ ಏರುತ್ತಿವೆ.

"ಸರಕಾರ ಕೃತಕಹಣ ಸೃಷ್ಟಿಯಿಂದ ದೇಶವಿದೇಶಗಳಿಂದ ಪಡೆದ ಸಾಲದಿಂದ, ಅಪ್ರತ್ಯಕ್ಷ ತೆರಿಗೆಗಳಿಂದ ಏನು ಮಾಡುತ್ತಿದೆ? ರಕ್ಷಣೆ, ಪೋಲೀಸು, ಆಡಳಿತ, ಬಂಡವಾಳಶಾಹಿ ಕೈಗಾರಿಕೆಗಳಿಗೆ ಮತ್ತು ಶ್ರೀಮಂತ ಭೂಮಾಲಕರಿಗೆ ಸಹಾಯಧನ, ರಫ್ತು ವ್ಯಾಪಾರಕ್ಕೆ ಸಹಾಯಧನ, ಇತ್ಯಾದಿಗಳಿಗೆ ಹೇರಳ ವಿನಿಯೋಗಿಸುತ್ತಿದೆ. ಪರಿಣಾಮವಾಗಿ ಬೆಲೆಗಳು ಏರುತ್ತಿವೆ". ಆಂತರಿಕ ಮಾರುಕಟ್ಟೆ ಕ್ಷಯಿಸುತ್ತಿರುವಾಗವಿದೇಶಿ ಮಾರುಕಟ್ಟೆಯಲ್ಲಿ ನಮ್ಮ ಸಾಮಗ್ರಿಗಳನ್ನು ಮಾರಾಟಮಾಡಲು ಸರಕಾರ ಶ್ರೀಮಂತ ಭೂಮಾಲಕರಿಗೂ ಬಂಡವಾಳಶಾಹಿಗಳಿಗೂ ರಫ್ತು ವ್ಯಾಪಾರಕ್ಕೆ ಸಹಾಯಧನ ನೀಡುತ್ತಿದೆ ಅವರಿಗೆ ನಷ್ಟವಾಗದಿರುವಂತೆ ನೋಡಿಕೊಳ್ಳುತ್ತಿದೆ. 1977-78 ರಲ್ಲಿ ವಿವಿಧ ವಿಷಯಗಳಿಗೆ ರೂ. 1089 ಸರಕಾರದ ಸಹಾಯಧನದಲ್ಲಿ ರೂ. 363 ಕೋಟಿಯಷ್ಟು ಕೇವಲ ರಫ್ತು ವ್ಯಾಪಾರಕ್ಕೇ ಮೀಸಲಾದಿಡಲಾಗಿತ್ತು. ಪ್ರತಿಯೊಂದು ಮುಂಗಡಪತ್ರದಲ್ಲಿಯೂ ಇದು ಹೆಚ್ಚುತ್ತಲೇ ಇದೆ. ಆದರೆ ಯುವಕರಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಕಾರ್ಯಕ್ರಮಗಳಿಗೆ ಸರಕಾರಕ್ಕೆ ಹಣವಿಲ್ಲ!

ಇಂತಹ ಪರಿಸ್ಥಿತಿಯಲ್ಲಿ ನಾವೇನು ಮಾಡಬೇಕು? ಕೆಲವೇ ದಿನಗಳಲ್ಲಿ ಸಕ್ಕರೆಯ ಬೆಲೆ ಇನ್ನಷ್ಟೂ ಹೆಚ್ಚಬಹುದು. ಸೀಮೆಎಣ್ಣೆ ಸಿಕ್ಕುವುದೇ ಕಷ್ಟವಾಗಬಹುದು. ನಾವು ಜನರ ಬಳಿಗೆ ಹೋಗಿ ಇದನ್ನೆಲ್ಲಾ ವಿವರಿಸಬೇಕು. ಯಾಕೆ ನಿಮ್ಮ ಮನೆಯಲ್ಲಿ ದೀಪ ಉರಿಸಲೂ ಸೀಮೆಎಣ್ಣೆ ಸಿಗುತ್ತಿಲ್ಲ? ಯಾಕೆದಿನಕ್ಕೊಂದು 'ಟೀ' ಕುಡಿಯಲೂ ನಿಮಗೆ ಸಕ್ಕರೆಯಿಲ್ಲ? ಯಾಕೆ ಎಲ್ಲಾ ವಸ್ತುಗಳ ಬೆಲೆಯೂ ಹೆಚ್ಚಾಗುತ್ತಿದೆ? ಇವೆಲ್ಲವುಗಳಿಗೆ ಡಿಲ್ಲಿಯಲ್ಲಿ ನಡೆಯುತ್ತಿರುವ ಆಡಳಿತವೇ ಕಾರಣ. "ಹೇಗೆ ಎ.ಕೆ.ಜಿ. ಎಂಟು ಮಂದಿಯ ಮೂಲಕ ಸಾವಿರಾರು ಜನರಲ್ಲಿ ಜಾಗೃತಿ ಹುಟ್ಟಿಸಿದರೋ ಹಾಗೆಯೇ ನಾವು ಜನರಲ್ಲಿ ಪ್ರಚಾರ ಪ್ರಕ್ಷೋಭೆ ನಡೆಸಬೇಕು".

1950-51ರಲ್ಲಿ ನೆಹರು ಕಾಲದಲ್ಲಿ ದೇಶದ ರಕ್ಷಣಾ ವೆಚ್ಚ ರೂ. 168 ಕೋಟಿಯಾಗಿತ್ತು. 1975-76ರಲ್ಲಿ ಇಂದಿರಾ ಆಡಳಿತದಲ್ಲಿ ರಕ್ಷಣಾ ವೆಚ್ಚ ರೂ. 2410 ಕೋಟಿಗೇರಿತು. ಇಂದಿರಾಗಾಂಧಿಯ ಹೊಸ ಸರಕಾರದ 1980-81ರ ಮುಂಗಡ ಪತ್ರದಲ್ಲಿ ರಕ್ಷಣಾ ವೆಚ್ಚ ರೂ. 3715 ಕೋಟಿ ಎಂದು ಅಂದಾಜು ಮಾಡಲಾಗಿದೆ. ಇದೇ ಪ್ರಮಾಣದಲ್ಲಿ ಕೇಂದ್ರ ಪೋಲೀಸು ಖಾತೆಗೂ ಹೆಚ್ಚುಹೆಚ್ಚು ಹಣ ವಿನಿಯೋಗಿಸಲಾಗುತ್ತಿದೆ. ಇದು ನಮ್ಮ ಸ್ವಾತಂತ್ರ್ಯದ ಸ್ವರೂಪ. 1940ರ ದಶಕದಲ್ಲಿ ಪೋಲೀಸಿನ ಲಾಠಿಯ ಪೆಟ್ಟು ಬಹಳ ಕಡಿಮೆ ಬೆಲೆಬಾಳುತ್ತಿತ್ತು. ಇವತ್ತು ಒಂದು ಲಾಠಿಯ ಪೆಟ್ಟಿನ ಬೆಲೆ ಮೂವತ್ತು ರೂಪಾಯಿಗಳಿಗೇರಿದೆ!

ಇತ್ತೀಚೆಗೆ 9 ರಾಜ್ಯ ವಿಧಾನಸಭೆಗಳನ್ನು ವಿಸರ್ಜಿಸಲಾಯಿತು. ಕೇಂದ್ರ ಸರಕಾರದ ತಾಳಕ್ಕೆ ಸರಿಯಾಗಿ ಇವುಗಳು ಕುಣಿಯಲಾರವೆಂಬುದೇ ಈ ಕ್ರಮಕ್ಕೆ ಕಾರಣ. ಈ ರಾಜ್ಯಗಳಲ್ಲಿ ಚುನಾವಣೆಗಳು ನಡೆಯಲಿವೆ. ಇಂದಿರಾಗಾಂಧಿಯ ಸರ್ವಾಧಿಕಾರದ ಅಪಾಯಗಳ ಕುರಿತು ಏನೇನೂ ತಿಳುವಳಿಕೆಯಿಲ್ಲದ ಮುಗ್ಧ ಜನರೂ ಸೇರಿದಂತೆ ಕಾಂಗ್ರೆಸ್ (ಐ) ಪಕ್ಷದ ಬಹುಸಂಖ್ಯಾತ ಅಭ್ಯರ್ಥಿಗಳು ಆರಿಸಿ ಬರಲೂ ಸಾಕು. ಮುಂದೇನಾದೀತೆಂದು ಈ ಬಡಪಾಯಿಗಳಿಗೆ ಗೊತ್ತಿರಲಾರದು. "ಈ 9 ರಾಜ್ಯಗಳಲ್ಲೂ ಅವರಿಗೆ ಬಹುಮತ ಬಂದರೆ ರಾಜ್ಯಸಭೆಗೂ ಅವರ ಪ್ರತಿನಿಧಿಗಳೇ ಆರಿಸಲ್ಪಡುತ್ತಾರೆ. ಆಗ ರಾಜ್ಯಸಭೆಯಲ್ಲೂ ಆಳುವ ಪಕ್ಷಕ್ಕೇ ಬಹುಮತ ಸಿಗಬಹುದು. "ಅಂತಹ ಪರಿಸ್ಥಿತಿ ಬಂದೊಡನೆ ಮೊದಲದಾಳಿ ಬರುವುದು ನಮ್ಮ ಸಂವಿಧಾನದ ಮೇಲೆ. ಎಲ್ಲಾ ಅಧಿಕಾರವನ್ನು ಒಬ್ಬ ವ್ಯಕ್ತಿಯ ಕೈಯಲ್ಲಿ ಕೇಂದ್ರೀಕರಿಸುವ ಅಧ್ಯಕ್ಷೀಯ ವ್ಯವಸ್ಥೆಯನ್ನು ತರಬಹುದು. ಪಾರ್ಲಿಮೆಂಟ್ ಶಾಲೆಯ ಮಕ್ಕಳ ಪಾರ್ಲಿಮೆಂಟಿನಂತಹ ನಿಷ್ಪ್ರಯೋಜಕ ಚರ್ಚಾ ವೇದಿಕೆಯಾಗಿ ಮಾರ್ಪಾಟು ಹೊಂದಬಹುದು".

ಕೇರಳ, ಪ. ಬಂಗಾಳ ಮತ್ತು ತ್ರಿಪುರಾ ಸರಕಾರಗಳು ಇಂದು ಜನತೆಯ ಹಕ್ಕುಗಳಿಗಾಗಿ ಹೋರಾಡುತ್ತಿವೆ. ಕೇರಳ ಸರಕಾರವು ತನ್ನ ವಾರ್ಷಿಕ ಯೋಜನೆಗಾಗಿ ರೂ. 264 ಕೋಟಿ ಬೇಡಿಕೆಯನ್ನಿರಿಸಿದೆ. ಕೇಂದ್ರವು ರೂ. 224 ಕೋಟಿ ಮಾತ್ರ ಕೊಡುವುದಾಗಿ ಹೇಳಿದೆ. ತೆರಿಗೆಯ ರೂಪದಲ್ಲಿ ಕೇಂದ್ರ ಸರಕಾರವು ರಾಜ್ಯಗಳಿಂದ ಸಾವಿರಾರು ಕೋಟಿ ರೂಪಾಯಿಗಳನ್ನು ಸಂಗ್ರಹಿಸುತ್ತಿದೆ. ಕೇರಳದ ರಾಜ್ಯಸರಕಾರವು ಇದರಿಂದ ತನ್ನ ನ್ಯಾಯವಾದ ಪಾಲನ್ನು ಕೇಳುತ್ತಿದೆ. ಕೇರಳ ಸರಕಾರವು ಈ ಪರಿಸ್ಥಿತಿಯನ್ನು ವಿವರಿಸುತ್ತಿದೆ. ಆದರೆ ಕರ್ನಾಟಕ ಮುಖ್ಯಮಂತ್ರಿ ಶ್ರೀಮಾನ್ ಗುಂಡೂರಾವ್ ಏನು ಹೇಳುತ್ತಾರೆ? 30 ವರ್ಷದ ಕಾಂಗ್ರೆಸ್ ದುರಾಡಳಿತದಿಂದ ಜನಸಾಮಾನ್ಯರ ಜೀವನ ಇಷ್ಟು ನಿಕೃಷ್ಟವಾಗಿದೆ ಎಂದು ಅವರು ಹೇಳುವುದಿಲ್ಲ. ಇಂದಿರಾ ಸರಕಾರವೂ ಅದೇ ಧೋರಣೆಗಳನ್ನು ಮುಂದುವರಿಸುತ್ತಿದೆಯೆಂಬುದನ್ನೂ ಅವರು ಹೇಳುವುದಿಲ್ಲ. ಬದಲಾಗಿ 2 ವರ್ಷಗಳ ಮೊರಾರ್ಜಿ ಸರಕಾರದ ನೀತಿಗಳಿಂದಾಗಿ ದೇಶದ ಪರಿಸ್ಥಿತಿ ಹೀಗಾಗಿದೆಯೆಂದು ಅವರು ಹೇಳುತ್ತಾರೆ. ನಮ್ಮ ದೇಶದಲ್ಲಿ ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳಷ್ಟು ಕಪ್ಪು ಹಣ ಚಲಾವಣೆಯಲ್ಲಿದೆ. 30 ವರ್ಷಗಳ ಕಾಂಗ್ರೆಸ್ ಸರಕಾರ ಇದಕ್ಕೆ ಕಾರಣವೆಂದು ಶ್ರೀಮತಿ ಗಾಂಧಿ ಹೇಳುವುದಿಲ್ಲ. ಮೊರಾರ್ಜಿ ದೇಸಾಯಿಯವರಿಂದಾದಿ ಹೀಗಾಯಿತೆಂದು ಅವರು ಹೇಳುತ್ತಾರೆ!

"ಇಂತಹ ಪರಿಸ್ಥಿತಿಯಲ್ಲಿ ಯುವಜನರ ಕರ್ತವ್ಯವೇನು? ನಾವು ಕೈಕಟ್ಟಿ ಕುಳಿತುಕೊಂಡು, ನಮ್ಮ ಸುತ್ತಲೂ ನಡೆಯುತ್ತಿರುವ ಶೋಷಣೆ ಮತ್ತು ದಬ್ಬಾಳಿಕೆಗಳಿಗೆ ಮೂಕ ಪ್ರೇಕ್ಷಕರಾಗಿರಬಲ್ಲವೆ? ನೀವೆಲ್ಲರೂ ಯುವಕರು. ಇನ್ನು ಹಲವಾರು ವರ್ಷ ಈ ಸಮಾಜದಲ್ಲಿ ಬಾಳಬೇಕಾದವರು. ನೀವು ಯೋಚಿಸಬೇಕು. ನಮ್ಮ ಮಕ್ಕಳು ಯಾವ ರೀತಿಯ ಬಾಳನ್ನು ಬಾಳಬೇಕು? ಪ್ರತಿಬಂಧಕ ಬಂಧನ, ಅರ್ಧರಾತ್ರಿಯಲ್ಲಿ ಬಾಗಿಲು ಬಡಿದು ಎಳೆಯ ಯುವಕರನ್ನು ಎಳೆಕೊಂಡು ಹೋಗುವುದು, ಪೋಲೀಸರೊಡನೆ ಘರ್ಷಣೆಗಿಳಿದರೆಂಬ ಸುಳ್ಳುಕತೆಯನ್ನು ಸೃಷ್ಟಿಸಿ ಅವರನ್ನು ನಿರ್ಜನ ಪ್ರದೇಶಗಳಲ್ಲಿ ಗುಂಡಿಟ್ಟು ಕೊಲ್ಲುವುದು, ಇಂತಹ ಪರಿಸ್ಥಿತಿಗಳು ಇನ್ನೂ ಬರಬೇಕೆ"?

20 ತಿಂಗಳ ತುರ್ತುಪರಿಸ್ಥಿತಿಯ ಕಾಲದಲ್ಲಿ ಆಂಧ್ರಪ್ರದೇಶ ಒಂದರಲ್ಲೇ 300ಕ್ಕಿಂತಲೂ ಹೆಚ್ಚು ಯುವಕರನ್ನು ಗುಂಡಿಟ್ಟು ಕೊಂದಿದ್ದಾರೆ. ಇವರು ಪೋಲೀಸರೊಡನೆ ಘರ್ಷಣೆ ನಡೆಸಿದರೆಂದು ಕತೆಗಳನ್ನು ಸೃಷ್ಟಿಸಿದ್ದಾರೆ. ಆದರೆ 'ಘರ್ಷಣೆ'ಗಳಲ್ಲಿ ಒಬ್ಬನೇ ಒಬ್ಬ ಪೋಲೀಸನೂ ಗಾಯಗೊಂಡದ್ದು ಅವರ ಕಟ್ಟುಕತೆಯಲ್ಲಿ ಅಡಕವಾಗಿಲ್ಲ!

ಇನ್ನೊಮ್ಮೆ ಬರುವ ಸರ್ವಾಧಿಕಾರವು ಬರೇ 20 ತಿಂಗಳುಗಳಿಗೆ ಸೀಮಿತವಾಗಿರಲಾರದು. ಹಲವಾರು ವರ್ಷಗಳ ತನಕ ಅದು ಮುಂದುವರಿಯಬಹುದು. ತುರ್ತುಪರಿಸ್ಥಿತಿಯ ಅತಿರೇಕಗಳಿಗೆ ಕಾರಣರಾದವರೆಲ್ಲರನ್ನೂ ಮರಳಿ ಉನ್ನತ ಸ್ಥಾನಗಳಿಗೇರಿಸಲಾಗಿದೆ.

"ಪ್ರಜಾಪ್ರಭುತ್ವವನ್ನು ಪುಡಿಗುಟ್ಟಲು ನಾವು ಬಿಡಬಾರದು. ಶೋಷಣೆ ಮತ್ತು ದಬ್ಬಾಳಿಕೆಯನ್ನು ಕೊನೆಗೊಳಿಸಿ ಸರ್ವಾಧಿಕಾರವು ನಮ್ಮ ಸ್ವಾತಂತ್ರ್ಯವನ್ನು ನಿರ್ನಾಮ ಮಾಡುವ ಮೊದಲು ನಾವು ಜನರನ್ನು ಸಂಘಟಿಸಬೇಕು. ನಮ್ಮ ಮುಂದಿನ ಪೀಳಿಗೆಗಾಗಿ ನಾವು ಮಾಡುವ ಕರ್ತವ್ಯ ಇದು.

○

ಪುನರಾವರ್ತನ

ಬಹುಮತದ ಬೆಂಬಲದಿ ಮೂಡಿದವು ಕೋಡು
ಹಳೆಯ ಸಿದ್ಧಾಂತಗಳ ಮರುಕಳಿಕೆ ನೋಡು
ಅಜ್ಞಾನ ಕೂಪದಲಿ ಮುಳುಗಿಹುದು ಜನತೆ
ಅರಿವು ಮೂಡಿಸುವನಕ ಇದು ಹೀಗೇ ಅಂತೆ.

ದುಷ್ಟಕೂಟ

ದುಷ್ಟಗ್ರಹಗಳು ಕೂಟ ಸೇರಿದುವು ಮತ್ತೆ
ಗಾದಿಯನ್ನೇರಿದವು ಬೀದಿಗಳ ಕತ್ತೆ
ಮತ್ತೇನು ಸುರುವಾಯ್ತು ಸರ್ವಾಧಿಕಾರ!
ಪ್ರಾಮಾಣಿಕರಿಗುಂಟು ವಿನೋಗ್ರಹಚಾರ!

—ಕೃಷ್ಣಮೂರ್ತಿ

ಕಾರ್ಷಿಕ ಕಾರ್ಯಕ್ರಮ

ಪಿ. ರಾಮಚಂದ್ರರಾನ್

ಕರ್ನಾಟಕದಲ್ಲಿ ರೈತಸಂಘವನ್ನು ಕಟ್ಟಿ ಬೆಳೆಸುವುದು ಅತಿ ಮುಖ್ಯ ಕರ್ತವ್ಯ. ಆದರೆ ಅತಿ ಕಷ್ಟ ಮತ್ತು ಕ್ಲಿಷ್ಟವಾದ ಕೆಲಸ. ತುಲನಾತ್ಮಕವಾಗಿ, ಕಾರ್ಮಿಕರ ಸಂಘವನ್ನು ಕಟ್ಟುವುದು, ಕಾರ್ಮಿಕರ ಸಮಸ್ಯೆಗಳನ್ನು ಅರ್ಥ ಮಾಡುವುದು ಮತ್ತು ಅವುಗಳ ಪರಿಹಾರ ಕಂಡುಹಿಡಿಯುವುದು...ಬಹಳ ಸುಲಭ ಎಂದರೆ ತಪ್ಪಾಗದು. ರೈತರ ಕಾರ್ಯಕ್ರಮವನ್ನು ರೂಪೀಕರಿಸುವುದು ಕಾರ್ಮಿಕರ ಕಾರ್ಯಕ್ರಮವನ್ನು ರೂಪೀಕರಿಸುವುದಕ್ಕಿಂತ ಕಠಿಣವಾಗಿದೆ. ಆದರೆ ದುಡಿಯುವ ಜನತೆಯ ಕ್ರಾಂತಿಕಾರಿ ಚಳುವಳಿಯನ್ನು ಕರ್ನಾಟಕದಲ್ಲಿ ಬೆಳೆಸುವುದಕ್ಕೆ ಈ ಕರ್ತವ್ಯ ಪೂರೈಸದೆ ವಿನಹ ಬೇರೆ ಹಾದಿಯಿಲ್ಲ!

"ಗ್ರಾಮಾಂತರ ಪ್ರದೇಶಗಳಲ್ಲಿರುವ ವಿವಿಧ ವರ್ಗಗಳ, ಜನವಿಭಾಗಗಳ ಮತ್ತು ಗುಂಪುಗಳ ಕುರಿತು ನಮ್ಮ ಸಮಾಜವಾದಿಗಳ ದೃಷ್ಟಿಯನ್ನು ನಿರ್ಧರಿಸುವ ಮಾರ್ಗದರ್ಶಕ ತತ್ವಗಳೇ ನಮ್ಮ ಕಾರ್ಷಿಕ ಕಾರ್ಯಕ್ರಮ". (ಲೆನಿನ್)

ಸಾಮಾನ್ಯವಾಗಿ ಗ್ರಾಮಗಳಲ್ಲಿ ಮೂರು ಮುಖ್ಯ ವರ್ಗಗಳಿರುತ್ತವೆ: ದೊಡ್ಡ ಭೂಮಾಲಕ ವರ್ಗ, ಕೃಷಿಕೂಲಿಗಾರರ ವರ್ಗ ಮತ್ತು ರೈತವರ್ಗ. ದೊಡ್ಡ ಭೂಮಾಲಕ ವರ್ಗದ ಕುರಿತು ನಮ್ಮ ದೃಷ್ಟಿ ಸುಸ್ಪಷ್ಟವಾಗಿದೆ, ನಾವು ದೊಡ್ಡ ಭೂಮಾಲಕರನ್ನು ಮೂಲಭೂತವಾಗಿ ವಿರೋಧಿಸುವವರು. ನಮಗೂ ಅವರಿಗೂ ಬಂಧುತ್ವವೇ ಇರುವುದಿಲ್ಲ. ದೊಡ್ಡ ಭೂಮಾಲಕತ್ವವು ನಾಶವಾದರೆ ಮಾತ್ರ ಪ್ರಗತಿ ಸಾಧ್ಯ ಎಂಬುದು ನಮ್ಮ ದೃಢವಾದ ಚಾರಿತ್ರಿಕ ನಂಬಿಕೆ. ಆದಕಾರಣ ಅಂತಹ ಭೂಮಾಲಕತ್ವದ ನಿರ್ನಾಮವೇ, ಅದನ್ನು ಕಾರ್ಯತಃ ಸಾಧಿಸುವುದೇ ನಮ್ಮ ಕಾರ್ಷಿಕ ಕಾರ್ಯಕ್ರಮದ ಒಂದು ಭಾಗ. ಹಾಗೆಯೇ, ಕೃಷಿಕೂಲಿಗಾರ ವರ್ಗದ ಕುರಿತು ನಮ್ಮ ನಿಲುವೆಯೂ ಸುಸ್ಪಷ್ಟವಾಗಿದೆ. ಪಟ್ಟಣಗಳ ಕಾರ್ಮಿಕ ವರ್ಗದ ಕುರಿತು ನಮ್ಮ ಧೋರಣೆಗಳು ಯಾವುದಿದೆಯೋ ಅದೇ ಧೋರಣೆಗಳು ಕೃಷಿಕೂಲಿಗಾರ ವರ್ಗದ ಕುರಿತು ನಮ್ಮದು, ಪಟ್ಟಣಗಳ ಕಾರ್ಮಿಕ ವರ್ಗದ ಜತೆಯಲ್ಲಿ ಗ್ರಾಮಾಂತರ ಪ್ರದೇಶದ ಕಾರ್ಮಿಕರನ್ನು ಈ ಬಡ ಕೃಷಿಕೂಲಿಗಾರರನ್ನು-ಒಟ್ಟು ಸೇರಿಸುವುದು ಮತ್ತು ಅವರ ದೃಢವಾದ ನೇತೃತ್ವದಲ್ಲಿ ನಮ್ಮ ಕ್ರಾಂತಿಕಾರಿ ಚಳುವಳಿಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕಟ್ಟಿ ಬೆಳೆಸುವುದು ನಮ್ಮ ಕಾರ್ಷಿಕ ಕಾರ್ಯಕ್ರಮದ ಇನ್ನೊಂದು ಭಾಗವಾಗಿದೆ.

ಈಗ ನಮ್ಮ ಮುಂದಿರುವುದು ಗ್ರಾಮಗಳಲ್ಲಿರುವ ಮೂರನೇ ವರ್ಗವಾದ "ರೈತವರ್ಗ"ದ ಕುರಿತು ನಮ್ಮ ಸಮಾಜವಾದಿಗಳ ಧೋರಣೆಯನ್ನು ನಿರೂಪಿಸುವ ಪ್ರಶ್ನೆ. "ರೈತವರ್ಗ"ದ ಕುರಿತು ನಮ್ಮ ಧೋರಣೆಗಳನ್ನು ನಿರ್ಧರಿಸುವ ತತ್ವಗಳು ಯಾವುವು? ಅದೇ "ರೈತವರ್ಗ"ದ ಕುರಿತಾದ ನಮ್ಮ ಕಾರ್ಷಿಕ ಕಾರ್ಯಕ್ರಮವಾಗುವುದು.

ಆದರೆ, ಇದು "ದೊಡ್ಡ ಭೂಮಾಲಕ ವರ್ಗ" ಮತ್ತು "ಕೃಷಿಕೂಲಿಗಾರ ವರ್ಗ"ಗಳ ಕುರಿತು ನಮ್ಮ ಧೋರಣೆಗಳನ್ನು ನಿರ್ಧರಿಸುವಷ್ಟು ಸುಲಭವಲ್ಲ. "ಇದಕ್ಕೆ "ರೈತವರ್ಗ"ವು ಒಂದೇ ವರ್ಗವಾಗಿರದಿರುವುದು ಒಂದು ಮುಖ್ಯ ಕಾರಣ". ರೈತವರ್ಗದಲ್ಲಿ ಹಲವು ಪದರಗಳಿವೆ...ಹಲವು ವಿಭಾಗಗಳಿವೆ...ಹಲವು ಗುಂಪುಗಳಿವೆ. ಈ ಹಲವಾರು ಪದರು, ವಿಭಾಗ ಮತ್ತು ಗುಂಪುಗಳಿಂದ ಕೂಡಿದ "ರೈತವರ್ಗ"ದ ಕುರಿತು ನಮ್ಮ ಧೋರಣೆಯನ್ನು ನಿರ್ಧರಿಸುವುದೆಂದರೆ ಈ ಎಲ್ಲಾ ಪದರುಗಳನ್ನು, ವಿಭಾಗಗಳನ್ನು ಮತ್ತು ಗುಂಪುಗಳನ್ನು ಗುರುತಿಸಿ ನಮ್ಮ ಧೋರಣೆಯನ್ನು ಪ್ರತಿಯೊಂದರ ಕುರಿತು ಹೇಗಿರಬೇಕೆಂದು ನಿರ್ಧರಿಸುವುದಾಗಿದೆ.

ಇಲ್ಲಿ ಶ್ರೀಮಂತ ರೈತರು, ಮಧ್ಯಮ ರೈತರು, ಬಡರೈತರು ಎಂಬ ಪದರುಗಳನ್ನು ನಾವು ಸಾಮಾನ್ಯವಾಗಿ ಗುರುತಿಸಬಹುದು. ಈ ವಿಭಾಗಗಳಲ್ಲದೆ ಹಲವು ಪರಂಪರಾಗತ ಗುಡಿಕಸುಬುಗಳನ್ನು ನಡೆಸುತ್ತಿರುವ ಕುಟುಂಬಗಳೂ ಗ್ರಾಮಾಂತರ ಪ್ರದೇಶಗಳಲ್ಲಿರುತ್ತವೆ. ಇವೆಲ್ಲಾ ವಿಭಾಗಗಳ ಕುರಿತು ನಮ್ಮ ಧೋರಣೆಯನ್ನು ನಾವು ನಿರ್ಧರಿಸಬೇಕಾಗಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಈ ಎಲ್ಲಾ ಜನವಿಭಾಗಗಳ ಕುರಿತು ನಮ್ಮ ಸಮಾಜವಾದಿಗಳ ಧೋರಣೆಗಳನ್ನು ನಿರ್ಧರಿಸುವುದಕ್ಕೆ ಕಷ್ಟ; ಯಾಕೆಂದರೆ, "ಅಲ್ಲಿ ಹಳೆಯ ಪಾಳೆಯಗಾರಿ ಸಂಬಂಧಗಳ ಜತೆಯಲ್ಲಿ ಹಾಸುಹೊಕ್ಕಾಗಿ ಹೊಸ ಬಂಡವಾಳಶಾಹಿ ಸಂಬಂಧಗಳು ಬೆಳೆದು ಬರುತ್ತಾ ಇವೆ". ಅಂದರೆ, ಹಳೆಯ ಪರಂಪರಾಗತವಾಗಿ ಬಂದ ಸಂಬಂಧಗಳ ಮತ್ತು ಹೊಸ ಬಂಡವಾಳಶಾಹಿ ಸಂಬಂಧಗಳ ಸಮ್ಮಿಶ್ರ ಹಿನ್ನೆಲೆಯಲ್ಲಿ ಈ ವಿವಿಧ ರೈತ ವಿಭಾಗಗಳ ಸ್ಥಾನಮಾನ, ಹಿತಾಸಕ್ತಿಗಳನ್ನು ಗುರುತಿಸಿ ನಮ್ಮ ಧೋರಣೆಯನ್ನು ನಿರ್ಧರಿಸಬೇಕಾಗಿದೆ. ಆದ್ದರಿಂದ ಅದು ಕಷ್ಟಕರವಾಗಿರುವುದಕ್ಕೆ ಕಾರಣ.

ಅಲ್ಲದೆ, ಇಲ್ಲಿ ನಾವು ಚಾರಿತ್ರಿಕ ಭೌತಿಕವಾದೀ ದೃಷ್ಟಿಕೋಣವನ್ನು ಆಧರಿಸಿದರೆ ಮಾತ್ರ ನಮ್ಮ ಕಾರ್ಷಿಕ ಕಾರ್ಯಕ್ರಮವು ಕ್ರಾಂತಿಕಾರಿಯಾಗಲು ಸಾಧ್ಯ. ಬೇರೆ ಯಾವುದೇ ದೃಷ್ಟಿಯಲ್ಲಿ ನಾವು ಸಮಾಜವಾದಿಗಳು ಈ ರೈತವಿಭಾಗಗಳ ಬಗ್ಗೆ ನಮ್ಮ ಕಾರ್ಯಕ್ರಮವನ್ನು ನಿರ್ಧರಿಸಿದರೆ ಆ ಕಾರ್ಯಕ್ರಮವು "ಕ್ರಾಂತಿಕಾರಿಯಾಗಲಾರದು". ಸುಧಾರಣಾ ಸ್ವರೂಪದ ಕಾರ್ಷಿಕ ಕಾರ್ಯಕ್ರಮವಾಗುವುದು ಖಂಡಿತ!

"ಗ್ರಾಮಾಂತರ ಪ್ರದೇಶಗಳಲ್ಲಿ ಹಳೆಯ ಪಾಳೆಯಗಾರಿ ಪದ್ಧತಿಯ ಅವಶೇಷಗಳನ್ನೆಲ್ಲಾ ಕಿತ್ತುಹಾಕಿ, ಅಲ್ಲಿ ವರ್ಗಹೋರಾಟವು ತೀವ್ರವಾಗಿ ನಡೆಯುವುದಕ್ಕೆ ಹಾದಿ ಸುಗಮವಾಗುವಂತೆ ಮಾಡುವುದೇ ಈ ಕ್ರಾಂತಿಕಾರಿ ಸೂತ್ರವಾಗಿರಬೇಕು." (ಇದನ್ನು ಲೆನಿನರು ತಮ್ಮ ಲೇಖನಗಳಲ್ಲಿ ಬಹಳ ಸ್ಪಷ್ಟವಾಗಿ ನಿರೂಪಿಸಿರುವರು)

ವರ್ಗಹೋರಾಟವೇ "ಸಮಾಜದ ಪ್ರಗತಿಯನ್ನು ಸಾಧಿಸುವ ಸಾಧನವಾಗಿದೆ". "ವರ್ಗ ಹೋರಾಟದ ಮೂಲಕ ಹುಟ್ಟಿಬರುವ ಶಕ್ತಿಯೇ ಚಾರಿತ್ರಿಕವಾಗಿ ಸಮಾಜವನ್ನು ಪ್ರಗತಿಪರವಾಗಿ ಬದಲಾಯಿಸುವ ಶಕ್ತಿಯಾಗಿದೆ"-ಎಂಬುದನ್ನು ನಾವು ಪರಿಗಣನೆಯಲ್ಲಿಟ್ಟರೆ, ಮೇಲಿನ ಕ್ರಾಂತಿಕಾರಿ ಸೂತ್ರವನ್ನು ಅರ್ಥಮಾಡಿಕೊಳ್ಳಲು ಕಷ್ಟವಾಗಲಾರದು.

ಅಂತಹ ವರ್ಗ ಹೋರಾಟವು ತೀವ್ರವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುವಂತಾದರೆ ಮಾತ್ರ ಪೇಟೆಪಟ್ಟಣಗಳಲ್ಲಿ ನಡೆಯುವ ವರ್ಗ ಹೋರಾಟಕ್ಕೆ ಶಕ್ತಿಕೂಡಿಬರುವುದು. ಆಗ ಮಾತ್ರ ಇಡೀ ಸಮಾಜವನ್ನು ಬದಲಾವಣೆ ಮಾಡುವ ಸಾಮಾಜಿಕ ಶಕ್ತಿಗಳನ್ನು ಕ್ರೋಢೀಕರಿಸಲು ಸಹಾಯಕವಾಗುವುದು.

ಆದರೆ, ಅಂತಹ ವರ್ಗಹೋರಾಟವು ತೀವ್ರವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯಲು ಸಾಧ್ಯವಾಗಬೇಕಾದರೆ, "ಎಲ್ಲದಕ್ಕಿಂತಲೂ ಮೊದಲು" ಅಲ್ಲಿರುವ ಹಳೆಯ ಪಾಳೆಯಗಾರಿ ಪದ್ಧತಿಯ ಎಲ್ಲಾ ಅವಶೇಷಗಳನ್ನು ತೊಡೆದುಹಾಕಬೇಕಾಗಿದೆ... ಈ ಅವಶೇಷಗಳು ಬೇರುಬಿಟ್ಟಿರುವ ತನಕ ಗ್ರಾಮಾಂತರ ಪ್ರದೇಶಗಳು "ಜಡಭರಿತವಾಗಿರುತ್ತವೆ. ಚೇತನರಹಿತವಾಗಿರುತ್ತವೆ. ಸಾಂಪ್ರದಾಯಿಕ ಶಕ್ತಿಗಳಿಗೆ ತವರೂರಾಗಿರುತ್ತದೆ".

ಈ ಕರ್ತವ್ಯವನ್ನು ಚಾರಿತ್ರಿಕವಾಗಿ ಯುರೋಪಿಯನ್ ದೇಶಗಳಲ್ಲಿ ಬಂಡವಾಳ ವರ್ಗವು ಪೂರೈಸಿದೆ. ಆದರೆ ಈಗ ಲೋಕದಲ್ಲಿ ಬಂಡವಾಳ ಪದ್ಧತಿಯೇ ತೀವ್ರ ಬಿಕ್ಕಟ್ಟಿನಲ್ಲಿರುವಾಗ, ಈ ಪಾತ್ರವನ್ನು ವಹಿಸುವ ಶಕ್ತಿಯು ಬಂಡವಾಳವರ್ಗಕ್ಕೆ ಇಲ್ಲದಾಗಿದೆ. ಈಗ ಎಲ್ಲಾ ಅರೆವಸಾಹತು ದೇಶಗಳಲ್ಲೂ ಬಂಡವಾಳವರ್ಗವು "ಹಳೆಯ ಪಾಳೆಯಗಾರಿ ಶಕ್ತಿಗಳೊಡನೆ ಸರ್ವರೀತಿಯ ಒಡಂಬಡಿಕೆ ಮಾಡಿಕೊಂಡು ನಿಧಾನವಾಗಿ ಸುಧಾರಣೆಗಳ ಮೂಲಕ ಬಂಡವಾಳಶಾಹಿ ಸಂಬಂಧಗಳನ್ನು ಬಲಪಡಿಸುವ ಹಾದಿಯನ್ನು-ಚಾರಿತ್ರಿಕವಾಗಿ ಅದು ವಹಿಸಿದ ಹಾದಿಗೆ ಭಿನ್ನವಾದ ಹಾದಿಯನ್ನು ಅನುಸರಿಸುತ್ತಿದೆ. "ಚಾರಿತ್ರಿಕವಾಗಿ ಅಂದು ಬಂಡವಾಳವರ್ಗವು ವಹಿಸಿದ ಚಾರಿತ್ರಿಕ ಪಾತ್ರವನ್ನು ಇಂದು ಕಾರ್ಮಿಕ ವರ್ಗವು ವಹಿಸಬೇಕಾಗಿದೆ".

ಆದಕಾರಣ, ನಾವು ಕಾರ್ಮಿಕವರ್ಗದ ಪ್ರತಿನಿಧಿಗಳು ಸಮಾಜವಾದಿಗಳು "ಈ ಕರ್ತವ್ಯವನ್ನು"-ಅಂದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಹಳೆಯ ಪಾಳೆಯಗಾರಿ ಪದ್ಧತಿಯ ಎಲ್ಲಾ ಅವಶೇಷಗಳನ್ನು ಕಿತ್ತುಹಾಕುವ ಕರ್ತವ್ಯವನ್ನು- "ಕ್ರಾಂತಿಕಾರಿ ರೀತಿಯಲ್ಲಿ ಸಾಧಿಸಲು ಪ್ರಯತ್ನಿಸಬೇಕು"... ತೀವ್ರ ಗತಿಯಲ್ಲಿ ಸಾಮೂಹಿಕವಾಗಿ ಕಿತ್ತುಹಾಕುವ, ಆ ಮೂಲಕ ವರ್ಗಹೋರಾಟಕ್ಕೆ ಸುಗಮಗೊಳಿಸುವ, ಕರ್ತವ್ಯವನ್ನು ಪೂರೈಸಬೇಕು.

ಗ್ರಾಮಾಂತರ ಪ್ರದೇಶಗಳ ಎಲ್ಲಾ ಜನವಿಭಾಗಗಳ ಜತೆ ಸೇರಿ ಹಳೆಯ ಸಾಂಪ್ರದಾಯಿಕ ಪಾಳೆಯಗಾರಿ ಅವಶೇಷಗಳನ್ನು ಸಂಪೂರ್ಣವಾಗಿ ಕ್ರಾಂತಿಕಾರಿಯಾಗಿ ಕಿತ್ತುಹಾಕುವುದು ಮತ್ತು ಬಂಡವಾಳಶಾಹಿ ಹಿತಾಸಕ್ತಿಗಳ ವಿರುದ್ಧ ವರ್ಗಹೋರಾಟ ನಡೆಸುವುದಕ್ಕೆ ದಾರಿ ಸುಗಮಗೊಳಿಸುವುದು. ಬಡ ರೈತರು ಮತ್ತು ಕೃಷಿಕೂಲಿಗಾರರ ಶಕ್ತಿಗಳನ್ನು ಕ್ರಾಂತಿಕಾರಿ ನೇತೃತ್ವ ಶಕ್ತಿಗಳಾಗಿ ಬೆಳೆಸುವುದು-ಇದು ನಮ್ಮ ಕಾರ್ಷಿಕ ಕಾರ್ಯಕ್ರಮದ ಮೂರನೇ ಭಾಗವಾಗಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುತ್ತಿರುವ ಇನ್ನೊಂದು 'ಪ್ರಕ್ರಿಯೆ'ಯನ್ನು ನಾವು ಗುರುತಿಸಲು ಮರೆತು ಬಿಡಬಾರದು. ಅದೇ ಹಳೆಯ ಸಾಂಪ್ರದಾಯಿಕ ಗುಡಿಕಸುಬುಗಳು "ಒಂದೆಡೆ" ನಾಶವಾಗುತ್ತಿರುವಾಗಲೇ "ಇನ್ನೊಂದೆಡೆ" ಬಂಡವಾಳಶಾಹಿ ದಿಕ್ಕಿನಲ್ಲಿ ಗುಡಿಕೈಗಾರಿಕೆಗಳು ವಿಕಾಸ ಹೊಂದುತ್ತಿರುವುದು ಮತ್ತು ಸಣ್ಣ ಭೂಮಾಲಕರು ಲಕ್ಷಲಕ್ಷ ಸಂಖ್ಯೆಯಲ್ಲಿ ಬಂಡವಾಳಶಾಹಿ ಆರ್ಥಿಕ ಚಕ್ರದ ಭಾಗವಾಗಿ ಉತ್ಪತ್ತಿ ನಡೆಸುತ್ತಾ ಬರುತ್ತಿರುವುದು.

ಭೂಮಿಯಲ್ಲಿ ಬಂಡವಾಳಗಾರರು ಖಾಸಗಿ ಒಡೆತನವನ್ನು ಸಾಧಿಸಿ ಬಂಡವಾಳಶಾಹಿ ರೀತಿಯಲ್ಲಿ ಕೃಷಿ ಮಾಡುವುದಕ್ಕೆ ಹೊಸ ಬಂಡವಾಳಶಾಹಿ ಭೂ ಪದ್ಧತಿ - ಭೂ ಸಂಬಂಧಗಳು ಎನ್ನುತ್ತೇವೆ. ಇವು ಹೆಚ್ಚಾದಂತೆ ಸಣ್ಣ ಸಣ್ಣ ಭೂ-ಒಡೆತನಗಳು ನಾಶವಾಗಿ ಭೂ-ಕೇಂದ್ರೀಕರಣ(ಹಳೇಭೂ-ಕೇಂದ್ರೀಕರಣದ ಬದಲು) ಉಂಟಾಗುವುದು. ಭೂಕೇಂದ್ರೀಕರಣ ಹೆಚ್ಚೆಚ್ಚಾಗಿ ಕೆಲವೇ ಕೆಲವು ಕೈಗಳಲ್ಲಿ ಭೂಮಿಯು ಖಾಸಗಿ ಒಡೆತನವು ಸೇರುತ್ತಾ ಬಂದಂತೆ ಕೃಷಿಯಲ್ಲಿ ಆಧುನೀಕರಣ - ಯಂತ್ರೋಪಕರಣಗಳ ಉಪಯೋಗ, ಹೊಸ ಬೀಜ, ರಸಗೊಬ್ಬರ, ಕ್ರಿಮಿನಾಶಕ, ಇತ್ಯಾದಿ ಉಪಯೋಗ-ಕೃಷಿ ಕ್ಷೇತ್ರದಲ್ಲೂ 'ಮಾಲಕ-ಕಾರ್ಮಿಕ' ಬಂಡವಾಳಶಾಹಿ ಸಂಬಂಧ-ಕೂಲಿಗಾಗಿ ದುಡಿಯುವ ಪದ್ಧತಿ, ಲಾಭಕ್ಕಾಗಿ ದುಡಿಸುವ ಪದ್ಧತಿ-ಬೆಳೆದು ಬರುವುದು.

ಅದೇ ವೇಳೆ, ಹಳೆಯ ಸಾಂಪ್ರದಾಯಿಕ ಗುಡಿಕೈಗಾರಿಕೆಗಳು ನಶಿಸುತ್ತಾ ಹೋಗಿ ಹೊಸ ಗುಡಿಕೈಗಾರಿಕೆಗಳು ಆಧುನಿಕ ರೀತಿಯಲ್ಲಿ ಬಂಡವಾಳಶಾಹಿ ವ್ಯಾಪಾರಸ್ಥರ ಆಶ್ರಯದಲ್ಲಿ ಬೆಳೆದು ಬರುತ್ತವೆ, ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಕೈಮಗ್ಗ, ಬಡಗಿ ಕಸುಬು, ಚರ್ಮದ ಕಸುಬು, ಮಡಿಕೆಯ ಕಸುಬು ಇತ್ಯಾದಿ-ಕುಸಿಯುತ್ತಿರುವಾಗಲೇ ಬೀಡಿ, ರೇಷ್ಮೆ ಮತ್ತು ಪವರ್ ಲೂಮ್ ಗುಡಿಕೈಗಾರಿಕೆಗಳು ವ್ಯಾಪಕವಾಗಿ ಹರಡುತ್ತಿರುವುದನ್ನು ನಾವು ಕಾಣಬಹುದು. ಆದ ಕಾರಣ, ಎರಡೂ ಸಂಬಂಧಗಳು ಸಮ್ಮಿಶ್ರವಾಗಿರುವುದನ್ನು ಕಾಣಬಹುದು.

ಈ ಎಲ್ಲಾ ಸಂಬಂಧಗಳನ್ನು ಜಾಗ್ರತೆಯಾಗಿ ಗುರುತಿಸಿ"ಹಳೆಯ ಪಾಳೆಯಗಾರಿ ಪದ್ಧತಿಯ ಎಲ್ಲಾ ಅವಶೇಷಗಳನ್ನು ಗ್ರಾಮಾಂತರ ಪ್ರದೇಶದ ಎಲ್ಲಾ ರೈತ ವಿಭಾಗಗಳ ಜತೆ ಸೇರಿ ಸಾಮೂಹಿಕವಾಗಿ ಕಿತ್ತುಹಾಕುವುದೇ ನಮ್ಮ ಸಮಾಜವಾದಿಗಳ ಕಾರ್ಷಿಕ ಕಾರ್ಯಕ್ರಮ. ಆ ಮೂಲಕ ಗ್ರಾಮಾಂತರ ಪ್ರದೇಶಗಳಲ್ಲೂ ನೇರ ವರ್ಗ ಹೋರಾಟವು ನಡೆಯುವುದಕ್ಕೆ ಅವಕಾಶ ಮಾಡಿಕೊಡುವುದೇ ನಮ್ಮ ಕಾರ್ಷಿಕ ಕಾರ್ಯಕ್ರಮವಾಗಿದೆ. ಈ ಕರ್ತವ್ಯವನ್ನು ನಾವು ಪೂರೈಸಿದಾಗ ನಮ್ಮ ರಾಜ್ಯದಲ್ಲೂ "ಪ್ರಜಾಪ್ರಭುತ್ವ ಕ್ರಾಂತಿ" ಸಾಧಿಸಲ್ಪಡುವ ಸಾಧ್ಯತೆ ಬೆಳೆಯುವುದು. ○

ಭೂಸುಧಾರಣೆ ಮತ್ತು ಗ್ರಾಮೀಣ ಜನರ ವರ್ಗೀಕರಣ

ಚೀನದ ಅನುಭವ

ಆರ್. ಚಂದ್ರ

ಕ್ರಾಂತಿಪೂರ್ವದ ಚೀನದ ಭೂವ್ಯವಸ್ಥೆಯು ಅನ್ಯಾಯ ಅಸಮಾನತೆಗಳಿಗೆ ಒಂದು ಕರಾಳ ನಿದರ್ಶನವಾಗಿತ್ತು. ಚೀನದ ಗ್ರಾಮೀಣ ಕುಟುಂಬಗಳಲ್ಲಿ ಸರ್ವಸಾಮಾನ್ಯವಾಗಿ ಶೇ. 4ರಷ್ಟು ಭೂಮಾಲಕರದ್ದಾಗಿದ್ದವು. ಶೇ. 60 ರಷ್ಟು ಜಮೀನು ಅವರ ಸ್ವಾಧೀನದಲ್ಲಿತ್ತು. ಶೇ. 6 ರಷ್ಟು ಶ್ರೀಮಂತ ಕುಟುಂಬಗಳಿದ್ದು, ಅವರ ಸ್ವಾಧೀನದಲ್ಲಿ ಶೇ. 10 ರಷ್ಟು ಜಮೀನು ಇತ್ತು. ಮಧ್ಯಮವರ್ಗದ ರೈತರ ಸಂಖ್ಯೆಯು ಶೇ. 10 ರಷ್ಟಾಗಿದ್ದು, ಅವರು ಶೇ. 10 ರಷ್ಟು ಭೂಸ್ವಾಧೀನ ಹೊಂದಿದ್ದರು. ಚೀನದ ಬಡರೈತರ ಸಂಖ್ಯೆಯು ಶೇ. 50 ರಷ್ಟಿದ್ದರೂ ಅವರು ಶೇ. 20 ಕ್ಕಿಂತಲೂ ಕಡಿಮೆ ಭೂಮಿಯನ್ನು ಪಡೆದಿದ್ದರು. ಉಳಿದ ಶೇ. 30 ರಷ್ಟು ಭೂರಹಿತ ಕೂಲಿಕಾರರ ಕುಟುಂಬಗಳಾಗಿದ್ದವು. ಅರ್ಥಾತ್, ಭೂಮಾಲಕರು ಮತ್ತು ಶ್ರೀಮಂತ ರೈತರು ಗ್ರಾಮೀಣ ಜನಸಂಖ್ಯೆಯ ಶೇ. 10 ಕ್ಕಿಂತಲೂ ಕಡಿಮೆ ಇದ್ದರೂ, ಅವರು ಶೇ. 70-80 ರಷ್ಟು ಭೂಸ್ವಾಮ್ಯ ಹೊಂದಿದ್ದು, ಮಧ್ಯಮವರ್ಗದ ರೈತರನ್ನೂ ಬಡರೈತರನ್ನೂ ಭೂರಹಿತ ಕೂಲಿಕಾರರನ್ನೂ ನಿರ್ದಯೆಯಿಂದ ಶೋಷಿಸುತ್ತಿದ್ದರು, ಹಿಂಸಿಸುತ್ತಿದ್ದರು. ಈ ಶೋಷಿತ ವರ್ಗದವರು ಗ್ರಾಮೀಣ ಜನಸಂಖ್ಯೆಯ ಶೇ.90 ರಷ್ಟಾಗಿದ್ದರೂ ಅವರು ಕೇವಲ ಶೇ. 20-30ರಷ್ಟು ಭೂಸ್ವಾಮ್ಯ ಪಡೆದಿದ್ದರು. ಅವರು ಭೂಮಾಲಕರಿಗೆ ಮತ್ತು ಶ್ರೀಮಂತ ರೈತರಿಗೆ ಗೇಣಿ, ಬಡ್ಡಿ, ಬಿಟ್ಟಿದುಡಿತ, ಪುಕ್ಕಟೆ ಉಡುಗೊರೆ ಉಪಚಾರ, ಇತ್ಯಾದಿಗಳನ್ನು ಸಲ್ಲಿಸುವ ಮೂಲಕ ತಮ್ಮ ದುಡಿಮೆಯ ಬಹುಪಾಲನ್ನು ಶೋಷಕರಿಗೆ ಧಾರೆ ಎರೆಯಬೇಕಿತ್ತು. ವರ್ಷವಿಡೀ ದುಡಿದರೂ ಅವರಿಗೆ ಹೊಟ್ಟೆ ತುಂಬ ಹಿಟ್ಟಿರಲಿಲ್ಲ, ಬೆಚ್ಚಗಿರಲು ಮನೆಗಳಿರಲಿಲ್ಲ.

- ಚೀನದ ಬಡತನಕ್ಕೆ, ಹಿಂದುಳಿಯುವಿಕೆಗೆ, ವಿದೇಶಿ ಆಕ್ರಮಣ ಮತ್ತು ತುಳಿತಕ್ಕೆ ಅಲ್ಲಿನ ಅಸಮಾನತೆಯ ಅನ್ಯಾಯದ ಭೂವ್ಯವಸ್ಥೆಯೇ ಕಾರಣವಾಗಿತ್ತು. ಆ ದೇಶದಲ್ಲಿ ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಐಕ್ಯತೆ, ಕೈಗಾರಿಕೀಕರಣ, ಸುಖಸಂತುಷ್ಟಿ ಇತ್ಯಾದಿಗಳು ಬೇರೂರಿ ಅಭಿವೃದ್ಧಿಯಾಗಬೇಕಾದರೆ, ಅಲ್ಲಿನ ಭೂವ್ಯವಸ್ಥೆ ಬದಲಾಗಬೇಕೆಂದೂ, ಭೂವ್ಯವಸ್ಥೆ ಬದಲಾಗಬೇಕಾದರೆ ರೈತರ ಬೇಡಿಕೆಗಳ ಆಧಾರದಲ್ಲಿ ಪಾಳೆಯಗಾರಿ ಮತ್ತು ಅರೆ-ಪಾಳೆಯಗಾರಿ ಶೋಷಣೆಯನ್ನು ನಿರ್ಮೂಲನಗೊಳಿಸಬೇಕೆಂದೂ, 'ಉಳುವವನೇ ಹೊಲದೊಡೆಯ' ಎಂಬ ಬೇಡಿಕೆಯು ಈಡೇರಬೇಕೆಂದೂ ಚೀನದ ಕಮ್ಯುನಿಸ್ಟ್ ಪಾರ್ಟಿ ಮತ್ತು ಅದರ ಜನತಾ ಸಂಘಟನೆಗಳು ಚೆನ್ನಾಗಿ ತಿಳಿದಿದ್ದವು. ಆ ದಿಸೆಯಲ್ಲಿ ಅವುಗಳು ಕಾರ್ಯೋನ್ಮುಖವಾಗಿದ್ದವು.

ಕ್ರಾಂತಿಪೂರ್ವದ ಇಪ್ಪತ್ತು ವರ್ಷಗಳಲ್ಲಿ, ಮುಖ್ಯವಾಗಿ ಅಂತರ್ಯುದ್ಧ ಕಾಲದ ಎರಡು ವರ್ಷಗಳಲ್ಲಿ ಭೂಸುಧಾರಣೆಯ ಕುರಿತು ಚೀನದ ಕಮ್ಯುನಿಸ್ಟ್ ಪಾರ್ಟಿಯ ನೇತೃತ್ವದಲ್ಲಿದ್ದ ರೈತರು ಅದ್ಭುತ ಸಾಧನೆಗಳನ್ನೂ ಅಪಾರ ಅನುಭವಗಳನ್ನೂ ಗಳಿಸಿದ್ದರು. ಸೆಪ್ಟಂಬರ್ 1947 ರಲ್ಲಿ ಚೀನದ ಕಮ್ಯುನಿಸ್ಟ್ ಪಾರ್ಟಿ ಭೂಸುಧಾರಣೆಯ ಕುರಿತು ಒಂದು ರಾಷ್ಟ್ರೀಯ ಸಮ್ಮೇಳನವನ್ನು ಕರೆಯಿತು. ಆ ಸಮ್ಮೇಳನವು ಗ್ರಾಮೀಣ ಚೀನದ ಭೂವ್ಯವಸ್ಥೆಯ ಕುರಿತು ಕೂಲಂಕುಶವಾಗಿ ಅಧ್ಯಯನ ನಡೆಸಿ ಅಂತಿಮವಾಗಿ ದೇಶಾದ್ಯಂತ ಭೂಸುಧಾರಣೆ ಜಾರಿಗೆ ತರಲು, ಚೀನದ ಕ್ರಾಂತಿಯ ಕರ್ತವ್ಯವನ್ನು ನೆರವೇರಿಸಲು ಒಂದು ಮೂಲಭೂತವಾದ ಕಾರ್ಯಕ್ರಮವನ್ನು ರೂಪಿಸಿತು. ಮುಂದೆ ಅದೇ ಭೂಮಸೂದೆಯಾಗಿ ಜಾರಿಗೆ ಬಂತು.

ಭೂಸುಧಾರಣಾ ಮಸೂದೆಯ ಮುಖ್ಯಾಂಶಗಳು:

ಹೊಸ ಭೂಸುಧಾರಣಾ ಮಸೂದೆಯು ಪಾಳೆಯಗಾರಿ ಮತ್ತು ಅರೆ–ಪಾಳೆಯಗಾರಿ ಪದ್ಧತಿಯ ಎಲ್ಲಾ ವಿಧದ ಶೋಷಣೆಗಳನ್ನು ರದ್ದುಮಾಡಿತು.'ಉಳುವವನೇ ಹೊಲದೊಡೆಯ'ನಾಗುವ ಉದ್ದೇಶ ಸಾಧನೆಗೆ ದಾರಿ ಮಾಡಿಕೊಟ್ಟಿತು. ಎಲ್ಲಾ ಭೂಮಾಲಕರ ಭೂಸ್ವಾಮ್ಯ ಹಕ್ಕುಗಳನ್ನು ನಿರ್ನಾಮ ಮಾಡಿತು. ಪೂರ್ವಿಕರ ಸ್ಮಾರಕಗಳ, ಆಶ್ರಮಗಳ, ದೇವಸ್ಥಾನಗಳ, ಶಾಲೆಗಳ ಮತ್ತು ಇತರ ಸಂಘ ಸಂಸ್ಥೆಗಳ ಭೂಮಾಲಕತ್ವದ ಹಕ್ಕುಗಳನ್ನು ರದ್ದುಗೊಳಿಸಿತು. ಭೂಮಸೂದೆ ಜಾರಿಗೆ ಬರುವ ಮೊದಲಿನ ಗ್ರಾಮೀಣ ಋಣಭಾರಗಳನ್ನೆಲ್ಲಾ (rural debts) ರದ್ದುಗೊಳಿಸಿತು.

ಭೂಮಸೂದೆಯನ್ನು ಕಾರ್ಯಗತಗೊಳಿಸಲು ನ್ಯಾಯಯುತ ಹಕ್ಕುದಾರರು ಯಾರು? ಗ್ರಾಮ ರೈತರ ಸಭೆಗಳು ಮತ್ತು ಅವುಗಳು ಆರಿಸಿದ ಸಮಿತಿಗಳು, ಗ್ರಾಮೀಣ ಬಡರೈತರ ಮತ್ತು ಭೂರಹಿತ ಕೂಲಿಕಾರರ ಸಂಘಗಳು ಮತ್ತು ಅವುಗಳು ಆರಿಸಿದ ಸಮಿತಿಗಳು, ಗ್ರಾಮ, ತಾಲೋಕು, ಜಿಲ್ಲೆ, ಪ್ರಾದೇಶಿಕ ಮತ್ತಿತರ ಮಟ್ಟಗಳ ರೈತರ ಮಹಾಧಿವೇಶನಗಳು ಮತ್ತು ಅವುಗಳು ಆರಿಸಿದ ಸಮಿತಿಗಳು ಭೂಮಸೂದೆಯನ್ನು ಜಾರಿಗೊಳಿಸಲು ನ್ಯಾಯಯುತ ಹಕ್ಕುದಾರರು.

ಕಾರ್ಯಕ್ರಮದಂತೆ, ಹಳ್ಳಿಗಳಲ್ಲಿನ ಭೂಮಾಲಕರ ಎಲ್ಲಾ ಭೂಮಿಯನ್ನೂ ಮತ್ತು ಎಲ್ಲಾ ಸಾರ್ವಜನಿಕ ಭೂಮಿಯನ್ನೂ ಗ್ರಾಮ ರೈತರ ಸಂಘಗಳು ವಶಪಡಿಸಿಕೊಳ್ಳಬೇಕು. ಹೀಗೆ ವಶಪಡಿಸಿಕೊಂಡ ಭೂಮಿಯನ್ನೂ ಗ್ರಾಮದ ಇತರ ಎಲ್ಲಾ ಭೂಮಿಯೊಂದಿಗೆ ಗ್ರಾಮದ ಜನಸಂಖ್ಯೆಗನುಗುಣವಾಗಿ, ಗಂಡು ಹೆಣ್ಣು ಮತ್ತು ಯುವಕ ಮುದುಕ ಎಂಬ ಭೇದವಿಲ್ಲದೆ, ಸರಿಸಮಾನವಾಗಿ ಹಂಚಿಕೊಳ್ಳಬೇಕು. ಭೂಮಿಯ ಕೊರತೆಯನ್ನು ನೀಗಿಸಲು ಹೆಚ್ಚುವರಿ ಭೂಮಿಯನ್ನು ವಶಪಡಿಸಿಕೊಳ್ಳಬೇಕು ಮತ್ತು ಫಲವತ್ತಲ್ಲದ ಭೂಮಿಗೆ ಪೂರಕವಾಗಿ ಫಲವತ್ತಾದ ಭೂಮಿಯನ್ನೂ ವಶಪಡಿಸಿಕೊಳ್ಳಬೇಕು. ಪರಿಣಾಮವಾಗಿ ಎಲ್ಲಾ ಗ್ರಾಮೀಣ ಜನರೂ ಸಾಕಷ್ಟು ವಿಸ್ತಾರದ ಮತ್ತು ಫಲವತ್ತಾದ ಭೂಮಿಯನ್ನು ಸಮಾನವಾಗಿ ಹಂಚಿಕೊಳ್ಳುವಂತಾಗಬೇಕು. ಮರುವಿತರಣೆ ಮಾಡಿದ ಭೂಮಿಯು ಪ್ರತಿಯೊಬ್ಬನ ವೈಯಕ್ತಿಕ ಆಸ್ತಿ ಎಂದು ಪರಿಗಣಿಸಬೇಕು.

ಗ್ರಾಮರೈತರ ಸಂಘಗಳು ಭೂಮಾಲಕರ ಮತ್ತು ಶ್ರೀಮಂತ ರೈತರ ಸಾಕು ಪ್ರಾಣಿಗಳನ್ನೂ, ಕೃಷಿ ಉಪಕರಣಗಳನ್ನೂ, ಮನೆಗಳನ್ನೂ, ಧವಸ ಧಾನ್ಯಗಳನ್ನೂ ಮತ್ತಿತರ ಆಸ್ತಿಗಳನ್ನೂ ವಶಪಡಿಸಿಕೊಳ್ಳಬೇಕು ಮತ್ತು ಅವುಗಳ ಅಭಾವವಿರುವವರಿಗೂ ಬಡಜನರಿಗೂ ಮರುವಿತರಣೆ ಮಾಡಬೇಕು. ವಿತರಣೆಯಲ್ಲಿ ಒಬ್ಬನಿಗೆ ಸರಾಸರಿ ಎಷ್ಟು ಬರುವುದೋ ಅಷ್ಟನ್ನು ಭೂಮಾಲಕರ, ಶ್ರೀಮಂತ ರೈತರ ಕುಟುಂಬದ ಸದಸ್ಯರಿಗೂ ಕೊಡಬೇಕು. ಮರುವಿತರಣೆ ಮಾಡಿದ ಸ್ಥಿರಚರ ಸೊತ್ತುಗಳು ಪ್ರತಿಯೊಬ್ಬನ ವೈಯಕ್ತಿಕ ಆಸ್ತಿಯಾಗಿ ಪರಿಗಣಿಸಬೇಕು. ಹೀಗೆ, ಗ್ರಾಮೀಣ ಜನರಿಗೆಲ್ಲಾ ಉತ್ಪಾದನೆ ಮಾಡಲು ಜೀವನ ನಡೆಸಲು ಭೂಮಿ ಸಿಗುವುದರೊಂದಿಗೇ, ವ್ಯವಸಾಯ ಮಾಡಲು ಬೇಕಾದ ಅತ್ಯಗತ್ಯದ ಸಾಧನ ಸಂಪತ್ತುಗಳೂ ಸಿಗುವಂತಾಗಬೇಕು. ಮರುವಿತರಣೆ ಮಾಡಿದ ಭೂಮಿಯ ಪಟ್ಟಾ (ಒಡೆತನದ) ಪತ್ರಗಳನ್ನು ಸರಕಾರವು ಪ್ರತಿಯೊಬ್ಬನಿಗೂ ನೀಡುವುದು. ಅಂತಹ ಭೂಮಿಯನ್ನು ಪಟ್ಟಾಪತ್ರ ಪಡೆದವರು ತಮಗೆ ಇಚ್ಛೆ ಬಂದಂತೆ ಸ್ವತಂತ್ರವಾಗಿ ಬಳಸಿಕೊಳ್ಳಬಹುದು, ಮಾರಬಹುದು, ಕೊಳ್ಳಬಹುದು, ಅಡವು ಇಡಬಹುದು, ಕೆಲವೊಂದು ಅನಿವಾರ್ಯ ಸಂದರ್ಭಗಳಲ್ಲಿ ಗೇಣಿಗೆ ಕೊಡಬಹುದು (ಉದಾ: ಅಂಗವಿಕಲರು, ಯುದ್ಧಕ್ಕೆ ಹೋದವರು)

ಹೆಚ್ಚುವರಿ ಭೂಮಿಯ ಮರುವಿತರಣೆಯಲ್ಲಿ ಕೈಗಾರಿಕಾ ಸಂಸ್ಥೆಗಳಿಗೆ ಮತ್ತು ವ್ಯಾಪಾರೋದ್ಯಮ ಸಂಸ್ಥೆಗಳಿಗೆ ಸಂಬಂಧಿಸಿದ ಭೂಮಿ ಸೇರರುವುದಿಲ್ಲ. ಹಾಗೆಯೇ, ನಾಡಿನ ಪ್ರಸಿದ್ಧ ಅರಣ್ಯಗಳು, ಚಾರಿತ್ರಿಕ ಪ್ರದೇಶಗಳು ಬೃಹತ್ ವಿದ್ಯುತ್, ನೀರಾವರಿ ಮತ್ತು ಗನಿಪ್ರದೇಶಗಳು ಸೇರಿರುವುದಿಲ್ಲ. ಸ್ಥಿರಚರ ಸೊತ್ತುಗಳನ್ನು ವಶಪಡಿಸಿಕೊಳ್ಳುವಾಗ ಸಿಗುವ ವಿಶೇಷ ಪುಸ್ತಕಾಲಯಗಳನ್ನು, ಕಲಾಕೃತಿಗಳನ್ನು, ಪುರಾತನ ವಸ್ತು ವಿಶೇಷಗಳನ್ನು, ಶಸ್ತ್ರಾಸ್ತ್ರಗಳನ್ನು, ಹೇರಳ ಧನಕನಕಗಳನ್ನು, ಹೆಚ್ಚುವರಿ ಧವಸ ಧಾನ್ಯಗಳನ್ನು ಸರಕಾರಕ್ಕೊಪ್ಪಿಸಬೇಕಾಗುವುದು.

ಸಮಕಾಲೀನ ಪರಿಸ್ಥಿತಿಗಳನ್ನು ಗಮನದಲ್ಲಿರಿಸಿಕೊಂಡು, ಒಂದೆರಡೇ ಸದಸ್ಯರಿರುವ ಬಡರೈತರಿಗೆ ಎರಡು ಮೂರು ಸದಸ್ಯರಿರುವ ಕುಟುಂಬಗಳಿಗೆ ಸಿಗುವಷ್ಟು ಭೂಮಿಯನ್ನು ಗ್ರಾಮ ರೈತರ ಸಭೆಗಳು ವಿಶೇಷ ರಿಯಾಯಿತಿ ತೋರಿಸಿ ಕೊಡಬಹುದು. ವ್ಯವಸಾಯೇತರ ಸ್ವಂತ ಉದ್ಯೋಗ ವೃತ್ತಿಗಳಿಂದ ಜೀವನ ನಡೆಸುತ್ತಿರುವ ಗ್ರಾಮೀಣ ಜನರಿಗೂ ರೈತರಷ್ಟೇ ಭೂಮಿಯನ್ನು ಕೊಡಬಹುದು, ಆದರೆ, ಅವರ ವರಮಾನವು ರೈತರ ಸರಾಸರಿ ವರಮಾನದಷ್ಟೇ ಇದ್ದರೆ, ಅಂತಹವರಿಗೆ ಭೂಮಿವಿತರಣೆ ಮಾಡಬೇಕಾಗಿಲ್ಲ. ವೃತ್ತಿದಾರರಿಗೆ ಸಾಕಷ್ಟು ವರಮಾನ ಇಲ್ಲದಿದ್ದರೆ, ರೈತರ ಸರಾಸರಿ ವರಮಾನ ಬರುವಷ್ಟು ಅವರಿಗೆ ಸ್ವಲ್ಪ ಭೂಮಿಯನ್ನು ಹಂಚಬಹುದು. ಜನತಾ ವಿಮೋಚನಾ ಸೈನ್ಯದ, ಪ್ರಜಾಸತ್ತಾತ್ಮಕ ಸರಕಾರಗಳ, ಎಲ್ಲಾ ಜನತಾ ಸಂಘಟನೆಗಳ ಕಾರ್ಯಕರ್ತರ ಗ್ರಾಮೀಣ ಕುಟುಂಬಗಳಿಗೆ ರೈತರಷ್ಟೇ ಭೂಮಿ ಮತ್ತು ಇತರ ಆಸ್ತಿಗಳನ್ನು ಹಂಚಬೇಕು. ಹಿಂದಿನ ಚಿಯಾಂಗ್ ಕೈಶೇಕ್‌ನ ಸೈನ್ಯದ, ಸರಕಾರದ, ಪಕ್ಷದ ಸದಸ್ಯರ ಮತ್ತು ಇತರ ವೈರಿ ಗುಂಪುಗಳ ಸದಸ್ಯರ ಗ್ರಾಮೀಣ ಕುಟುಂಬಗಳಿಗೆ ರೈತರಿಗೆ ಸಿಗುವಷ್ಟು ಭೂಮಿ ಮತ್ತಿತರ ಆಸ್ತಿಗಳನ್ನು ಹಂಚಬೇಕು. ರಾಷ್ಟ್ರದ್ರೋಹಿಗಳಿಗೆ, ವೈರಿಗಳೊಂದಿಗೆ ಸಹಕರಿಸಿದವರಿಗೆ ಮತ್ತು ಅಂತರ್ಯುದ್ಧದ ಅಪರಾಧಿಗಳಿಗೆ ಭೂಮಿ ಮತ್ತಿತರ ಆಸ್ತಿಗಳನ್ನು ಹಂಚಕೂಡದು. ಆದರೆ ಅವರ ಗ್ರಾಮೀಣ ಕುಟುಂಬಗಳು ಅಪರಾಧಗಳಲ್ಲಿ ಪಾತ್ರ ವಹಿಸದಿದ್ದರೆ, ಅವುಗಳಿಗೆ ರೈತರಿಗೆ ಸಿಗುವಷ್ಟೇ ಭೂಮಿ ಮತ್ತಿತರ ಆಸ್ತಿಗಳನ್ನು ಹಂಚಬೇಕು. ಈ ಎಲ್ಲಾ ವಿಷಯಗಳಲ್ಲಿ ಸ್ಥಳೀಯ ರೈತಸಂಘಟನೆಗಳದ್ದೇ ಮುಖ್ಯ ಪಾತ್ರ.

ಭೂಸುಧಾರಣಾ ಕಾಯಿದೆಯನ್ನು ಯಶಸ್ವಿಯಾಗಿ ಮತ್ತು ಸಂಪೂರ್ಣವಾಗಿ ಕಾರ್ಯಗತಗೊಳಿಸಲು ಜನತಾ ನ್ಯಾಯಾಲಯಗಳನ್ನು ಸ್ಥಾಪಿಸಲಾಗುವುದು; ಜನತಾ ನ್ಯಾಯಾಲಯಗಳ ಸದಸ್ಯರನ್ನು ರೈತರ ಸಭೆಗಳೂ (ಬಡರೈತರು ಮತ್ತು ಭೂರಹಿತ ಕೂಲಿಕಾರರು) ಮಹಾಸಭೆಗಳೂ (ಮಧ್ಯಮವರ್ಗದ ರೈತರೂ ಸೇರಿ) ಆರಿಸುತ್ತವೆ; ಕೆಲವು ಸದಸ್ಯರನ್ನು ಸರಕಾರ ನೇಮಿಸುತ್ತದೆ. ಈ ನ್ಯಾಯಾಲಯಗಳಲ್ಲಿ ಭೂಸುಧಾರಣೆಯ ವಿರುದ್ಧ ಪ್ರತಿಭಟಿಸುವವರನ್ನೂ, ಭೂಸುಧಾರಣಾ ಕಾನೂನನ್ನು ಉಲ್ಲಂಘಿಸುವವರನ್ನೂ ವಿಚಾರಿಸಿ ಶಿಕ್ಷಿಸಲಾಗುವುದು.

ಭೂಸುಧಾರಣೆಯನ್ನು ಕಾರ್ಯಗತಗೊಳಿಸುವಾಗ ಶಿಸ್ತು ಕಾಪಾಡಲು, ಜನರ ಸಂಪತ್ತನ್ನು ರಕ್ಷಿಸಲು, ಹೆಚ್ಚುವರಿ ಭೂಮಿಯನ್ನು ಸ್ಥಿರಚರ ಆಸ್ತಿಗಳನ್ನು ವಶಪಡಿಸಿಕೊಳ್ಳಲು, ಅವುಗಳ ಪಟ್ಟಿಯಾದಿ ತಯಾರಿಸಲು, ಅವುಗಳು ನಷ್ಟವಾಗದಂತೆ, ನಾಶವಾಗದಂತೆ, ಕಳವು ಆಗದಂತೆ ರಕ್ಷಿಸಲು ಗ್ರಾಮ ರೈತರ ಸಭೆಗಳು ಅಥವಾ ಅವುಗಳ ಸಮಿತಿಗಳು ಸೂಕ್ತ ವಿಧಿ ವಿಧಾನಗಳನ್ನು ರೂಪಿಸುವವು ಮತ್ತು ಯೋಗ್ಯ ಸಿಬ್ಬಂಧಿಗಳನ್ನು ತರಬೇತು ಮಾಡಿ ನೇಮಿಸುವವು. ಭೂಮಿಯ ಮತ್ತು ಸ್ಥಿರಚರ ಆಸ್ತಿಗಳ ನ್ಯಾಯಯುತ ಮರುವಿತರಣೆಗೆ ಅಡ್ಡಿ ಉಂಟುಮಾಡುವ ಉದ್ದೇಶದಿಂದ ಪ್ರಾಣಿಗಳನ್ನು ಕೊಲ್ಲುವುದು, ಮರಗಳನ್ನು ಉರುಳಿಸುವುದು, ವ್ಯವಸಾಯ ಉಪಕರಣಗಳನ್ನು, ನೀರಾವರಿ ಕೆಲಸಗಳನ್ನು, ಕಟ್ಟಡಗಳನ್ನು, ಬೆಳೆಗಳನ್ನು, ಅವಶ್ಯಕ ವಸ್ತುಗಳನ್ನು ಹಾಳುಗೆಡಹುವುದು ಮತ್ತು ದರೋಡೆ ಕಳ್ಳತನ, ಅವ್ಯವಹಾರ, ಇತ್ಯಾದಿಗಳಲ್ಲಿ ತೊಡಗುವುದು, ಇವುಗಳನ್ನೆಲ್ಲಾ ಪತ್ತೆಹಚ್ಚಿ ಅಪರಾಧಿಗಳನ್ನು ವಿಚಾರಿಸಿ ಶಿಕ್ಷಿಸಲು ಜನತಾ ನ್ಯಾಯಾಲಯಗಳಿಗೆ ಸಹಕರಿಸುವುದು ರೈತಸಂಘಗಳ ಹೊಣೆಗಾರಿಕೆಯಾಗಿದೆ.

ಬಹುಸಂಖ್ಯಾತ ಜನರ ಹಿತಾಸಕ್ತಿಗಳಿಗನುಗುಣವಾಗಿ ಭೂಸುಧಾರಣೆಯನ್ನು ಕಾರ್ಯಗತಗೊಳಿಸಲು ಸರಕಾರವು ಜನರ ಪ್ರಜಾಪ್ರಭುತ್ವದ ಹಕ್ಕುಗಳನ್ನು ರಕ್ಷಿಸುವುದು. ರೈತರಿಗೆ ಮತ್ತವರ

(17ನೇ ಪುಟ ನೋಡಿ)

ಶೋಷಣೆ, ಜಾತಿ ಮತ್ತು ಆಯೋಗಗಳು

ಕೆ. ರಾಮಚಂದ್ರ ನಾಯಕ್

ಸಾಮಾಜಿಕ ಶೋಷಣೆಯನ್ನು ಗುರುತಿಸುವಾಗ ಆಯಾ ದೇಶಗಳ ವಿವಿಧ ಭಾಗಗಳ ಸ್ಥಳೀಯ ಪರಿಸ್ಥಿತಿಗಳನ್ನು ಐತಿಹಾಸಿಕವಾಗಿ ಅಭ್ಯಾಸ ಮಾಡುವುದು ಮುಖ್ಯವಾಗುತ್ತದೆ. ಜಗತ್ತಿನ ಹಲವು ಭಾಗಗಳಲ್ಲಿ ಶೋಷಕ ವರ್ಗಗಳು ಮತ್ತು ಶೋಷಣೆಗೆ ಒಳಗಾದ ವರ್ಗಗಳು ಇರುವುದಾದರೂ ಶೋಷಣೆಯ ರೂಪಗಳು ಒಂದೇ ವಿಧವಾಗಿರುವುದಿಲ್ಲ. ಹಲವು ರೀತಿಯಲ್ಲಿರುತ್ತವೆ; ವರ್ಣದ ಹೆಸರಿನಲ್ಲಿ ಶೋಷಣೆ, ಜಾತಿಯ ಹೆಸರಿನಲ್ಲಿ ಶೋಷಣೆ ಇತ್ಯಾದಿ... ಭಾರತದಲ್ಲಿ ಜಗತ್ತಿನ ಇನ್ನಾವ ದೇಶದಲ್ಲೂ ಕಾಣಲಾರದಷ್ಟು ಬಗೆಯ ವಿವಿಧ ಜಾತಿಗಳಿವೆ. ಇವುಗಳು ಆರ್ಥಿಕವಾಗಿ ಸಾಮಾಜಿಕವಾಗಿ ಶೈಕ್ಷಣಿಕವಾಗಿ ವ್ಯವಸ್ಥಿತ ರೀತಿಯ ಶೋಷಣೆಗೆ ಅವಕಾಶ ಮಾಡಿಕೊಟ್ಟಿವೆ. ಆಶ್ಚರ್ಯವೆಂದರೆ ಈ ಶೋಷಣೆ ಧರ್ಮದ ಹೆಸರಿನಲ್ಲೇ ಅಂಗೀಕಾರ ಮುದ್ರೆಯನ್ನು ಪಡೆದಿರುವುದು. ಹಾಗೆಯೇ ಹಲವು ಕಾಲಘಟ್ಟಗಳಲ್ಲಿ ಶೋಷಣೆಗೆ ಒಳಗಾದ ಜನರು ತಮ್ಮ ಶೋಷಕರ ವಿರುದ್ಧ ಪ್ರತಿಭಟಿಸಿರುವುದೂ ಉಂಟು.

ಭಾರತದಲ್ಲಿ ಒಂದೊಂದು ಉದ್ಯೋಗದಲ್ಲಿ ನಿರತರಾದವರಿಗೆ ಒಂದೊಂದು ವಿಶಿಷ್ಟವಾದ ಹೆಸರನ್ನು ಕೊಟ್ಟು ಕರೆಯುವ ರೂಢಿ ಋಗ್ವೇದ ಕಾಲದಷ್ಟು ಹಳೆಯದು. ಮಣ್ಣಿನ ಪಾತ್ರೆಗಳನ್ನು ಮಾಡುವವನು ಕುಂಬಾರ, ಎಣ್ಣೆ ತೆಗೆಯುವವನು ತೈಲಿಕ, ಚರ್ಮದ ಕೆಲಸಮಾಡುವವನು ಚರ್ಮಕಾರ, ಬಟ್ಟೆ ಒಗೆಯುವವನು ರಜಕ ಹೀಗೆ, ಕುವಿಂದ, ತುನ್ನನಾಯ, ಬುರುಡ (ಮೇದಾರ) ಇವುಕೂಡ ಉದ್ಯೋಗವನ್ನು ಅನುಸರಿಸಿ ಬಂದ ಜಾತಿಯ ಹೆಸರುಗಳು. ವೇದ ಕಾಲದಷ್ಟು ಹಿಂದೆಯೇ ರೂಪುಗೊಂಡ ಈ ಜಾತಿ ಉಪಜಾತಿಗಳಿಗೆ ವಂಶಪಾರಂಪರ್ಯವಾಗಿ ರೂಢಿಸಿಕೊಂಡು ಬಂದ ಅವರವರ ಕಸಬುಗಳೇ ಮೂಲ ಎಂಬುದು ಮಹತ್ವದ ಸಂಗತಿ.

ಋಗ್ವೇದದ ಪುರುಷ ಸೂಕ್ತದಲ್ಲಿ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರುಗಳು ಕ್ರಮವಾಗಿ ವಿಶ್ವಕರ್ಮನ ಮುಖ, ತೋಳು, ತೊಡೆ, ಹಾಗೂ ಪಾದಗಳಿಂದ ಹುಟ್ಟಿದವರೆಂದು ಹೇಳಲಾಗಿದೆ. ಇದರಿಂದ ಆಗಿನ ಸಮಾಜದಲ್ಲಿ ಶೂದ್ರರಿಗಿದ್ದ ಸ್ಥಾನವನ್ನು ಅವರ ಸ್ಥಿತಿಗತಿಯನ್ನೂ ನಾವು ತಿಳಿಯಬಹುದು. ಈ ಅಸಮಾನತೆಯಿಂದ ಮತ್ತು ವ್ಯವಸ್ಥಿತವಾಗಿ ನಡೆಯುತ್ತಿದ್ದ ಶೋಷಣೆಯಿಂದ ಅಸಂತುಷ್ಟರಾಗಿ ಶೂದ್ರರು ಒಮ್ಮೊಮ್ಮೆ ಕಾರುತ್ತಿದ್ದ ಜ್ವಾಲಾಮುಖಿಯನ್ನು ಶಮನಗೊಳಿಸಲು ಆಳುವ ವರ್ಗಗಳು ಕೆಲವು ಸುಧಾರಣೆಗಳನ್ನು ತರಬೇಕಾಯಿತು. ಇದು ಆಳುವ ವರ್ಗದ ಹಿತದೃಷ್ಟಿಯಿಂದಲೇ ತೀರ ಅಗತ್ಯವಾಗಿತ್ತು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಗುಲಾಮರು ಮತ್ತು ಸ್ತ್ರೀಯರ ವಿಷಯದಲ್ಲಿ ಕೆಲವು ಸೌಲಭ್ಯಗಳನ್ನು ರಿಯಾಯಿತಿಗಳನ್ನು ದೊರಕಿಸಿಕೊಟ್ಟಿರುವುದನ್ನು ಕಾಣಬಹುದು. ಆದರೆ ಈ ಸುಧಾರಣೆಗಳಿಂದ ಶೋಷಣೆಯನ್ನು ಕೊನೆಗಾಣಿಸುವುದಕ್ಕಾಗಲಿ ಮಾನವೀಯ ಮೌಲ್ಯಗಳನ್ನು ಪೂರೈಸುವುದಕ್ಕಾಗಲಿ ಸಾಧ್ಯವಾಗಲಿಲ್ಲ. ಆಳುವವರ ದೃಷ್ಟಿಯಿಂದ ಇಂತಹ ಸುಧಾರಣೆಯ ಪ್ರಯತ್ನಗಳಿಗೆ ಸ್ವಲ್ಪ ಯಶಸ್ಸು ಸಿಕ್ಕಿರಬಹುದು, ಅಷ್ಟೆ.

ವೇದಗಳ ಕಾಲದಲ್ಲಿ ಜಾತೀಯ ಭಾವನೆಗಳಿಗೆ ಎಡೆ ಇರಲಿಲ್ಲವೆಂದು ವಾದಿಸುವವರಿದ್ದಾರೆ. ಪ್ರಾಚೀನ ಭಾರತದಲ್ಲಿ ವೃತ್ತಿಗೌರವ ಇದ್ದಿತೆಂದು ಒಬ್ಬನು ಕೇವಲ ಹುಟ್ಟಿನಿಂದ ಪುರೋಹಿತನಾಗಲು ಸಾಧ್ಯವಿರಲಿಲ್ಲವೆಂದು, ಒಂದೇ ತಾಯಿಯ ಮಕ್ಕಳಲ್ಲಿ ಒಬ್ಬನು ಮಂತ್ರಪಠನ ಮಾಡುವವನಾದರೆ ಇನ್ನೊಬ್ಬನು ವೈದ್ಯನಾಗಿದ್ದು ಅವರ ತಾಯಿ ಕಾಳು ಬೀಸುವವಳಾಗಿರುವುದಕ್ಕೂ ಸಾಧ್ಯವಿತ್ತೆಂದು ಕೆಲವರು ವಾದಿಸುತ್ತಾರೆ. ಈ ನಿದರ್ಶನದಿಂದ ಮೇಲು ಕೀಳು ಭಾವನೆ ಇಲ್ಲದೆ ಬೇಕಾದ ಉದ್ಯೋಗದಲ್ಲಿ ತೊಡಗಲು ಸಾಧ್ಯವಿತ್ತೆಂದು ಅಭಿಪ್ರಾಯವಾಗುವುದಾದರೂ ಚಂಡಾಲ, ಚರ್ಮಕಾರ, ಬೇಡ, ಮಲಮೂತ್ರಗಳನ್ನು ಎತ್ತಿ ಹಾಕುವ ಜಲಗಾರ, ಪಲ್ಲಕ್ಕಿ ಹೊರುವವ ಮುಂತಾದ ಅತ್ಯಂತ ಕೀಳುಮಟ್ಟದ ಕಾರ್ಯಗಳನ್ನು ಮಾಡುವವರು ತೀರ ಕೆಳದರ್ಜೆಯವರೆಂದು ಪರಿಗಣಿಸುತ್ತಿದ್ದು ಅಂಥವರು ಅಂತ್ಯಜರೆನಿಸಿಕೊಂಡರು.

ಹಿಂದೂ ಸಮಾಜದಲ್ಲಿರುವ ಈ ಅಸಮಾನತೆಗಳ ವಿರುದ್ಧ ಅನೇಕ ಕರುಣಾಳುಗಳಾದ ಸುಧಾರಕರು ಹೋರಾಟ ನಡೆಸಲು ಪ್ರಯತ್ನಿಸಿ ಸಾಧ್ಯವಾಗದೆಹೋಗಿ ಹಿಂದೂ ಧರ್ಮದ ಪ್ರಕಾರವಾಗಿಯೇ ಹುಟ್ಟಿಕೊಂಡಿದ್ದ ಪುನರ್ಜನ್ಮ ಸತ್ಕರ್ಮದ ಫಲವಾಗಿ ಬರುವ ಭಾಗ್ಯವಿಶೇಷ, ಸ್ವರ್ಗಸುಖ ಇತ್ಯಾದಿ ಕಲ್ಪನೆಗಳಿಗೇ ಶರಣಾಗಬೇಕಾಯಿತು. ಪರಲೋಕದಲ್ಲಿ ಸಿಗುವ ಸಮಾನತೆಗಾಗಿ ಇಹಲೋಕದಲ್ಲಿ ಮತ್ತಷ್ಟು ಶೋಷಣೆಗೆ ಒಳಗಾಗಿ ಪಡುವ ಕಷ್ಟವನ್ನು ಸಮರ್ಥಿಸುವಂತಹ, ಇಹಲೋಕದಲ್ಲಿ ದೊರೆಯದ್ದು ಪರಲೋಕದಲ್ಲಿ ಪ್ರಾಪ್ತವಾಗುತ್ತದೆ ಎಂಬಂಥ ವಿಕೃತ ನಂಬಿಕೆಗಳು ಹುಟ್ಟಿಕೊಂಡುವು. ಭಕ್ತಿಮಾರ್ಗ ಮತ್ತು ದಾಸಪಂಥಗಳು ಇಂತಹ ನಂಬಿಕೆಗಳನ್ನು ಪೋಷಿಸಿಕೊಂಡು ಬಂದುವು.

ಹನ್ನೆರಡನೆಯ ಶತಮಾನದಲ್ಲಿ ಜನಿಸಿದ್ದ ಬಸವಣ್ಣನವರು ಕಾಯಕವೇ ಕೈಲಾಸವೆಂದು ಹೇಳಿ ಜನರ ವೃತ್ತಿಗಳ ಬಗೆಗೆ ಗೌರವ ಭಾವನೆಯನ್ನು ಬೆಳೆಸಲು ಯತ್ನಿಸಿದರು. ಹುಟ್ಟಿನಿಂದ ಜಾತಿ ಎಂಬ ನಂಬಿಕೆಯನ್ನು ಅಲ್ಲಗಳೆದರು. ಆದರೆ ಶೋಷಿತ-ಶೋಷಕ ವ್ಯವಸ್ಥೆಯನ್ನು ನಿರ್ಮೂಲನ ಮಾಡಲು ರಾಷ್ಟ್ರದ ಉತ್ಪಾದನಾ ಸಾಧನಗಳು ಸಾಮಾಜಿಕ ನಿಯಂತ್ರಣಕ್ಕೆ ಒಳಪಡಬೇಕೆಂಬುದನ್ನು ಕಂಡುಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ.

ಬ್ರಿಟಿಷರು ಭಾರತವನ್ನು ಹೊಕ್ಕ ನಂತರ ಇಲ್ಲಿನ ಜಾತಿ ಪದ್ಧತಿಯನ್ನು ತಮ್ಮ ಆಡಳಿತಕ್ಕೆ ಅನುಕೂಲವಾಗುವಂತೆ ಉಪಯೋಗಿಸಿಕೊಂಡರು. ಕೆಲವು ಮೇಲು ಜಾತಿಗಳಿಗೆ ಮೀಸಲಾಗಿದ್ದ ವಿದ್ಯೆಯನ್ನು ತಮ್ಮ ಅನುಕೂಲಕ್ಕಾಗಿ ಕೀಳು ಜಾತಿಯವರಿಗೂ ವಿಸ್ತರಿಸಬೇಕಾಯಿತು. ಇದರಿಂದ ಅಲ್ಪಸ್ವಲ್ಪ ಶಿಕ್ಷಣದ ಲಾಭವನ್ನು ಪಡೆದ ಹಿಂದುಳಿದವರು ತಮ್ಮ ಏಳಿಗೆಯನ್ನು ಕುರಿತು ಯೋಚಿಸುವಂಥ ಅವಕಾಶವನ್ನು ಪಡೆದರು. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವವೂ ಇವರ ಮೇಲೆ ಪರಿಣಾಮವನ್ನುಂಟುಮಾಡಿತು. ಇವರು ತಮ್ಮ ಸ್ಥಾನಮಾನಗಳನ್ನು ಸುಧಾರಿಸಿಕೊಳ್ಳಲು ಸಣ್ಣಪುಟ್ಟ ಮನವಿಗಳನ್ನು ಆಳುವ ಪ್ರಭುಗಳಿಗೆ ಕೊಡುವುದರ ಮೂಲಕ ಒಂದು ಹೋರಾಟದ ಯತ್ನವನ್ನು ಮಾಡಿದ್ದರ ಫಲವಾಗಿ ದೇಶದ ಕೆಲವು ಭಾಗಗಳಲ್ಲಿ ಹಿಂದುಳಿದವರ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ ಸಣ್ಣಪುಟ್ಟ ಸುಧಾರಣೆಗಳನ್ನು ಜಾರಿಗೆ ತರಲು ಅಧಿಕಾರಶಾಹಿಯು ಪ್ರಯತ್ನಿಸಿತು. ಈ ಸುಧಾರಣೆಗಳನ್ನು ತರುವಾಗಲೂ ಬ್ರಿಟಿಷರು ರಾಜಕೀಯವಾಗಿ ತಮ್ಮ ಪ್ರಾಬಲ್ಯವನ್ನು ಕಾಯ್ದುಕೊಳ್ಳುವ ಮುನ್ನೆಚ್ಚರಿಕೆಯನ್ನು ವಹಿಸದೆ ಇರಲಿಲ್ಲ.

ಭಾರತಕ್ಕೆ ಸ್ವಾತಂತ್ರ್ಯ ಬಂದ ಈ ಮೂವತ್ತು ವರ್ಷಗಳಿಂದಲೂ ಆಳುವ ಪಕ್ಷಗಳು ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಲು ಕ್ರಮಕೈಗೊಂಡಿರುವುದಾಗಿ ಜಂಭಕೊಚ್ಚಿಕೊಂಡರೂ ಈ ಅಸಮಾನತೆಯ ಕಂದರ ಏನೂ ಕಿರಿದಾಗಿಲ್ಲ. ಅದಕ್ಕೆ ಬದಲಾಗಿ ಈ ಕಂದರವು ಇನ್ನಷ್ಟು ಅಗಲವಾಗುತ್ತಿದ್ದು ಕೆಳವರ್ಗಗಳಿಗೆ ಕೊಟ್ಟಿರುವ ಅಲ್ಪಸ್ವಲ್ಪ ಸಾಮಾಜಿಕ ರಾಜಕೀಯ ಮತ್ತು ಆರ್ಥಿಕ ಸೌಲತ್ತುಗಳು ಆಳುವ ಪಕ್ಷದ ಮುಂದುವರಿದವರು ಅಧಿಕಾರದಲ್ಲಿ ನಿರಂತರವಾಗಿ ಉಳಿಯಲು ಬೇಕಾದ ಪ್ರಲೋಭನೆಗಳು ಮಾತ್ರವಾಗಿವೆ. ಕೆಲವು ಜಾತಿಗಳಂತೂ ಆಳುವ ಪಕ್ಷದ ಖಾಯಂ ಓಟು ಬ್ಯಾಂಕುಗಳಾಗಿ ಪರಿವರ್ತಿಸಲ್ಪಟ್ಟಿವೆ.

ದಕ್ಷಿಣ ಭಾರತದಲ್ಲಿ ಇದ್ದ ಹಿಂದೂ ಸಮಾಜದೊಳಗಿನ ಈ ಜಾತಿ ಹೋರಾಟವು ಈಗ ದೊಡ್ಡದಾಗಿ ಉತ್ತರ ಭಾರತವನ್ನು ವ್ಯಾಪಿಸುತ್ತಿದೆ. ಬಿಹಾರ ಮತ್ತು ಉತ್ತರ ಪ್ರದೇಶಗಳಲ್ಲಿ ಹಿಂದುಳಿದ ವರ್ಗಗಳಿಗೆ ಕಲ್ಪಿಸಿರುವ ಶೈಕ್ಷಣಿಕ ಸೌಲತ್ತುಗಳು ಮತ್ತು ಉದ್ಯೋಗ ಮೀಸಲಾತಿ ಕ್ರಮಗಳ ಬಗ್ಗೆ ನಡೆಯುತ್ತಿರುವ ದೊಂಬಿ ಅಂತರ್ಯುದ್ಧಗಳನ್ನು ದಿನಬೆಳಗಾದರೆ ಪತ್ರಿಕೆಯಲ್ಲಿ ಓದುತ್ತೇವೆ.

ನಿಮ್ನವರ್ಗದವರೂ ಪರಿಶಿಷ್ಟವರ್ಗದವರು ಮತ್ತು ಇತರ ದುರ್ಬಲ ವರ್ಗದವರು ಸಾಮಾಜಿಕ ಅಂತಸ್ತನ್ನು ಪಡೆಯಬೇಕಾದರೆ ಶಿಕ್ಷಣದಿಂದ ಮಾತ್ರ ಸಾಧ್ಯ. ಆದರೆ ಮಕ್ಕಳಿಗೆ ಹೊಟ್ಟೆಗೆ ಮತ್ತು ಬಟ್ಟೆಗೆ ಒದಗಿಸದ ಈ ಶಿಕ್ಷಣ ಯಾವ ಲಾಭಕ್ಕಾಗಿ ಎಂದು ಯೋಚಿಸುವ ಪರಿಸ್ಥಿತಿ ಬಂದಿದೆ. ನಮ್ಮ ರಾಜ್ಯಾಂಗದ ಪ್ರಕಾರ ಆಸ್ತಿಯ ಹಕ್ಕು ಒಂದು ಮೂಲಭೂತ ಹಕ್ಕಾಗಿದೆ. ಆದರೆ ವಿದ್ಯಾಭ್ಯಾಸವು ಮೂಲಭೂತ ಹಕ್ಕಲ್ಲ. ಆಸ್ತಿಯನ್ನು ಎಂದೆಂದೂ ಸಂಪಾದಿಸಲು ಸಾಧ್ಯವಿಲ್ಲ ಎಂಬಂಥ ಒಬ್ಬನಿಗೆ ಆಸ್ತಿಯ ಹಕ್ಕು ಮೂಲಭೂತ ಹಕ್ಕಾದದ್ದರಿಂದ ಪ್ರಯೋಜನವೇನೂ ಆಗಲಿಲ್ಲ. ವಿದ್ಯೆಯು ಮೂಲಭೂತ ಹಕ್ಕಾಗಿದ್ದು ಪ್ರತಿಯೊಬ್ಬನಿಗೂ ಅದು ದೊರೆಯುವಂತೆ ಇದ್ದಿದ್ದರೆ ಸಮಾಜದೊಳಗಣ ಅಸಮಾನತೆಯ ಬಗ್ಗೆ ಅವನ ಪ್ರಜ್ಞೆ ಜಾಗೃತಗೊಂಡು ಆ ಮೂಲಕ ಅಸಮಾನತೆಯನ್ನು ತೊಡೆದುಹಾಕುವ ಹೋರಾಟದಲ್ಲಿ ಅವನು ಭಾಗಿಯಾದಾನು, ಈ ಕಾರಣದಿಂದಲೇ ಪ್ರತಿಷ್ಠಿತ ಆಳುವವರ್ಗವು ವಿದ್ಯೆ ಮೂಲಭೂತ ಹಕ್ಕಾಗುವುದನ್ನು ತಪ್ಪಿಸಿ ದುರ್ಬಲ ವರ್ಗದವರನ್ನು ನಿರಂತರ ಅಜ್ಞಾನದಲ್ಲಿಟ್ಟು ತನ್ನ ಅಧಿಕಾರವನ್ನು ಖಾಯಂಗೊಳಿಸಿಕೊಳ್ಳುವ ಸನ್ನಾಹಮಾಡಿದೆ.

ಸಾಂಕೇತಿಕವಾಗಿ ಹಿಂದುಳಿದವರಿಗೆ ರಾಜಕೀಯ ಸ್ಥಾನಮಾನಗಳನ್ನು ಕೊಟ್ಟಿದ್ದರೂ ಅಂತಹ ರಾಜಕೀಯ ಸ್ಥಾನಗಳನ್ನು ಬಹುಮಟ್ಟಿಗೆ ಶೂದ್ರರಲ್ಲೇ ಇತ್ತೀಚೆಗೆ ಬೆಳೆದಿರುವಂಥ ಹೊಸ ಶ್ರೀಮಂತ ವರ್ಗವೇ ಕಬಳಿಸಿರುವುದನ್ನು ಕಾಣಬಹುದು. ಇವರಿಗೆ ದೊರಕಿರುವ ಸರ್ಕಾರಿ ಹುದ್ದೆಗಳಲ್ಲಿ ಮೊದಲ ಮತ್ತು ಎರಡನೆ ದರ್ಜೆ ಹುದ್ದೆಗಳು ಪ್ರತಿಷ್ಠಿತ ವರ್ಗಗಳವರಿಗೂ ಮೂರನೆದರ್ಜೆ ಹುದ್ದೆಗಳು ಮಧ್ಯಮ ವರ್ಗದವರಿಗೂ ಸಿಕ್ಕಿರುವುದನ್ನು ಕಾಣಬಹುದು. ನಾಲ್ಕನೆಯ ದರ್ಜೆಯ ನೌಕರಿಗಳಲ್ಲಿ ಬಹುಪಾಲು ನಿಮ್ನ ಮತ್ತು ಹಿಂದುಳಿದ ವರ್ಗದವರಿಗೆ ದೊರೆತಿವೆ. ಅಧಿಕ ಶುಲ್ಕತೆತ್ತು ವಿಶೇಷ ಸೌಲತ್ತುಗಳಿರುವ ಕಾನ್ವೆಂಟ್ ಮತ್ತಿತರ ಇಂಗ್ಲೀಷ್ ಶಿಕ್ಷಣ ಸಂಸ್ಥೆಗಳಲ್ಲಿ ಓದುವ ಮೇಲುವರ್ಗದ ಮಕ್ಕಳೊಡನೆ ಹೊಟ್ಟೆಗೆ ಹಿಟ್ಟಿಲ್ಲದ ತೊಡಲು ಬಟ್ಟೆಯಿಲ್ಲದ ಪಠ್ಯಪುಸ್ತಕಗಳನ್ನು ಕೊಳ್ಳಲಾರದ, ಸರ್ಕಾರಿ ಶಾಲೆಗಳಲ್ಲಿ ಅಭ್ಯಾಸಮಾಡುವ ಹಿಂದುಳಿದ ವರ್ಗದ ಮಕ್ಕಳು ಸ್ಪರ್ಧಿಸಲು ಸಾಧ್ಯವಾಗುವುದಿಲ್ಲ.

ಭಾರತದಲ್ಲಿರುವಂತಹ ತೊಡಕಾದ ಮತ್ತು ತೀವ್ರವಾದ ಜಾತೀಯ ಸಮಸ್ಯೆಗಳು ರಷ್ಯಾ ದೇಶದಲ್ಲಿ ಇಲ್ಲದಿದ್ದರೂ ಕ್ರಾಂತಿಯ ತರುವಾಯ 1917ರಲ್ಲಿ ಪ್ರಕಟಿಸಲಾದ ಸೋವಿಯತ್ ಜನಾಂಗಗಳಿಗೆ ಸಂಬಂಧಿಸಿದ ನಿರ್ಣಯುಗಳ ಸೂತ್ರಗಳು ಈರೀತಿ ಇದ್ದುವು:-

1. ರಷ್ಯಾದ ಜನತೆಗಳ ಸಮಾನತೆ ಮತ್ತು ಸಾರ್ವಭೌಮತ್ವ;

2. ಬೇರ್ಪಡುವ ಮತ್ತು ಸ್ವತಂತ್ರ ರಾಜ್ಯಗಳನ್ನು ರಚಿಸಿಕೊಳ್ಳುವ ಸಂಬಂಧವಾದ ಹಕ್ಕೂ ಸೇರಿದಂತೆ ರಷ್ಯಾದ ಜನತೆಗಳ ಅನಿರ್ಬಂಧಿತ ಸ್ವಯಂ ನಿರ್ಣಯಾಧಿಕಾರದ ಹಕ್ಕು;

3. ಎಲ್ಲಾ ಮತ್ತು ಯಾವುದೇ ರೀತಿಯ ಜನಾಂಗೀಯ ಧಾರ್ಮಿಕ ಸೌಲತ್ತುಗಳು ಮತ್ತು ನಿರ್ಬಂಧಗಳ ನಿರ್ಮೂಲನ;

4. ರಷ್ಯಾದಲ್ಲಿರುವ ಅಲ್ಪಸಂಖ್ಯಾತ ಜನಾಂಗಗಳು ಮತ್ತು ಜಾತೀಯ ಪಂಗಡಗಳ ವಿಕಾಸ,

ಈ ರೀತಿಯ ನಿರ್ಣಯುಗಳನ್ನು ಕೈಕೊಂಡು ತನ್ನ ದೇಶದೊಳಗಿರುವ ಅಸಮಾನತೆಗಳನ್ನು ನಿರ್ಮೂಲನಗೊಳಿಸುವ ಕಾರ್ಯಕ್ರಮವನ್ನು ರಷ್ಯಾದೇಶ ಹಾಕಿಕೊಂಡಿತು. 1921ರಲ್ಲಿ ಮಧ್ಯ ರಷ್ಯಾದಲ್ಲಿ ಹೆಚ್ಚು ಮುಂದುವರಿದ ಜನಾಂಗಗಳ ಮಟ್ಟಕ್ಕೆ ರಷ್ಯನೇತರ ಜನಾಂಗಗಳ ದುಡಿಯುವ ವರ್ಗವನ್ನು ತರಲು ನೆರವಾಗುವ ಯೋಜನೆಯನ್ನು ಗೊತ್ತುಮಾಡಿ ವಾಸ್ತವ ಕ್ರಮಗಳನ್ನು ನಿರೂಪಿಸಲಾಯಿತು. ಅಲ್ಪಸಂಖ್ಯಾತ ಜನಾಂಗಗಳ ಹಕ್ಕುಗಳನ್ನು ಮೊಟಕುಗೊಳಿಸುವವರ ವಿರುದ್ಧ ಕಠಿಣ ಶಿಕ್ಷೆಯನ್ನು ವಿಧಿಸುವ ವಿಶಿಷ್ಟ ಕಾನೂನುಗಳನ್ನು ರಚಿಸಲಾಯಿತು. ಇಂತಹ ಕ್ರಮಗಳಿಂದ ರಷ್ಯಾ ದೇಶದ ಖಿಸ್ಸಕ್ಕರು, ಉಸ್‌ಬೇಕರು ಮೊದಲಾದ ಪ್ರಾಂತೀಯ ಜನಾಂಗಗಳ ಪರಿಶಿಷ್ಟ ಬುಡಕಟ್ಟುಗಳವರ ಏಳಿಗೆಗೆ ಅವಕಾಶ ಕಲ್ಪಿಸಿಕೊಟ್ಟು ಅವರನ್ನು ಮಧ್ಯರಷ್ಯಾದ ಮುಂದುವರಿದ ಜನಾಂಗಗಳ ಮಟ್ಟಕ್ಕೆ ಏರಿಸಲಾಯಿತು. ಭಾರತದಲ್ಲಿ ಸ್ವಾತಂತ್ರ್ಯ ಬಂದು ಮೂವತ್ತು ವರ್ಷಗಳಾದರೂ ಜಾತಿ ಜಾತಿಗಳ ಮಧ್ಯೆ ಸಮಾನತೆಯನ್ನು ತರುವ ಆಡಂಬರದ ಘೋಷಣೆಗಳನ್ನು ಸರ್ಕಾರ ರೂಪಿಸಿದ್ದರೂ ಸಮಾನತೆಯ ಬದಲು ಹೆಚ್ಚಿನ ಅಂತರ ಬೆಳೆಯುತ್ತಿದೆ.

ಇಂದು ಕರ್ನಾಟಕದಲ್ಲಿ ವಿಲೀನವಾಗಿರುವ ಹಳೆಯ ಮೈಸೂರು ಸಂಸ್ಥಾನದ ಹಿಂದುಳಿದ ಜಾತಿಗಳ ಮುಖಂಡರ ಮೇಲೆ ಬಹುಹಿಂದೆಯೇ ಮದರಾಸು ಪ್ರಾಂತ್ಯದಲ್ಲಿ ಪ್ರಾರಂಭವಾಗಿದ್ದ ಬ್ರಾಹ್ಮಣವಿರೋಧೀ ಚಳುವಳಿಯ ಪ್ರಭಾವ ಬಿದ್ದಿತ್ತು. ಸರ್ಕಾರದ ಮುಖ್ಯ ಹುದ್ದೆಗಳಾದ ದಿವಾನ ಪದವಿಗಳಿಂದ ಗುಮಾಸ್ತ ಕೆಲಸಗಳವರೆಗೆ ಶೈಕ್ಷಣಿಕವಾಗಿ ಮುಂದುವರಿದಿದ್ದ ಬ್ರಾಹ್ಮಣರೇ ಇದ್ದುದನ್ನು ಕಂಡು ಹಿಂದುಳಿದವರಿಗೂ ಸರ್ಕಾರಿ ಹುದ್ದೆಗಳಲ್ಲಿ ಪ್ರಾತಿನಿಧ್ಯ ಸಿಗಬೇಕೆಂದು ಈ ಮುಖಂಡರುಗಳು ಚಳುವಳಿ ಪ್ರಾರಂಭಿಸಿದರು, ಹಿಂದಿನಿಂದಲೂ ಬ್ರಾಹ್ಮಣ

ವೈರಿಗಳಾಗಿದ್ದ ವೀರಶೈವರೂ ಮತ್ತು ಸಂಸ್ಥಾನದ ಹಳ್ಳಿಗಳಲ್ಲಿ ಹೆಚ್ಚು ವ್ಯಾಪಿಸಿದ್ದು ಗಣನೀಯ ಪ್ರಮಾಣದ ಭೂಮಿಯನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದ ಒಕ್ಕಲಿಗರೂ ಒಂದಾಗಿ ಈ ಚಳುವಳಿಯ ಮುಖಂಡತ್ವ ವಹಿಸಿದರು. ಇದರಿಂದ ಆಗಿನ ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರನ್ನು ದಿವಾನಗಿರಿಯಿಂದ ಇಳಿಸಿ ಸರ್ ಮಿರ್ಜಾ ಇಸ್ಮಾಯಿಲ್‌ರವರನ್ನು ದಿವಾನ ಪದವಿಗೆ ಏರಿಸುವ ಪ್ರಯತ್ನದಲ್ಲಿ ಇವರು ಸಫಲರಾದರು. ಸರ್ಕಾರದಲ್ಲಿ ಹಲವು ಗೆಜೆಟೆಡ್ ಹುದ್ದೆಗಳನ್ನು ಈ ಜಾತಿಗಳವರು ಪಡೆಯಲು ಸಾಧ್ಯವಾಯಿತು. ಈ ಚಳುವಳಿಯನ್ನು ಬ್ರಾಹ್ಮಣರ ವಿರುದ್ಧ ಎಲ್ಲಾ ಹಿಂದುಳಿದ ಜಾತಿಯವರನ್ನೂ ಎತ್ತಿಕಟ್ಟಿ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಎಂಬ ಬಣಗಳ ಆಧಾರದ ಮೇಲೆ ಪ್ರಾರಂಭಿಸಲಾಯಿತು. ಆದರೆ ಸರ್ಕಾರದಿಂದ ಸಿಕ್ಕಿದ ಹುದ್ದೆಗಳು ಮತ್ತು ಸೌಲಭ್ಯಗಳ ಸಿಂಹಪಾಲನ್ನು ಈ ಎರಡು ಜಾತಿಗಳಲ್ಲಿ ಆರ್ಥಿಕವಾಗಿ ಮುಂದುವರಿದ ಕೆಲವೇ ಕುಟುಂಬಗಳು ದಕ್ಕಿಸಿಕೊಂಡುವು. ಆ ಜಾತಿಗಳಲ್ಲಿನ ಬಡವರಿಗೆ ಇದರಿಂದ ಏನೂ ಪ್ರಯೋಜನವಾಗಲಿಲ್ಲ. ಈಗ ಕೂಡ ಈ ಕೋಮುಗಳ ಪರಿಮಿತ ಸಂಖ್ಯೆಯ ಕುಟುಂಬಗಳ ಸದಸ್ಯರು ರಾಜಕೀಯವಾಗಿ ಮತ್ತು ಸರ್ಕಾರದ ಗಣ್ಯ ಸ್ಥಾನಗಳಲ್ಲಿ ಮುಂದುವರಿಯುತ್ತಿರುವುದನ್ನು ಕಾಣಬಹುದು. ಈ ಜಾತಿಗಳಲ್ಲಿನ ಬಡವರಿಗಾಗಲೀ ಇತರ ಹಿಂದುಳಿದ ಜಾತಿಗಳಲ್ಲಿನ ಬಡವರಿಗಾಗಲೀ ಇದರಿಂದ ಯಾವ ಪ್ರಯೋಜನವೂ ಆಗಲಿಲ್ಲವೆಂಬುದು ಗಮನಾರ್ಹವಾಗಿದೆ.

ಬ್ರಾಹ್ಮಣರ ವಿರುದ್ಧದ ಚಳುವಳಿಯನ್ನು ಬೆಳೆಸಲು ಅಂದಿನ ಆಳರಸರ ಕುಟುಂಬದೊಳಗೇ ಇದ್ದ ಬ್ರಾಹ್ಮಣ ವಿರೋಧಿ ವೈಮನಸ್ಯವನ್ನು ಈ ಎರಡೂ ಜಾತಿಗಳ ಮುಖಂಡರುಗಳು ತುಂಬ ಜಾಣ್ಮೆಯಿಂದ ಉಪಯೋಗಿಸಿಕೊಂಡರು. ಅರಸು ಜಾತಿಯವರು ಕೂಡ ದಿವಾನರಾಗಲು ಅಂದಿನ ಬ್ರಾಹ್ಮಣರು ಅವಕಾಶ ಕೊಡುತ್ತಿರಲಿಲ್ಲ ಎಂಬುದನ್ನು ಈ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬಹುದು. ಇಂತಿಂಥ ಹಿಂದುಳಿದ ಜಾತಿಗಳಿಗೆ ಇಷ್ಟಿಷ್ಟು ಸರ್ಕಾರಿ ಹುದ್ದೆಗಳನ್ನು ಮೀಸಲಾತಿ ಪಡಿಸಬೇಕೆಂದು ಆಗಿನ ಆಳರಸರಿಂದ ನೇಮಿಸಲ್ಪಟ್ಟ ಮಿಲ್ಲರ್ ಕಮಿಟಿಯು ಶಿಫಾರಸುಮಾಡಿತು. ಈ ಮೀಸಲಾತಿ ಸ್ಥಾನಗಳನ್ನು ಆಯಾ ಹಿಂದುಳಿದ ಜಾತಿಗಳಲ್ಲಿ ಆರ್ಥಿಕವಾಗಿ ಮುಂದುವರಿದ ಕೆಲವರೇ ಗಿಟ್ಟಿಸಿಕೊಂಡು ಅದೇ ಹಿಂದುಳಿದ ಇಡೀ ಜಾತಿಗೆ ಸಿಕ್ಕಿದ ಸ್ಥಾನಮಾನವೆಂದು ಭಾವಿಸುವಂತೆ ಮಾಡಿ ಆಯಾ ಜಾತಿಗಳ ಬಡವರನ್ನು ಸಂತೃಪ್ತಿಗೊಳಿಸಲು ಈ ವರ್ಗದ ಮುಖಂಡರುಗಳು ಪ್ರಯತ್ನಿಸಿದರು. ಆದರೆ ಇದರಿಂದ ಸಮಸ್ಯೆ ಬಗೆಹರಿಯದೆ ಅಸಮಾನತೆ ಮತ್ತಷ್ಟು ಹೆಚ್ಚಿ ಇವರು ತಮ್ಮತಮ್ಮಲ್ಲೇ ಕಚ್ಚಾಡತೊಡಗಿದರು.

ಆಗಿನ ಮೈಸೂರು ಸಂಸ್ಥಾನದಲ್ಲಿ ಬಹು ಚಿಕ್ಕದಾಗಿದ್ದ ಮತ್ತು ಸಂಸ್ಥೆಯಲ್ಲಿ ಹೆಚ್ಚಾಗಿ ಬ್ರಾಹ್ಮಣರಿಂದ ಕೂಡಿದ್ದ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕಾಗಿ ಪೈಪೋಟಿಯಲ್ಲಿ ತೊಡಗಿದ್ದ ಹಿಂದುಳಿದ ವರ್ಗಗಳ ರಾಜಕೀಯವನ್ನು ಸಮಯೋಚಿತವಾಗಿ ಉಪಯೋಗಿಸಿಕೊಂಡಿತು. ಇದ್ದಕ್ಕಿದ್ದಂತೆ ಒಂದು ದಿನ ಪ್ರಜಾಪ್ರತಿನಿಧಿ ಸಭೆಯ ಕಲಾಪ ನಡೆದಿದ್ದಾಗ ಯಾವ ಅಧಿಕಾರವೂ ಸಿಕ್ಕದೆ ಇದ್ದ ಹಿಂದುಳಿದ ಜಾತಿಗಳ ಪ್ರಜಾಪ್ರತಿನಿಧಿ ಸಭಾದ ಸದಸ್ಯರನ್ನು ಪಕ್ಷಾಂತರ ಮಾಡಿಸಿ ಸಾಮೂಹಿಕವಾಗಿ ಕಾಂಗ್ರೆಸ್ಸಿಗೆ ಪ್ರವೇಶಮಾಡಿಸಿ ಸಂಸ್ಥಾನದ ರಾಜಕೀಯಕ್ಕೆ ಹೊಸ ತಿರುವುಕೊಟ್ಟರು. ಆದರೂ ಗಾಂಧೀಜಿಯವರು ಮೈಸೂರು ಸಂಸ್ಥಾನದ ಅರಸರ ಆಡಳಿತವನ್ನು ಒಂದು ಮಾದರಿ ಆಡಳಿತವೆಂದೇ ಕರೆಯುತ್ತಿದ್ದರು. ಹೀಗಾಗಿ ಇಲ್ಲಿನ ಕಾಂಗ್ರೆಸ್ ಮುಖಂಡರಿಗೂ ಗಾಂಧೀಜಿಯವರಿಗೂ ಅನೇಕ ಸಲ ಭಿನ್ನಾಭಿಪ್ರಾಯಗಳು ಬಂದುದ್ದುಂಟು. ಬ್ರಿಟಿಷರ ನೇರ ಆಡಳಿತಕ್ಕೊಳಪಟ್ಟಿದ್ದ ಪ್ರಾಂತ್ಯಗಳಲ್ಲಿ ನಡೆದ ಚಳುವಳಿಗಳು (ಉದಾಹರಣೆಗೆ ಹೋಂರೂಲ್ ಚಳುವಳಿ) ಮಾದರಿ ಮೈಸೂರು ಸಂಸ್ಥಾನದಲ್ಲಿ ನಡೆಯಕೂಡದೆಂಬ ಅಭಿಪ್ರಾಯ ಗಾಂಧೀಜಿಯವರಿಗಿತ್ತು. ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ಲರವರು ಇಲ್ಲಿನ ಕಾಂಗ್ರೆಸ್ ಮುಖಂಡರುಗಳ ಮೇಲೆ ಗಾಂಧೀಜಿಯವರಿಗೆ ದೂರುಗಳನ್ನು ಬರೆದು ಆ ಮುಖಂಡರಿಗೆ ಛೀಮಾರಿ ಹಾಕಿಸಿದ್ದುಂಟು. ಅದೇನೇ ಇದ್ದರೂ ಬ್ರಿಟಿಷರನ್ನು ಭಾರತದಿಂದ ಓಡಿಸುವ ಸಾಮಾನ್ಯ ಜನರ ಸಂಕಲ್ಪವನ್ನು ಮುರಿಯಲು ಯಾರಿಗೂ ಸಾಧ್ಯವಾಗಲಿಲ್ಲ.

ಅನಂತರ ಅಧಿಕಾರವನ್ನು ಹಿಡಿಯಲು ಜನರ ಮುಖಂಡರೆನಿಸಿಕೊಂಡವರು ನಡೆಸಿದ ಸೆಣಸಾಟದಲ್ಲಿ ಜಾತಿ ರಾಜಕೀಯ ಬಹಳಷ್ಟು ಇದೆ. ಹಿಂದೆ ಬ್ರಾಹ್ಮಣರ ವಿರುದ್ಧ ಚಳುವಳಿ ನಡೆಸಿದ ಪ್ರಜಾಮಿತ್ರ ಮಂಡಳಿಯ ಒಕ್ಕಲಿಗ ಮುಖಂಡರು ಪ್ರಜಾಸೋಷಲಿಸ್ಟ್ ಪಾರ್ಟಿಯಲ್ಲೂ, ಕರ್ನಾಟಕ ಏಕೀಕರಣ ಹೋರಾಟದಲ್ಲಿ ಭಾಗವಹಿಸಿದ್ದ ವೀರಶೈವ ಮುಖಂಡರುಗಳು ಕಾಂಗ್ರೆಸ್ ಪಕ್ಷದಲ್ಲೂ ಸೇರಿಕೊಂಡರು. ಹೀಗೆ ಒಂದು ಕಾಲಕ್ಕೆ ಬ್ರಾಹ್ಮಣರ ವಿರುದ್ಧವಾಗಿ ಒಟ್ಟುಗೂಡಿದ್ದ ಲಿಂಗಾಯತ ಮತ್ತು ಒಕ್ಕಲಿಗ ಕೋಮುಗಳು ಅಧಿಕಾರವನ್ನು ಪಡೆಯುವ ಅವಕಾಶ ಒದಗಿದಾಗ ತಮ್ಮ ತಮ್ಮ ಜಾತಿಯ ಆಧಾರದ ಮೇಲೆ ಪ್ರತ್ಯೇಕ ಬಣಗಳಾಗಿ ಸೆಣಸಾಟದಲ್ಲಿ ತೊಡಗಿದ್ದನ್ನು ಕಾಣಬಹುದು. ಮುಂದೆ ಕಾಂಗ್ರೆಸ್ ಮತ್ತು ಪ್ರಜಾಸೋಷಲಿಸ್ಟ್ ಪಕ್ಷಗಳು ಒಡೆದು ಹೋದಾಗ ಒಕ್ಕಲಿಗರು ಇಂದಿರಾ ಕಾಂಗ್ರೆಸ್ಸನ್ನೂ ಲಿಂಗಾಯತರು ನಿಜಲಿಂಗಪ್ಪ ಕಾಂಗ್ರೆಸ್ಸನ್ನೂ ಸೇರಿ ನಿಂತದ್ದನ್ನು ಕಾಣಬಹುದು. ಈಗಲೂ ಕರ್ನಾಟಕದ ಜನತಾ ಪಕ್ಷದಲ್ಲಿ ಹೆಚ್ಚಾಗಿ ವೀರಶೈವರೂ ಕಾಂಗ್ರೆಸ್ (ಐ) ಪಕ್ಷದಲ್ಲಿ ಒಕ್ಕಲಿಗರು ಮತ್ತು ಇತರ ಹಿಂದುಳಿದ ಜಾತಿಯವರು ಗುಂಪು ಕೂಡಿರುವುದನ್ನು ಕಾಣಬಹುದು. ಇದು ಅಖಿಲ ಭಾರತದ ಮಟ್ಟದಲ್ಲಿ ಈ ಪಕ್ಷಗಳ ಮುಖಂಡರುಗಳು ಅನುಸರಿಸುತ್ತಿರುವ ಕಾಲಕಾಲಕ್ಕೆ ಅನುಕೂಲವಾದ ನೀತಿಗೆ ಅನುಗುಣವಾಗಿಯೇ ಇದೆ. ಕೊಳ್ಳೆಹೊಡೆದದ್ದನ್ನು ಹಂಚಿಕೊಳ್ಳುವಾಗ ಕಚ್ಚಾಟ, ಅಲ್ಪಸ್ವಲ್ಪ ಸಿಕ್ಕಿದಾಗ ಅತೃಪ್ತಿ ಹೊಗೆಯಾಡುತ್ತಿದ್ದರೂ ಒಂದಾಗಿರುವವರಂತೆ ನಟನೆ–ಇದು ಇವರ ನಡವಳಿಕೆಯಲ್ಲಿ ಉದ್ದಕ್ಕೂ ಕಂಡು ಬರುತ್ತಿರುವ ಸ್ವಾರಸ್ಯಕರ ಚಿತ್ರ. ಹೀಗಿದ್ದೂ ಇವರುಗಳು ತಮ್ಮ ರಾಜಕೀಯ ಘೋಷಣೆಗಳಲ್ಲಿ ತಮ್ಮನ್ನು ನಂಬಿಕೂತಿರುವ ಹಿಂದುಳಿದ ವರ್ಗದ ಬಡಬಗ್ಗರಿಗೆ ಬರಲಿರುವ ಸ್ವರ್ಗ ಸುಖದ ಕನ್ನಡಿಯ ಗಂಟನ್ನು ತೋರಿಸಿ ರಂಜಿಸುತ್ತಿದ್ದಾರೆ.

ಈ ತಂತ್ರವನ್ನು ಇತ್ತೀಚಿನ ವರ್ಷಗಳಲ್ಲಿ ಶ್ರೀ ದೇವರಾಜ ಅರಸ್‌ರವರು ಅತ್ಯಂತ ಯಶಸ್ವಿಯಾಗಿ ಉಪಯೋಗಿಸಿಕೊಂಡದ್ದನ್ನು ಗಮನಿಸಬಹುದು. ಇವರು ಒಕ್ಕಲಿಗ ಮತ್ತು ಲಿಂಗಾಯತ ಕೋಮುಗಳವರು ಅತೃಪ್ತಿಯಿಂದ ಕಿತ್ತಾಡುತ್ತಿದ್ದಾಗ ಇತರ ಹಿಂದುಳಿದ ವರ್ಗಗಳ ಒಗ್ಗಟ್ಟಿನ ಹಳೆಯ ರಾಗವನ್ನು ಹಾಡಿ (ಲಿಂಗಾಯತ ಒಕ್ಕಲಿಗ ಕೋಮುಗಳನ್ನು ಹೊರತುಪಡಿಸಿ) ಉಳಿದ ಹಿಂದುಳಿದ ನಿಮ್ನವರ್ಗದ ಜಾತಿಗಳ ವರ್ಗಹೋರಾಟದ ಪೊಳ್ಳು ಘೋಷಣೆಯಲ್ಲಿ ತಮ್ಮ ಸ್ಥಾನವನ್ನು ಗುರುತಿಸಿಕೊಂಡರು. ಈ ತಂತ್ರದ ಗರ್ಭದಲ್ಲಿ ಜನಿಸಿದ್ದೇ ಹಾವನೂರು ಆಯೋಗದ ವರದಿ.

ರಾಜ್ಯಾಂಗದ ನಿರ್ದೇಶಕ ತತ್ವಗಳಲ್ಲಿ ಸೂಚಿಸಿರುವಂತೆ ದೇಶದಲ್ಲಿ ಆಗಾಗ್ಗೆ ಹಿಂದುಳಿದ ವರ್ಗಗಳನ್ನು ಗುರುತಿಸುವ ಅವಕಾಶಗಳನ್ನು ಉಪಯೋಗಿಸಿಕೊಂಡು ರಾಜ್ಯಸರ್ಕಾರ ಹಾವನೂರು ಆಯೋಗವನ್ನು ರಚಿಸಿತು. ಈ ಆಯೋಗದ ವರದಿಯ ಪ್ರಕಾರ ಹೊಸದಾಗಿ ಪ್ರಭಾವಶಾಲಿಗಳಾಗಿರುವ ಮಧ್ಯಮ ಶ್ರೀಮಂತ ವರ್ಗದ ಕೆಲವು ಜಾತಿಗಳನ್ನು ಹಿಂದುಳಿದ ಪಂಗಡಗಳ ಪಟ್ಟಿಗೆ ಸೇರಿಸಿರುವುದರಿಂದ ಈ ವರ್ಗವು ತಾನೇ ದುರ್ಬಲ ವರ್ಗವೆಂದು ಘೋಷಿಸಿಕೊಂಡು ಸರ್ಕಾರ ತೋರಿಸುವ ಅನೇಕ ಸೌಲತ್ತುಗಳನ್ನು ತಾನೇ ಕಬಳಿಸುತ್ತಿದೆ. ಆರ್ಥಿಕವಾಗಿ ದುರ್ಬಲರಾದವರನ್ನು ಗುರುತಿಸುವ ಈ ವರದಿ ಒಂದು ರಾಜಕೀಯ ಘೋಷಣೆಯಾಗಿ ಕಾಣುತ್ತಿದ್ದು ಸರ್ಕಾರ ಕೊಡುವ ಸ್ಥಾನ ಮತ್ತು ಸೌಲಭ್ಯಗಳ ಸಿಂಹಪಾಲನ್ನು ಅಪಾತ್ರರೇ ಲಪಟಾಯಿಸುವ ಅವಕಾಶ ಈ ವರದಿಯಿಂದ ಲಭ್ಯವಾಗಿದೆ. ಈ ರೀತಿಯ ಆಭಾಸದಿಂದ ಮುಂದುವರಿದವರು ಯಾರು ಹಿಂದುಳಿದವರು ಯಾರು ಎಂಬುದು ಒಂದು ಯಕ್ಷಪ್ರಶ್ನೆಯಾಗಿಯೇ ಉಳಿದಿದೆ.

ದಿನಾಂಕ 22-11-1978 "ಪ್ರಜಾವಾಣಿ"ಯ ಒಂದು ವರದಿಯ ಪ್ರಕಾರ ಕರ್ನಾಟಕದಲ್ಲಿ ಎಸ್. ಎಸ್. ಎಲ್. ಸಿ ವಿದ್ಯಾರ್ಹತೆಯಿಂದ ಸ್ನಾತಕೋತ್ತರ ಪದವಿಗಳವರೆಗೆ ವಿದ್ಯಾರ್ಹತೆಯನ್ನು ಹೊಂದಿರುವ ಸುಮಾರು 5.60.000 ನಿರುದ್ಯೋಗಿಗಳಿದ್ದಾರೆ. ಅನಕ್ಷರಸ್ಥ ನಿರುದ್ಯೋಗಿಗಳು ಸುಮಾರು 1.04.062. 1974ರ ಅಂಕಿ ಅಂಶಕ್ಕೆ ಹೋಲಿಸಿದಾಗ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಶೇ.44 ರಷ್ಟು ಅನಕ್ಷರಸ್ಥ ನಿರುದ್ಯೋಗಿಗಳ ಸಂಖ್ಯೆ ಶೇ. 27 ರಷ್ಟು ಹೆಚ್ಚಿದೆ.

ಅದೇ ವರದಿಯ ಪ್ರಕಾರ ಆರನೆಯ ಪಂಚವಾರ್ಷಿಕ ಯೋಜನೆಯ ಆರಂಭದಲ್ಲಿ ಇಡೀ ರಾಷ್ಟ್ರದಲ್ಲಿ ಎರಡು ಕೋಟಿ ನಿರುದ್ಯೋಗಿಗಳಿದ್ದಾರೆ. 21-11-78 ಪ್ರಜಾವಾಣಿಯ ಇನ್ನೊಂದು ವರದಿಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ 1978ನೇ ಮಾರ್ಚಿಯಿಂದ ಜೂನ್‌ವರೆಗೆ "ಹಿಂದುಳಿದ ಕೋಮು"ಗಳಿಂದ ಉದ್ಯೋಗ ಬಯಸಿ ಬಂದವರ ಸಂಖ್ಯೆ 22752 (ಮಾರ್ಚಿಯಲ್ಲಿ) ಉದ್ಯೋಗ ಸಿಕ್ಕಿದ್ದು 776, ಜೂನ್‌ನಲ್ಲಿ ಉದ್ಯೋಗಾರ್ಥಿಗಳು 24300. ಸಿಕ್ಕಿದ್ದು 237 ಜನರಿಗೆ; ಅದೇ ವರ್ಷ ಮಾರ್ಚಿಯಲ್ಲಿ ಉದ್ಯೋಗ ಬಯಸಿ ಬಂದ "ಹಿಂದುಳಿದ ಜಾತಿ"ಯ ಜನರ ಸಂಖ್ಯೆ 5694. ಸಿಕ್ಕಿದ್ದು 229 ಜನರಿಗೆ; ಜೂನ್ ತಿಂಗಳಲ್ಲಿ ಉದ್ಯೋಗ ಬಯಸಿ ಬಂದವರು 9078 ಜನ. ಸಿಕ್ಕಿದ್ದು 337 ಜನರಿಗೆ. ಅದೇ ವರ್ಷ ಮಾರ್ಚಿನಲ್ಲಿ ಉದ್ಯೋಗ ಬಯಸಿಬಂದ "ಹಿಂದುಳಿದ ವಿಶೇಷ ತಂಡದವರು" (Special groups) 6515 ಜನ. ಸಿಕ್ಕಿದ್ದು 141ಜನರಿಗೆ. ಜೂನ್‌ನಲ್ಲಿ ಉದ್ಯೋಗ ಬಯಸಿ ಬಂದವರು 13773. ಸಿಕ್ಕಿದ್ದು 196 ಜನರಿಗೆ; ಅದೇ ವರ್ಷ ಜೂನ್‌ನಲ್ಲಿ ಉದ್ಯೋಗ ಬಯಸಿಬಂದ "ಪರಿಶಿಷ್ಟ ವರ್ಗ" ದವರ ಸಂಖ್ಯೆ 52218 (ಎಸ್.ಎಸ್.ಎಲ್.ಸಿ.ಗಿಂತ ಕಡಿಮೆ ಕಲಿತವರು 30648.) ಇವರಲ್ಲಿ ಜನವರಿಯಿಂದ ಜೂನ್‌ವರೆಗೆ ಉದ್ಯೋಗ ದೊರೆತದ್ದು 14116 ಜನರಿಗೆ. (ಇವರಲ್ಲಿ ಎಸ್.ಎಸ್.ಎಲ್. ಸಿ.ಗಿಂತ ಕಡಿಮೆ ಕಲಿತವರು 450 ಮಂದಿ) ಇದೇ ಅವಧಿಯಲ್ಲಿ ಉದ್ಯೋಗ ಅರಸಿ ಬಂದ "ಗಿರಿಜನ" ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ 3257. (ಅವರಲ್ಲಿ ಎಸ್. ಎಸ್. ಎಲ್. ಸಿ. ಗಿಂತ ಕಡಿಮೆ ಓದಿದವರು 1507) ನೌಕರಿ ಸಿಕ್ಕಿದ್ದು 218 ಜನರಿಗೆ (ಎಸ್.ಎಸ್.ಎಲ್.ಸಿ. ಗಿಂತ ಕಡಿಮೆ ಕಲಿತವರು 30). ಈ ಮೇಲಿನ ಅಂಕಿ ಅಂಶಗಳಿಂದ ನಮ್ಮ ರಾಜ್ಯದಲ್ಲಿರುವ ಹಿಂದುಳಿದ ವರ್ಗಗಳ ಹಣೆಯ ಬರಹ ತಿಳಿದು ಬರುವುದು. ಮತ್ತು ಇವರ ವಿಷಯಕ್ಕೆ ಉದ್ಯೋಗಗಳನ್ನು ಮೀಸಲಿಡುವುದು ಎಂದರೆ ನಿರುದ್ಯೋಗವನ್ನು ಮೀಸಲಿಟ್ಟಂತೆಯೇ ಸರಿ.

ಹಾವನೂರರ ವರದಿಯಲ್ಲಿ ಅತಿ ಹಿಂದುಳಿದು ಪ್ರಾಣಿಗಳಿಗಿಂತಲೂ ಕೀಳಾಗಿ ಬದುಕುತ್ತಿರುವ 396 ಜಾತಿಗಳಿಗೆ ಯಾವ ಸೌಲಭ್ಯವನ್ನೂ ಕಲ್ಪಿಸಿಕೊಡಲು ಸಾಧ್ಯವಾಗದ್ದಕ್ಕಾಗಿ ವಿಷಾದವನ್ನು ಸೂಚಿಸಲಾಗಿದೆ. ಇದಕ್ಕೆ ವರದಿಯಲ್ಲಿ ಕೊಟ್ಟಿರುವ ಕಾರಣ ಅವುಗಳನ್ನು ಗುರುತಿಸಲು ಸಾಧ್ಯವಾಗಲಿಲ್ಲ ಎಂಬುದೊಂದೇ. ಅಂದ ಮೇಲೆ ಇಂಥ ವರದಿಗಳಿಂದ ಸಾಮಾಜಿಕ ನ್ಯಾಯ ಸಿಗುವುದು ಹೇಗೆ ಸಾಧ್ಯ? ಪ್ರಭಾವಶಾಲಿಗಳಾಗಿರುವ [illegible] ವರ್ಗದ ಜಾತಿಗಳ ಜೊತೆಗೆ ಸಾಮಾಜಿಕವಾಗಿಯೂ ಆರ್ಥಿಕವಾಗಿ ಶೈಕ್ಷಣಿಕವಾಗಿ ಹಿಂದುಳಿದ ಜಾತಿಗಳನ್ನು ವರ್ಗೀಕರಿಸಿರುವುದರಿಂದ ಈ ವರ್ಗಕ್ಕೆ ಮೀಸಲಾದ ಎಲ್ಲಾ ಸೌಲಭ್ಯಗಳನ್ನು ಈ ಮುಂದುವರಿದ ಶ್ರೀಮಂತ ವರ್ಗವೇ ಕಬಳಿಸುವ ಅವಕಾಶವುಂಟು. ಅಲ್ಲದೆ ಹಿಂದುಳಿದ ಬುಡಕಟ್ಟುಗಳಿಗೆ ಮೀಸಲಾದ ಸ್ಥಾನಗಳಿಗೆ ಅಭ್ಯರ್ಥಿಗಳು ಇಲ್ಲದಿದ್ದಲ್ಲಿ ಆ ಸ್ಥಾನಗಳನ್ನು ಹಿಂದುಳಿದ ಸಮುದಾಯಕ್ಕೆ ವರ್ಗಾಯಿಸುವ ಅವಕಾಶವನ್ನು ಮಾಡಿಕೊಡಲಾಗಿದೆ. ಇದು ನ್ಯಾಯವಾಗಿಲ್ಲ. ವರದಿಯಲ್ಲಿ ಸೌಲಭ್ಯಗಳನ್ನು ಪಡೆಯಲು ಹಿಂದುಳಿದ ಜಾತಿಯವರಿಗೆ 6000 ರೂ.ಗಳಿಗಿಂತ ಕಡಿಮೆ ವರಮಾನವಿರಬೇಕು ಎಂದಿದೆ. ಅದನ್ನು ಸರ್ಕಾರವು ಈಗ 10000 ರೂ.ಗಳವರೆಗೆ ವಿಸ್ತರಿಸಿದೆ. ಇದರಿಂದ ಆ ವರ್ಗಗಳಲ್ಲಿ ಆಗಲೇ ಆರ್ಥಿಕವಾಗಿ ಮುಂದುವರಿದವರಿಗೆ ಅನುಕೂಲವಾದಂತಾಯಿತು. ಇತ್ತೀಚೆಗೆ ಹಿಂದುಳಿದ ಬುಡಕಟ್ಟುಗಳ ಸುಮಾರು 63 ಜಾತಿಗಳಿಗೆ ವರಮಾನದ ಮಿತಿಯನ್ನೇ ತೆಗೆದುಹಾಕಿರುವುದರಿಂದ ಆರ್ಥಿಕವಾಗಿ ಮುಂದುವರಿದ, ರಾಜಕೀಯ ಪ್ರಭಾವವಿರುವ ಆಳುವ ಪಕ್ಷದ ಬಾಲಬಡುಕರಿಗೆ ಸೌಲಭ್ಯಗಳೆಲ್ಲ ಹೋಗುವ ಸಂಭವವುಂಟಾಗಿದೆ. ನೂರಕ್ಕೆ 39 ಜನ ವಿದ್ಯಾವಂತರೂ, 85 ಭಾಗ ಜಮೀನು ಹೊಂದಿರುವವರೂ ಇರುವ ಒಂದು ಜಾತಿಯನ್ನು ಶೇ. 10ರಷ್ಟು ವಿದ್ಯಾವಂತರೂ ಭೂಮಿಯನ್ನೇ ಹೊಂದದೆ ಇರುವವರೂ ಆದ ಜಾತಿಯೊಂದರ ಗುಂಪಿನಲ್ಲಿ ಸೇರಿಸಿರುವುದರಿಂದ ಸರ್ಕಾರ ಕೊಡುವ ಸೌಲಭ್ಯಗಳು ಆ ಗುಂಪಿನಲ್ಲಿ ಯಾವ ಜಾತಿಯವರಿಗೆ ಗಿಟ್ಟಿರಬಹುದೆಂದು ಊಹಿಸಲು ಕಷ್ಟವಾಗುವುದಿಲ್ಲ.

ಈ ಅಂಶಗಳಿಂದ ತಿಳಿಯಬರುವುದು ಇಷ್ಟು: ಕೇವಲ ಅಧಿಕಾರವನ್ನು ಸ್ವಾಧೀನದಲ್ಲಿಟ್ಟುಕೊಳ್ಳುವುದಕ್ಕಾಗಿ ತರುವ ಸುಧಾರಣೆಗಳು ಎಷ್ಟೇ ಆಕರ್ಷಕವಾಗಿ ಕಂಡರೂ ಅದರ ಪ್ರಯೋಜನವೆಲ್ಲಾ ಪಟ್ಟಭದ್ರ ಹಿತಾಸಕ್ತಿಗಳಿಗೇ ದಕ್ಕುತ್ತದೆ.

ಇನ್ನು ಗ್ರಾಮಗಳ ಪರಿಸ್ಥಿತಿ ಮೊದಲಿಗಿಂತ ಹದಗೆಟ್ಟಿದೆ. ಪ್ರಗತಿಪರವೆಂದು ಬಹಳ ಪ್ರಚಾರ ಪಡೆದಿರುವ ಭೂಸುಧಾರಣೆಯಿಂದ ಕೀಳುಜಾತಿಯವರಿಗಾಗಲೀ ಹರಿಜನ ಗಿರಿಜನರಿಗಾಗಲೀ ಹೆಚ್ಚು ಪ್ರಯೋಜನವೇನೂ ಆಗಿಲ್ಲ. ಸಣ್ಣ ಕೃಷಿಕರು ಪ್ರಭಾವಶಾಲಿಗಳಾದ ಮೇಲುವರ್ಗದವರಿಗೆ ಇದ್ದ ಅಲ್ಪಸ್ವಲ್ಪ ಭೂಮಿಯನ್ನು ಪರಭಾರೆಮಾಡಿ ಕೃಷಿಕೂಲಿಕಾರರಾಗಿ ಪರಿಣಮಿಸುತ್ತಿದ್ದಾರೆ. ಕೃಷಿ ಕಾರ್ಮಿಕರಿಗೆ ಗೊತ್ತುಮಾಡಿರುವ ಕನಿಷ್ಠ ಕೂಲಿ ಬರಿ ಕಾಗದದ ಮೇಲಷ್ಟೆ ಇದೆ. ಹೆಚ್ಚುವರಿಯಾಗಿ ಇರುವ ಭೂಮಿ ಸರ್ಕಾರದ ಸ್ವಾಧೀನಕ್ಕೆ ಬಂದು ಭೂಹೀನರ ನಡುವೆ ಹಂಚಿಕೆಯಾಗಿಲ್ಲ. ಲಕ್ಷಾಂತರ ಎಕರೆ ಸರ್ಕಾರಿ ಜಮೀನನ್ನು

(25ನೇ ಪುಟ ನೋಡಿ)

ಭೂಸುಧಾರಣೆ ಮತ್ತು ಗ್ರಾಮೀಣ ಜನರ ವರ್ಗೀಕರಣ–ಚೀನದ ಅನುಭವ

(12ನೇ ಪುಟದಿಂದ)

ಪ್ರತಿನಿಧಿಗಳಿಗೆ ಅವರ ಎಲ್ಲಾ ಸಭೆಗಳಲ್ಲಿ ಎಲ್ಲಾ ಮಟ್ಟದ ಕಾರ್ಯಕರ್ತರನ್ನು ವಿಮರ್ಶಿಸಲು, ದೋಷಾರೋಪಣೆಮಾಡಲು ಸಂಪೂರ್ಣ ಹಕ್ಕುಗಳಿವೆ. ಹಾಗೆಯೇ, ರೈತಸಂಘಟನೆಗಳ ಮತ್ತು ಸರಕಾರದ ಕಾರ್ಯಕರ್ತರನ್ನು ತೆಗೆದುಹಾಕಲು, ಬದಲಾಯಿಸಲು ಮತ್ತು ಆರಿಸಲು ಸಂಬಂಧಪಟ್ಟ ರೈತ ಸಭೆಗಳಿಗೆಲ್ಲಾ ಸಂಪೂರ್ಣ ಹಕ್ಕುಗಳಿವೆ, ಜನರ ಇಂತಹ ಪ್ರಜಾಪ್ರಭುತ್ವದ ಹಕ್ಕುಗಳನ್ನು ಅಧಿಕಾರಗಳನ್ನು ಯಾರಾದರೂ ಮೊಟಕುಗೊಳಿಸಲು ಯತ್ನಿಸಿದರೆ, ಅಂತಹವರನ್ನು ಜನತಾ ನ್ಯಾಯಾಲಯಗಳು ವಿಚಾರಿಸಿ ಶಿಕ್ಷಿಸುವವು.

ಗ್ರಾಮೀಣ ಜನರ ವರ್ಗೀಕರಣ :

ಚೀನಾ ಗಣರಾಜ್ಯದ ಭೂಸುಧಾರಣಾ ಮಸೂದೆಯು ಗ್ರಾಮೀಣ ಜನರನ್ನು ಕೂಲಿಕಾರರು, ಬಡರೈತರು, ಮಧ್ಯಮ ರೈತರು, ಶ್ರೀಮಂತ ರೈತರು ಮತ್ತು ಭೂಮಾಲಕರು ಎಂದು ಐದು ವರ್ಗಗಳಾಗಿ ವಿಂಗಡಿಸಲು ಸೂಕ್ತ ಸೂತ್ರಗಳನ್ನು ರೂಪಿಸಿದೆ. ಗ್ರಾಮೀಣ ಜನರ ವರ್ಗೀಕರಣದ ಸ್ಥೂಲಪರಿಚಯವನ್ನು ಇಲ್ಲಿ ಕೊಡಲಾಗಿದೆ.

1. ಕೂಲಿಕಾರರು :

ಕೂಲಿಕಾರರಿಗೆ (ಕೃಷಿಕೂಲಿಕಾರರೂ ಸೇರಿ) ಸಾಮಾನ್ಯವಾಗಿ ಜೀವನಾಧಾರಕ್ಕೆ ಭೂಮಿಯೂ ಇಲ್ಲ, ಉಪಕರಣಗಳೂ ಇಲ್ಲ; ಇದ್ದರೂ ಅತ್ಯಲ್ಪ. "ಇವರು ಸಂಪೂರ್ಣವಾಗಿ ಅಥವಾ ಹೆಚ್ಚಾಗಿ ತಮ್ಮ ಜೀವನಕ್ಕೆ ತಮ್ಮ ದುಡಿಮೆಯ ಶಕ್ತಿಯ ಮಾರಾಟವನ್ನೇ ಅವಲಂಬಿಸಬೇಕಾಗುವುದು."

2. ಬಡರೈತರು :

ಕೆಲವು ಬಡರೈತರಿಗೆ ಸ್ವಲ್ಪ ಜಮೀನಿರಬಹುದು, ಆದರೆ ಸಾಕಷ್ಟು ವ್ಯವಸಾಯೋಪಕರಣಗಳಿರದಿರಬಹುದು. ಇನ್ನು ಕೆಲವು ಬಡರೈತರಿಗೆ ಅಲ್ಪಸ್ವಲ್ಪ ಉಪಕರಣಗಳಿದ್ದರೂ, ಸಾಕಷ್ಟು ಜಮೀನು ಇರದಿರಬಹುದು. ಸರ್ವಸಾಮಾನ್ಯವಾಗಿ ಅವರು ವ್ಯವಸಾಯಕ್ಕೆ ಜಮೀನನ್ನು ಗೇಣಿಗೆ ಪಡೆದುಕೊಳ್ಳಬೇಕು. ಇತರರ ಜಮೀನಿನಲ್ಲಿ ಅಗ್ಗದ ಕೂಲಿಗೆ ದುಡಿಯಲೂ ಬೇಕು. "ಅವರು ಜಮೀನಿಗೆ ಗೇಣಿಕೊಡುವ ಮೂಲಕ, ಸಾಲಕ್ಕೆ ಬಡ್ಡಿ ತೆರುವ ಮೂಲಕ ಮತ್ತು ಇತರರ ಜಮೀನಿನಲ್ಲಿ ಕೂಲಿ ದುಡಿಯುವ ಮೂಲಕ ಇತರರಿಂದ ಶೋಷಿಸಲ್ಪಡುತ್ತಿದ್ದಾರೆ".

3. ಮಧ್ಯಮ ರೈತರು :

ಮಧ್ಯಮವರ್ಗದ ರೈತರಲ್ಲಿ ಅನೇಕರು ಭೂಸ್ವಾಮ್ಯವುಳ್ಳವರು. ಕೆಲವರು ಸ್ವಲ್ಪ ಭೂಮಿಯುಳ್ಳವರಾಗಿದ್ದು ಮಿಕ್ಕಿದ್ದನ್ನು ಗೇಣಿಗೆ ಪಡೆದುಕೊಳ್ಳುವರು, ಇವರಲ್ಲಿ ಕೆಲವರು ಭೂಹೀನರಾಗಿದ್ದು ತಾವು ಉಳುವ ಎಲ್ಲಾ ಭೂಮಿಯನ್ನು ಗೇಣಿಗೆ ಪಡೆದಿರುವವರು. ಮಧ್ಯಮ ವರ್ಗದ ರೈತರಲ್ಲಿ ಸ್ವಲ್ಪ ವ್ಯವಸಾಯೋಪಕರಣಗಳಿವೆ. ಅವರು ತಮ್ಮ ಜೀವನಕ್ಕಾಗಿ ಸಂಪೂರ್ಣವಾಗಿ ಅಥವಾ ಹೆಚ್ಚಾಗಿ ತಮ್ಮ ಶ್ರಮಶಕ್ತಿ ಮೇಲೆಯೇ ಅವಲಂಬಿಸಿರುತ್ತಾರೆ. "ಸರ್ವಸಾಮಾನ್ಯವಾಗಿ ಅವರು ಇತರರನ್ನು ಶೋಷಿಸುವುದಿಲ್ಲ. ಹೆಚ್ಚಿನ ಮಧ್ಯಮ ವರ್ಗದ ರೈತರು ಸಾಲದ ಮೇಲಿನ ಬಡ್ಡಿ ಮತ್ತು ಭೂಮಿಗೆ ಗೇಣಿ ಕೊಡುವ ಮೂಲಕ ಶೋಷಿಸಲ್ಪಡುತ್ತಿದ್ದಾರೆ. ಆದರೆ, ಸಾಮಾನ್ಯವಾಗಿ ಅವರು ಬಡರೈತರಂತೆ ತಮ್ಮ ಶ್ರಮಶಕ್ತಿಯನ್ನು ಬೇರೆಯವರಿಗೆ ಮಾರಾಟ ಮಾಡುವುದಿಲ್ಲ". ಒಳ್ಳೆಯ ಸ್ಥಿತಿಗತಿ ಇರುವ ಕೆಲವು ಮೇಲ್ಮಟ್ಟದ ಮಧ್ಯಮ ವರ್ಗದ ರೈತರು ಶೋಷಣೆಯಿಂದ ಸ್ವಲ್ಪಗಳಿಸಿದರೂ, ಅಂತಹ ಗಳಿಕೆಯು ಅವರ ಒಟ್ಟುಗಳಿಕೆಯ ಅಲ್ಪಾಂಶ, ಶೇ. 25ಕ್ಕಿಂತ ಕಡಿಮೆ.

4. ಶ್ರೀಮಂತರೈತರು :

ಸರ್ವಸಾಮಾನ್ಯವಾಗಿ ಶ್ರೀಮಂತ ರೈತರು ಭೂಸ್ವಾಮ್ಯವುಳ್ಳವರು. ಕೆಲವು ಶ್ರೀಮಂತ ರೈತರಿಗೆ ಒಂದು ಭಾಗ ಸ್ವಂತ ಜಮೀನು ಇದ್ದು ಇನ್ನೊಂದು ಭಾಗ ಗೇಣಿಗೆ ಪಡೆದುದಾಗಿರಬಹುದು, ಅಥವಾ ಎಲ್ಲಾ ಭೂಮಿಯನ್ನು ಗೇಣಿಗೇ ಪಡೆದುದಾಗಿರಬಹುದು. ಸಾಮಾನ್ಯವಾಗಿ ಅವರೊಡನೆ ಉತ್ತಮ ವ್ಯವಸಾಯೋಪಕರಣಗಳಿರುವುದು, ಸಾಕಷ್ಟು ಚರ ಬಂಡವಾಳವಿರುವುದು. ಅವರಲ್ಲಿ ಕೆಲವರು ತಮ್ಮ ಸ್ವಂತ ಜಮೀನಿನಲ್ಲಿ ದುಡಿಯುವವರಾದರೂ, ಹೆಚ್ಚಾಗಿ ಅವರು ಇತರರ ದುಡಿಮೆಯನ್ನೇ ಅವಲಂಬಿಸಿರುವವರು. "ಶ್ರೀಮಂತ ರೈತರ ಶೋಷಿತಗಳಿಕೆಯು ಮುಖ್ಯವಾಗಿ ಕೂಲಿಕೆಲಸಗಾರರನ್ನು ದೀರ್ಘಾವಧಿಯ ಪರತ್ತಿನಲ್ಲಿ ನೇಮಿಸುವ ಮೂಲಕವಾಗಿರುವುದು". ಇದರೊಂದಿಗೇ, ತಮ್ಮ ಜಮೀನನ್ನು ಇತರರಿಗೆ ಕೊಟ್ಟು ಗೇಣಿಗಳಿಸುವ ಮೂಲಕ ಮತ್ತು ಸಾಲಕೊಟ್ಟು ಬಡ್ಡಿಗಳಿಸುವ ಮೂಲಕ, ಅಥವಾ ಕೈಗಾರಿಕೆ ವ್ಯಾಪಾರೋದ್ಯಮಗಳ ಮೂಲಕ ಗಳಿಸುವರು. ಹೆಚ್ಚಿನ ಶ್ರೀಮಂತರು ಸಾರ್ವಜನಿಕ ಸಂಸ್ಥೆಗಳ ಸ್ವಾಮ್ಯದಲ್ಲಿರುವ (ಮಠ ದೇವಸ್ಥಾನಗಳ, ಶಾಲೆಗಳ, ಆಶ್ರಮಗಳ, ಪ್ರಾಚೀನ ಸ್ಮಾರಕಗಳ) ಜಮೀನಿನ ಆಡಳಿತ ನೋಡಿಕೊಳ್ಳುವವರಾಗಿದ್ದಾರೆ ಆ ಜಮೀನಿನಲ್ಲಿ ಕೂಲಿಕೆಲಸಗಾರರಿಂದ ದುಡಿಸಿಕೊಂಡು ಶೋಷಣೆಯ ಮೂಲಕ ಗಳಿಸುತ್ತಾರೆ. ಶ್ರೀಮಂತ ರೈತರು ತಮ್ಮ ಗಳಿಕೆಯ ಬಹುಭಾಗವನ್ನು ನಿರಂತರವಾಗಿ ಒಂದಲ್ಲ ಒಂದು ವಿಧದ ಶೋಷಣೆಯಿಂದ ಪಡೆಯುತ್ತಾರೆ. ಶೋಷಣೆಯೇ ಅವರ ಜೀವನದ ಮೂಲಾಧಾರ.

5. ಭೂಮಾಲಕರು :

ಭೂಮಾಲಕರು ಸಹಜವಾಗಿಯೇ ಭೂಸ್ವಾಮ್ಯ ಹೊಂದಿರುವವರು. ಆದರೆ, ಅವರು ತಮ್ಮ ಜಮೀನಿನಲ್ಲಿ ಸ್ವಂತ ದುಡಿಯುವುದಿಲ್ಲ. ದುಡಿದರೂ ಅತ್ಯಲ್ಪ. ಶೋಷಣೆಯೇ ಅವರ ಜೀವನಾಧಾರ. "ತಮ್ಮ ಭೂಮಿಯನ್ನು ರೈತರಿಗೆ ವ್ಯವಸಾಯಕ್ಕೆ ಕೊಟ್ಟು ಅವರಿಂದ ಗೇಣಿಗಳಿಸುವುದೇ ಅವರ ಶೋಷಣೆಯ ಮುಖ್ಯ ಮಾಧ್ಯಮ". ಗೇಣಿಗಳಿಕೆಯೊಂದಿಗೇ, ಭೂಮಾಲಕರು ಸಾಲದ ಮೇಲೆ ಬಡ್ಡಿ, ಕೂಲಿ ಕೆಲಸಗಾರ ದುಡಿಮೆ, ಕೈಗಾರಿಕೆ ಮತ್ತು ವ್ಯಾಪಾರೋದ್ಯಮಗಳು, ಇತ್ಯಾದಿ ಶೋಷಣೆಗಳ ಮೂಲಕವೂ ತಮ್ಮ ಬೊಕ್ಕಸ ತುಂಬಿಸಿಕೊಳ್ಳುತ್ತಾರೆ. ಸಾರ್ವಜನಿಕ ಸಂಸ್ಥೆಗಳ ಸ್ವಾಮ್ಯದಲ್ಲಿರುವ ಜಮೀನಿನ ಆಡಳಿತ ನಡೆಸುವುದರಿಂದಲೂ ಶಾಲೆಗಳ ಜಮೀನಿನ ಗೇಣಿ ವಸೂಲಿಮಾಡುವುದರಿಂದಲೂ ಇವರು ರೈತರನ್ನು ಶೋಷಿಸುವರು.

ಕೆಲವು ದಿವಾಳಿಹೋದ ಭೂಮಾಲಕರು, ಭೂಸ್ವಾಮ್ಯ ಕಳೆದುಕೊಂಡಿದ್ದರೂ, ಸ್ವತಃ ದುಡಿಯಲು ಸಾಧ್ಯವಿದ್ದರೂ ದುಡಿಮೆಯ ಮಾರ್ಗವನ್ನು ಹಿಡಿಯದೆ ಸಾಮಾನ್ಯ ಮಧ್ಯಮವರ್ಗದ ರೈತನಿಗಿಂತಲೂ ಹೆಚ್ಚಿನ ಅನುಕೂಲ ಸ್ಥಿತಿಯಲ್ಲಿ ಜೀವನ ನಡೆಸುವವರನ್ನೂ 'ಭೂಮಾಲಕ'ರ ವರ್ಗಕ್ಕೇ ಸೇರಿಸಲಾಗುವುದು. ಯುದ್ಧಕೋರರು, ನೌಕರಶಾಹಿಗಳು, ಸ್ಥಳೀಯ ಗೂಂಡಾ ಪಡೆಯವರು ಭೂಮಾಲಕ ಪ್ರತಿನಿಧಿಗಳೇ ಆಗಿದ್ದು, ಅತ್ಯಂತ ದುಷ್ಟ ಹಾಗೂ ಕ್ರೂರ ಭೂಮಾಲಕರಾಗಿರುವರು. ಭೂಮಾಲಕರ ಪರವಾಗಿ ರೈತರಿಂದ ಗೇಣಿ ವಸೂಲಿ ಮಾಡುವವರನ್ನು, ಜಮೀನಿನ ಆಡಳಿತೆ ನೋಡಿಕೊಳ್ಳುವವರನ್ನು, ರೈತರ ಶೋಷಣೆಯಿಂದಲೇ ಬದುಕುತ್ತಿರುವ ಭೂಮಾಲಕರನ್ನು ಅವಲಂಬಿಸಿರುವವರನ್ನು, ಅವರ ಜೀವನ ಸ್ಥಿತಿಯು ಸಾಮಾನ್ಯ ಮಧ್ಯಮ ವರ್ಗದ ರೈತನ ಜೀವನ ಸ್ಥಿತಿಗಿಂತಲೂ ಉತ್ತಮವಾಗಿರುವುದಾದರೆ, ಅವರನ್ನೆಲ್ಲಾ 'ಭೂಮಾಲಕ' ವರ್ಗದವರೆಂದೇ ಪರಿಗಣಿಸಬೇಕು.

ಭೂಸುಧಾರಣೆಯಲ್ಲಿ ಅದ್ಭುತ ಸಾಧನೆ :

ಜೂನ್, 1950 ರಷ್ಟರಲ್ಲಿ ಚೀನದ 145 ಮಿಲಿಯ ಗ್ರಾಮೀಣ ಜನಸಂಖ್ಯೆ ಇರುವ ಪ್ರದೇಶಗಳಲ್ಲಿ ಭೂಸುಧಾರಣೆಯ ಕಾರ್ಯ ಮುಗಿದಿತ್ತು ಅಥವಾ ಮುಗಿಯುತ್ತಾ ಬಂದಿತ್ತು. ಇನ್ನೂ 264 ಮಿಲಿಯ ಜನಸಂಖ್ಯೆಯುಳ್ಳ ಪ್ರದೇಶಗಳಲ್ಲಿ ಭೂಸುಧಾರಣೆಯ ಕೆಲಸ ಪ್ರಾರಂಭಿಸಬೇಕಿತ್ತು. ಸುಮಾರು 3 00.000 ಭೂಸುಧಾರಣಾ ಕಾರ್ಯಕರ್ತರ ನೆರವಿನಿಂದ, ದೇಶಾದ್ಯಂತ ಪ್ರಬಲಗೊಂಡ ರೈತರ ಸಂಘಗಳಿಂದ, ಎಲ್ಲಾ ಮಟ್ಟದ ಜನತಾ ಸರಕಾರಗಳ ಸಕ್ರಿಯ ಸಹಾಯದಿಂದ ಭೂಸುಧಾರಣಾ ಕಾರ್ಯವನ್ನು ಅತ್ಯುತ್ಸಾಹದಿಂದ ಕೈಕೊಳ್ಳಲಾಯಿತು. ಜಮೀನ್ದಾರರಿಂದ ಭೂಮಿಯನ್ನೂ ಯಂತ್ರೋಪಕರಣಗಳನ್ನೂ ವಶಪಡಿಸಿಕೊಂಡು ಅವುಗಳನ್ನು ಆಯಾಯ ಪ್ರದೇಶದ ರೈತರಿಗೆ ಸಮನಾಗಿ ನ್ಯಾಯಯುತವಾಗಿ ಹಂಚಲಾಯಿತು. ಜಮೀನ್ದಾರರನ್ನು ಸಹ ನಿರ್ಗತಿಕರನ್ನಾಗಿ ಮಾಡಲಿಲ್ಲ. ಅವರ ಕುಟುಂಬದ ಜನಸಂಖ್ಯೆಗನುಗುಣವಾಗಿ ಇತರ ರೈತರಿಗೆ ವಿತರಣೆ ಮಾಡಿದಷ್ಟೇ ಭೂಮಿಯನ್ನೂ, ಉಪಕರಣಗಳನ್ನೂ ಹಂಚಲಾಯಿತು ಭೂಸುಧಾರಣೆಯ ಮುಖ್ಯ ಉದ್ದೇಶ 'ಭೂಮಾಲಕತ್ವ'ವನ್ನು ನಿರ್ನಾಮಗೊಳಿಸುವುದಾಗಿತ್ತೇ ಹೊರತು ಭೂಮಾಲಕರನ್ನಲ್ಲ. ಭೂಮಾಲಕರು ತಮ್ಮ ಸ್ವಂತ ದುಡಿಮೆಯಿಂದಲೇ ಬದುಕಲು ಕಲಿತು ಹೊಸ ನಾಗರಿಕರಾಗಲು ಅವಕಾಶಗಳನ್ನು ಕೊಡಲಾಯಿತು. ಕೈಗಾರಿಕಾ ಸಂಸ್ಥೆಗಳಲ್ಲಿ ಮತ್ತು ವ್ಯಾಪಾರೋದ್ಯಮಗಳಲ್ಲಿ ಭೂಮಾಲಕರು ಮತ್ತು ಶ್ರೀಮಂತ ರೈತರು ತೊಡಗಿಸಿದ ಆ ಆಸ್ತಿಪಾಸ್ತಿಗಳನ್ನು ಭೂಮಸೂದೆ ಕಾಯಿದೆಯಂತೆ ಮರುವಿತರಣೆಗೆ ತೆಗೆದುಕೊಳ್ಳುತ್ತಿರಲಿಲ್ಲ. ರೈತರು ಜಮೀನ್ದಾರರಿಗೆ ಮತ್ತು ಶ್ರೀಮಂತ ರೈತರಿಗೆ ಕೊಡಬೇಕಾದ ಸಾಲಗಳನ್ನು ರದ್ದು ಮಾಡಲಾಯಿತು, ಸಾಲಪತ್ರಗಳನ್ನೆಲ್ಲಾ ಸುಟ್ಟು ಹಾಕಲಾಯಿತು. 1950 ರಲ್ಲಿ ಕೈಕೊಂಡ ಭೂಸುಧಾರಣಾ ಕಾರ್ಯಕ್ರಮವು ಆಗೋಸ್ಟ್ 1952 ರಲ್ಲಿ ಸುಮಾರು ಶೇ. 90 ರಷ್ಟು ಜನ ರೈತರಿಗೆ ಭೂಮಿಯನ್ನು ಮರುವಿತರಣೆ ಮಾಡುವಲ್ಲಿ ಯಶಸ್ವಿಯಾಯಿತು. ಅನ್ಯಾಯದ, ಅಸಮಾನತೆಯ ಭೂವ್ಯವಸ್ಥೆಯನ್ನು ಅಳಿದು ಹಾಕಿ ನ್ಯಾಯಯುತವಾದ 'ರೈತ ಯಜಮಾನ್ಯ' (Peasant proprietorship) ಪದ್ಧತಿಯನ್ನು ಸ್ಥಾಪಿಸಲಾಯಿತು. ಚೀನದ ನೂರಾರು ವರುಷಗಳ ಇತಿಹಾಸದಲ್ಲಿ ಇದೊಂದು ಅದ್ಭುತ ಸಾಧನೆ.

ಚೀನದ ಭೂಸುಧಾರಣೆಯ ಮುಖ್ಯೋದ್ದೇಶ ಕೈಗಾರಿಕಾಕರಣ ಮತ್ತು ಅಂತಿಮವಾಗಿ ಸಮಾಜವಾದ ಸ್ಥಾಪನೆ. ಕ್ರಾಂತಿಪೂರ್ವದಲ್ಲಿ ಚೀನದ ಕೈಗಾರಿಕಾಭಿವೃದ್ಧಿಗೆ ಬೇಕಾದಷ್ಟು ಕಚ್ಚಾ ಪದಾರ್ಥಗಳು ಸಿಗುತ್ತಿರಲಿಲ್ಲ. ಮತ್ತು ಕೈಗಾರಿಕಾ ಸಾಮಗ್ರಿಗಳಿಗೆ ಬೇಕಾದಷ್ಟು ಮಾರುಕಟ್ಟೆಗಳು ಇರಲಿಲ್ಲ. ಗ್ರಾಮೀಣ ಜನರ ಗ್ರಾಹಕ ಶಕ್ತಿಯು ತೀರ ಕಡಿಮೆಯಾಗಿತ್ತು. ಅವರ ಉತ್ಪಾದನಾ ಸಾಮರ್ಥ್ಯ ಸಾಕಷ್ಟು ಭೂಮಿ ಮತ್ತು ಉಪಕರಣಗಳಿಲ್ಲದೆ ವ್ಯರ್ಥವಾಗುತ್ತಿತ್ತು. ಭೂಸುಧಾರಣಾ ಕಾರ್ಯಕ್ರಮದಿಂದ, ಈ ಎರಡು ತೊಂದರೆಗಳೂ ಮಾಯವಾದವು. ಜಮೀನಿನ ಒಡೆತನ ಪಡೆದ ರೈತರು ಕೃಷಿ ಉತ್ಪಾದನೆ ಹೆಚ್ಚಿಸಿದರು. ಹಳ್ಳಿಯ ಜೀವನ ಪ್ರಗತಿಪರವಾಗಿ, ಕೈಗಾರಿಕೆಗೆ ಬೇಕಾದ ಹತ್ತಿ, ಹೊಗೆಸೊಪ್ಪು, ಕಬ್ಬು ಮುಂತಾದ ವಸ್ತುಗಳು ಅಧಿಕವಾಗಿ ದೊರೆಯಲು ಪ್ರಾರಂಭವಾಯಿತು. ಹಳ್ಳಿಯ ರೈತರ ಆರ್ಥಿಕ ಪರಿಸ್ಥಿತಿ ಸುಧಾರಿಸಿದುದರಿಂದ ಪಟ್ಟಣದ ಕೈಗಾರಿಕಾ ಸಾಮಗ್ರಿಗಳಿಗೆ ಹೆಚ್ಚಿನ ಗಿರಾಕಿಗಳು–ಮಾರುಕಟ್ಟೆ ದೊರೆಯುವಂತಾಯಿತು. ಹೀಗೆ ಚೀನದ ಸರ್ವತೋಮುಖವಾದ ಅಭಿವೃದ್ಧಿಗೆ ಭೂಸುಧಾರಣಾ ಕಾರ್ಯಕ್ರಮವು ನೇರವಾಗಿ [illegible]

ಗ್ರಾಮೀಣ ಭೂಹೀನ ಕೂಲಿಕಾರರು, ಬಡರೈತರು ಮತ್ತು ಮಧ್ಯಮ ರೈತರು ಒಗ್ಗಟ್ಟಿನಿಂದ ಚೀನದಲ್ಲಿ ಪಾಳೆಯಗಾರಿ ಮತ್ತು ಅರೆಪಾಳೆಯಗಾರಿ ಶೋಷಣಾ ವ್ಯವಸ್ಥೆಯನ್ನು ಕೊನೆಗಾಣಿಸಿ ಜನತಾ ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ಮೂಲಕ ಸಮುದಾಯ ಪ್ರಜ್ಞೆಯನ್ನು ಗಳಿಸಿದರು. ಮುಂದೆ, ಸಮುದಾಯ ಹಿತದ ಪ್ರಜ್ಞೆಯಿಂದ ವ್ಯವಸಾಯೋಪಕರಣಗಳನ್ನು ಸಾಮೂಹಿಕವಾಗಿ ಹಂಚಿಕೊಳ್ಳುವುದು, ವ್ಯವಸಾಯ ಕೆಲಸ ಕಾರ್ಯಗಳಲ್ಲಿ ಪರಸ್ಪರ ಸಹಾಯಮಾಡುವ ಸಹಕಾರಿ ಸಂಘಗಳನ್ನು ನಡೆಸುವುದು, ಸಹಕಾರಿ ಮತ್ತು ಸಾಮೂಹಿಕ ಪದ್ಧತಿಯಲ್ಲಿ ವ್ಯವಸಾಯ ನಡೆಸುವುದು ಸಾಧ್ಯವಾಗುತ್ತಾ ಬಂತು. ವ್ಯವಸಾಯದಲ್ಲಿ 'ರೈತಯಜಮಾನ್ಯ' ಪದ್ಧತಿಗಿಂತ ಸಹಕಾರಿ ಮತ್ತು ಸಮುದಾಯ ವ್ಯವಸಾಯ ಪದ್ಧತಿಯು ಜನಪ್ರಿಯವಾದವು. ಉತ್ಪಾದನಾ ಮಾಧ್ಯಮಗಳು, ಸಾಧನ ವಿಧಾನಗಳು ವೈಯಕ್ತಿಕ ಆಸ್ತಿಯಾಗಿರುವ ಬದಲು ಸಹಕಾರ ಸಂಘಗಳ, ಸಮುದಾಯಗಳ ಆಸ್ತಿಯಾಗಿರುವುದು ಹೆಚ್ಚು ಪ್ರಯೋಜನವೆಂದು ಕಂಡುಕೊಂಡರು. ಪರಿಣಾಮವಾಗಿ ಕಡಿಮೆ ಜನರಿಂದ ವ್ಯವಸಾಯದಲ್ಲಿ ಅಧಿಕ ಉತ್ಪಾದನೆ ಪಡೆಯಲು ಸಾಧ್ಯವಾಯಿತು. ಚೀನದ ಗ್ರಾಮೀಣ ಜನರು ಹೆಚ್ಚುಹೆಚ್ಚಾಗಿ ಗುಡಿಕೈಗಾರಿಕೆ, ಸಣ್ಣ ಮತ್ತು ಮಧ್ಯಮ ಕೈಗಾರಿಕೋದ್ಯಮಗಳಲ್ಲಿ ಕೆಲಸಮಾಡತೊಡಗಿದರು. ವ್ಯವಸಾಯವು ಕೈಗಾರಿಕೆಗೂ, ಕೈಗಾರಿಕೆಯು ವ್ಯವಸಾಯಕ್ಕೂ ಪರಸ್ಪರಪೂರಕವಾಗಿ ಬೆಳೆಯಲಾರಂಭಿಸಿದವು. ಕೈಗಾರಿಕೆಗಳಲ್ಲಿ ಸಹಕಾರ ಪದ್ಧತಿ ಪ್ರಾರಂಭವಾಯಿತು. ಸರಕಾರದ ನೇತೃತ್ವದಲ್ಲಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಲಾಯಿತು. ವ್ಯವಸಾಯ, ವ್ಯಾಪಾರ ಮತ್ತು ಕೈಗಾರಿಕೆಗಳಲ್ಲಿ ಖಾಸಗೀ ಹಿತಾಸಕ್ತಿಗಳಿಗಿಂತ ಸಾಮೂಹಿಕ ಹಿತಾಸಕ್ತಿಗಳ ಮೇಲ್ಗೈಯಾಯಿತು. ಹೀಗೆ ಚೀನದ ಭೂಸುಧಾರಣೆಯು ವ್ಯವಸಾಯ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಬಂಡವಾಳ ಪದ್ಧತಿಯನ್ನು ಅನುಸರಿಸದೇ ಸಹಕಾರ ಮತ್ತು ಸಾಮೂಹಿಕಹಾಗೂ ಸರಕಾರಿ ಒಡೆತನದ ಮೂಲಕ ಸಮಾಜವಾದಿ ವ್ಯವಸ್ಥೆಯನ್ನು ಸ್ಥಾಪಿಸಲು, ಎಲ್ಲಾ ಶೋಷಣೆಗಳನ್ನು ನಿರ್ನಾಮಗೊಳಿಸಲು ನೆರವಾಯಿತು. ಇಂದು ಚೀನ ಒಂದು ಬಲಿಷ್ಠ ಸಮಾಜವಾದಿ ರಾಷ್ಟ್ರವಾಗಿ ಬೆಳೆದು ನಿಂತಿದೆ.

(ಸಾಧಾರ: 'ಉಳುವವನೇ ಹೊಲದೊಡೆಯ' ಇಂಡಿಯಾ-ಚೀನ ಸ್ನೇಹ ಸಂಘ, ಪೀಪಲ್ಸ್ ಬುಕ್ ಹೌಸ್, ಮೈಸೂರು: ಫಾನ್ ಷನ್, ಚೀನದ ಒಂದು ಹಳ್ಳಿಯ ಕ್ರಾಂತಿಯ ದಾಖಲೆ, ವಿಲಿಯಮ್ ಹಿಂಟನ್, ಪೆಂಗ್ವಿನ್ ಬುಕ್ಸ್: ಭೂಸುಧಾರಣಾ ಮಸೂದೆಯ ಕುರಿತು 14-6-50 ರಂದು ಚೀನದ ಉಪಾಧ್ಯಕ್ಷ [illegible] ಅವರ ಭಾಷಣ, ನ್ಯಾಶನಲ್ ಬುಕ್ ಏಜನ್ಸಿ, ಕಲ್ಕತ್ತ.)

ದೇಶದ ಸಮಸ್ಯೆಗಳು — ಅವುಗಳಿಗೆ ಪರಿಹಾರ

—ಎಸ್. ಕೆ. ಉಪಾಧ್ಯಾಯ

ಜಮಾಯತ್ ಎ ಇಸ್ಲಾಂ ಇವರು ಬಿಜಾಪುರದಲ್ಲೊಂದು ವಿಚಾರ ಗೋಷ್ಠಿಯನ್ನೇರ್ಪಡಿಸಿದ್ದರು. ವಿಷಯ : ದೇಶದ ಸಮಸ್ಯೆಗಳು ಅವುಗಳಿಗೆ ಪರಿಹಾರ. ರಾಜಕೀಯ ಮುಖಂಡರೂ, ಶಿಕ್ಷಣ ತಜ್ಞರೂ ಅದರಲ್ಲಿ ಪಾಲ್ಗೊಂಡಿದ್ದರು. ಜನರಲ್ಲಿ ಪ್ರಾಮಾಣಿಕತೆಯ ಅಭಾವ ಮತ್ತು ಪ್ರೀತಿ, ಪ್ರೇಮ, ವಿಶ್ವಾಸ ಇಲ್ಲದಿರುವುದೇ ದೇಶ ಎದುರಿಸುತ್ತಿರುವ ಪ್ರಧಾನ ಸಮಸ್ಯೆಯಾಗಿದೆಂಬುದೇ ಅವರೆಲ್ಲರ ಅಭಿಪ್ರಾಯವಾಗಿತ್ತು. ಸುಧಾರಣಾವಾದಿಗಳ ನಿರಾಶಾದಾಯಕ ಪ್ರಕ್ರಿಯೆ ಇದಲ್ಲದೆ, ವಾಸ್ತವ ರಾಜಕೀಯ ತಿಳುವಳಿಕೆ ಇದ್ದವರಾರೂ ಇಂಥ ಅಭಿಪ್ರಾಯ ಒಪ್ಪಿಕೊಳ್ಳಲು ಶಕ್ಯವಿಲ್ಲ.

ನಿರುದ್ಯೋಗ, ಬಡತನ, ಭೂ ಸಮಸ್ಯೆ, ಕೈಗಾರಿಕಾಭಿವೃದ್ಧಿ ಶಿಕ್ಷಣದಲ್ಲಿ ಬದಲಾವಣೆಗೆ, ಗುತ್ತೇದಾರರು, ಭೂಮಾಲಕರಿಂದ ಶೋಷಣೆ, ಭ್ರಷ್ಟಾಚಾರ, ಜಾತೀಯ ಸಮಸ್ಯೆ, ಭಾಷಾ ಸಮಸ್ಯೆ-ಬೆಲೆಯೇರಿಕೆ-ಇವೇ ಕೆಲವು ಪ್ರಮುಖ ಸಮಸ್ಯೆಗಳನ್ನು ದೇಶ ಎದುರಿಸುತ್ತಿದೆ. ಜನಸಂಖ್ಯೆಯಲ್ಲಿ ಹೆಚ್ಚಳ, ಕಾರ್ಮಿಕರ ಮುಷ್ಕರ ಮತ್ತು ಕೆಲಸಗಾರರು ಸರಿಯಾಗಿ ದುಡಿಯದಿರುವುದರಿಂದ ಈ ಸಮಸ್ಯೆಗಳು ಉಂಟಾಗಿವೆಂಬುದೇ ಎಲ್ಲ ಜನರ ಏಕಾಭಿಪ್ರಾಯ; ಆದರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಈ ಅಭಿಪ್ರಾಯವನ್ನೊಪ್ಪುವುದಿಲ್ಲ. ನಮ್ಮ ಸರಕಾರ ಬಂಡವಾಳಶಾಹಿ ಪಥದಲ್ಲಿ ಸಾಗಿರುವುದರಿಂದ, ಬಂಡವಾಳಶಾಹಿ ಸಮಾಜದ ಸಮಸ್ಯೆಗಳನ್ನೇ ನಾವೂ ಎದುರಿಸುತ್ತಿದ್ದೇವೆ.

ಮೂವತ್ತೆರಡು ವರ್ಷಗಳ ಹಿಂದೆ 1947ರಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ನಾವು ಸ್ವಾತಂತ್ರ್ಯವನ್ನು ಜನತಾ ಹೋರಾಟದ ಮೂಲಕ ಕಸಿದುಕೊಳ್ಳಲಿಲ್ಲ. ಬ್ರಿಟಿಷರಿಂದ ಕಾಂಗ್ರೆಸ್ಸಿಗೆ ಅಧಿಕಾರ ಹಸ್ತಾಂತರವಾಯಿತಷ್ಟೇ! ಬಿಳಿಯರ ಬದಲಾಗಿ ಕಾಂಗ್ರೆಸ್ಸಿನವರು ಅಧಿಕಾರ ಚಲಾಯಿಸಿದರಷ್ಟೇ, ಆದರೆ ಕಾಯಿದೆ, ಕಾನೂನು, ಶಿಕ್ಷಣ ಪದ್ಧತಿ, ಆಡಳಿತ ಪದ್ಧತಿ, ನೌಕರಶಾಹಿಯ, ಪೋಲೀಸರ ವರ್ತನೆ, ಸಮಾಜದಲ್ಲಿಯ ಸಾಮಾಜಿಕ, ಆರ್ಥಿಕ, ರಾಜಕೀಯ ಹಿಡಿತ-ಇವಾವುದರಲ್ಲೂ ಬದಲಾವಣೆಯಾಗದೆ, ಬಂಡವಾಳಶಾಹಿ ಪಥದಲ್ಲೇ ನಮ್ಮ ಆಡಳಿತ ಮುಂದುವರಿಯಿತು. ಆದ್ದರಿಂದ ಯಾವ ಮೂಲಭೂತ ಬದಲಾವಣೆಯೂ ಆಗಲಿಲ್ಲ.

ಮೂಲಭೂತ ಬದಲಾವಣೆ ತಂದಂಥಾ ಕ್ರಾಂತಿಗಳು ಜಗತ್ತಿನಲ್ಲಿ ನಡೆದಿವೆ. ರಷ್ಯಾ, ಚೀನಾ, ವಿಯೆತ್ನಾಮ್, ಕ್ಯೂಬಾ, ಮುಂತಾದ ದೇಶಗಳ ಜನತೆ ಸಾಮ್ರಾಜ್ಯಶಾಹಿಗಳ ವಿರುದ್ಧ, ಗುಲಾಮಗಿರಿಯಿಂದ ವಿಮೋಚನೆ ಪಡೆಯಲು ಹೋರಾಡಿ ಹಳೇ ರಾಜ್ಯವ್ಯವಸ್ಥೆಯನ್ನು ಸಂಪೂರ್ಣನಾಶ ಮಾಡಿ, ಸಮತಾವಾದಿ ಸಿದ್ಧಾಂತದ ಹೊಸ ರಾಜಕೀಯ ವ್ಯವಸ್ಥೆಯನ್ನು ಸ್ಥಾಪಿಸಿವೆ. ಆ ದೇಶಗಳಲ್ಲಿ ನಮ್ಮ ದೇಶ ಎದುರಿಸುತ್ತಿರುವ ಸಮಸ್ಯೆಗಳಿಲ್ಲ. ಚೀನಾ ದೇಶವಂತೂ ನಮಗಿಂತಲೂ ವಿಶಾಲವಾದ, ಹೆಚ್ಚು ಜನಸಂಖ್ಯೆಯಿರುವ, ನಮ್ಮಂತೆಯೇ ಹಿಂದುಳಿದ ದೇಶವಾಗಿತ್ತು. ಆದರೆ ಅಲ್ಲಿಯ ಕಾರ್ಮಿಕ ವರ್ಗ, ರೈತಾಪಿ ಜನರ ಬೆಂಬಲದಿಂದ ಕಮ್ಯುನಿಸ್ಟ್ ಪಾರ್ಟಿ ಮುಖಂಡತ್ವದಲ್ಲಿ ಚಿಯಾಂಗ್‌ಕೈಶೇಖ್ ಆಡಳಿತೆಯನ್ನು ಕ್ರಾಂತಿ ಮೂಲಕ ಕಿತ್ತೊಗೆದು ಹೊಸ ಸರಕಾರ ಸ್ಥಾಪನೆ ಮಾಡಿದಂದಿನಿಂದ ಆ ದೇಶ ನಮಗಿಂತಲೂ ಅಭಿವೃದ್ಧಿಗೊಳ್ಳುತ್ತಿದೆಂಬ ವಿಷಯ ತಜ್ಞರಿಂದ ಕೇಳುತ್ತಿದ್ದೇವೆ. ಕಳೆದ ಮೂವತ್ತು ವರ್ಷಗಳಿಂದಲೂ ಅಲ್ಲಿ ಬೆಲೆ ಏರಿಲ್ಲ; ನಿರುದ್ಯೋಗ ಅತಿ ಪ್ರಸರಣಗಳಂಥ ಸಮಸ್ಯೆ ಎದುರಿಸಬೇಕಾಗಿಲ್ಲ. ಯಾಕೆಂದರೆ ಅಲ್ಲಿ ಬಂಡವಾಳಶಾಹಿ ಪದ್ಧತಿಯನ್ನು ಸಂಪೂರ್ಣ ಕಿತ್ತೊಗೆಯಲಾಗಿದೆ. ಅಲ್ಲಿ ಒಕ್ಕಲತನದ ಸುಧಾರಣೆ ತೀವ್ರಗತಿಯಿಂದ ಮುಂದುವರಿಯುತ್ತಿರುವುದರಿಂದ ಆಹಾರ ಸಮಸ್ಯೆಯಾಗಲೀ, ಔದ್ಯೋಗೀಕರಣ ವಿಶಾಲಗೊಳ್ಳುತ್ತಿರುವುದರಿಂದ ನಿರುದ್ಯೋಗ ಸಮಸ್ಯೆಯಾಗಲಿ ಅಲ್ಲಿ ಕಾಣಿಸುತ್ತಿಲ್ಲೆಂದು ಪ್ರತ್ಯಕ್ಷದರ್ಶಿಗಳೂ, ಸಂಯುಕ್ತ ರಾಷ್ಟ್ರ ಸಂಘದ ವರದಿಗಳೂ ಸಾಕ್ಷ್ಯಾಧಾರಗಳ ಮೂಲಕ ಜಾಹೀರಪಡಿಸುತ್ತಿವೆ.

ನಾವು ಬಂಡವಾಳಶಾಹಿ ಪಥದಲ್ಲೇ ಮುಂದುವರಿಯುತ್ತಿರುವುದರಿಂದ, ಬಡತನ, ನಿರುದ್ಯೋಗ, ದುಃಖದುಮ್ಮಾನ ಇಮ್ಮಡಿಯಾಗುತ್ತಿದೆ. ಹಳ್ಳಿಗಾಡು ಪ್ರದೇಶದಲ್ಲಿ ಪರಿಸ್ಥಿತಿ ಹದಗೆಟ್ಟಿದೆ. ತನ್ನ ಆಡಳಿತೆಯ ದಾರುಣ ಚಿತ್ರವನ್ನು ಇಂದಿರಾಗಾಂಧಿಯವರೇ ಮೊನ್ನೆ ಮೊನ್ನೆ ಲೋಕಸಭೆಯಲ್ಲಿ ಒಪ್ಪಿಕೊಂಡಿದ್ದಾರೆ. "ಶೇ. 54.09ರಷ್ಟು ಗ್ರಾಮಾಂತರದಲ್ಲಿ ಜನರು ಬಡತನ ರೇಖೆಗೂ ಕೆಳಗಿನ ಮಟ್ಟದಲ್ಲಿದ್ದರೆ ಪಟ್ಟಣಗಳ ವಿಷಯದಲ್ಲಿ ಈ ಪ್ರಮಾಣ ಶೇ. 41.22ರಷ್ಟು" ಎಂದು ಹೇಳಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಓರಿಸ್ಸಾ ಶೇ. 71.01, ಪಶ್ಚಿಮ ಬಂಗಾಲ ಶೇ. 64, ತಮಿಳುನಾಡು ಶೇ. 62, ಮಧ್ಯಪ್ರದೇಶ ಶೇ. 61.35, ಆಂಧ್ರ ಶೇ. 57 67, ಕೇರಳ ಶೇ. 57.76, ಬಿಹಾರ ಶೇ. 55.82, ಮಹಾರಾಷ್ಟ್ರ ಶೇ. 53.84, ಕರ್ನಾಟಕ ಶೇ. 52.23 ರಷ್ಟು ಬಡತನ ರೇಖೆಗೂ ಕೆಳಗಿನ ಮಟ್ಟದಲ್ಲಿದ್ದಾರೆ.

ಯೋಜನಾ ಆಯೋಗದ ವರದಿ ಪ್ರಕಾರ ಹಳ್ಳಿಗಳಲ್ಲಿ ದುಡಿಯುವ ಕೃಷಿಕಾರ್ಮಿಕರ ನಿಜವಾದ ಗಳಿಕೆ 1960-61ರಲ್ಲಿ ರೂ. 1-43 ಇತ್ತು. ಅದು 67-68ರಲ್ಲಿ ರೂ. 1-27ಕ್ಕೆ ಕುಸಿಯಿತು. ಮತ್ತು 7 ವರ್ಷಗಳ ನಂತರ 74-75ರಲ್ಲಿ ಅದು ರೂ. 1-17ರಷ್ಟಾಯಿತು. ಇಂದಿರಾಗಾಂಧಿಯ ತುರ್ತುಪರಿಸ್ಥಿತಿ ಆಡಳಿತೆಯಲ್ಲಿ ಅದು ರೂ. 1-5ರಷ್ಟಾಯಿತು. ಹಳ್ಳಿಗಳಲ್ಲಿ ಒಬ್ಬ ಮನುಷ್ಯನಿಗೆ ರೂ. 20ರಂತೆ ಜೀವಿಸುವ ಜನರ ಸಂಖ್ಯೆ ಶೇ. 44.57, ಪಟ್ಟಣಗಳಲ್ಲಿ ರೂ. 30ರಂತೆ ಜೀವಿಸುವವರ ಸಂಖ್ಯೆ ಶೇ. 51.34, 1977ರಲ್ಲಿ ಇದು ಶೇ. 70 ರಷ್ಟಾಗಿದೆಯೆಂದು ಸರಕಾರಿ ವರದಿ ಹೇಳುತ್ತದೆ.

ಒಂದೆಡೆ ಜನರ ಜೀವನಮಟ್ಟ ಕುಸಿಯುತ್ತಿರುವಾಗ ಮತ್ತೊಂದು ದೃಶ್ಯ ಬಂಡವಾಳದಾರರ ಲಾಭ ಹೆಚ್ಚುತ್ತಿರುವುದನ್ನು ತೋರಿಸುತ್ತದೆ. ನಮ್ಮ ದೇಶದ 20 ದೊಡ್ಡ ಮನೆತನಗಳ ಬಂಡವಾಳ 1969ರಲ್ಲಿ 2430 ಕೋಟಿಯಿಂದ 1972ರಲ್ಲಿ 3059ಕ್ಕೂ, 1975ರಲ್ಲಿ 4465 ಕೋಟಿ ರೂಪಾಯಿ ಹೆಚ್ಚಾಗಿದೆ. ಟಾಟಾಕಂಪೆನಿಯ ಬಂಡವಾಳ 72-77ರಲ್ಲಿ 614 93 ಕೋಟಿಯಿಂದ 1069.28 ಕೋಟಿ, ಬಿರ್ಲಾನ ಬಂಡವಾಳ 589.40ರಿಂದ 1070.20 ಕೋಟಿಯಷ್ಟು ಹೆಚ್ಚಾಗಿದೆ. ಹೀಗೆ ಜನರ ಬಡತನ ಹೆಚ್ಚಾಗುತ್ತಿದ್ದಂತೆಯೇ ಗುತ್ತೇದಾರಿಗಳ, ಹಿರಿ ಬಂಡವಾಳದಾರರ, ಭೂಮಾಲಕರ, ಮತ್ತು ದೊಡ್ಡ ವ್ಯಾಪಾರಸ್ಥರ ಆರ್ಥಿಕ ಶಕ್ತಿ ಮಿತಿಮೀರಿ ಹೆಚ್ಚಾಗುತ್ತಿರುವುದನ್ನು ನೋಡುತ್ತಿದ್ದೇವೆ. ಇದರ ಜೊತೆಯಲ್ಲೇ ವಿದೇಶೀ ಸಾಮ್ರಾಜ್ಯಶಾಹಿಗಳ, ಜಗತ್ತಿನ ಗುತ್ತೇದಾರಿ ಬಂಡವಾಳದಾರರ ಮಾರ್ಕೆಟಿನ ಹಿಡಿತ ನಮ್ಮ ದೇಶದ ಮೇಲೆ ಬಿಗಿಗೊಳ್ಳುತ್ತಿದ್ದು, ಅವರ ಮೇಲಿನ ನಮ್ಮ ಅವಲಂಬನ ಹೆಚ್ಚಾಗುತ್ತಿದೆ. ಬಂಡವಾಳಶಾಹಿ ಪಥವೇ ನಮ್ಮ ಸರಕಾರದ ಆರ್ಥಿಕ ನೀತಿಯಾಗಿರುವುದರಿಂದ. ವಿದೇಶೀ ಮತ್ತು ದೇಶಿ ಬಂಡವಾಳದಾರರಿಗೂ, ಭೂಮಾಲಕರಿಗೂ ಹೆಚ್ಚು ಸೌಲಭ್ಯಗಳನ್ನೊದಗಿಸುತ್ತಾ, ಜನರ ಸುಲಿಗೆಗೆ ದಾರಿ ಮಾಡಿಕೊಡಬೇಕಾಗುತ್ತಿದೆ. ಈ ನೀತಿ ವಿರುದ್ಧ ಜನತೆ ಬಂಡೆದ್ದಾಗ, ಅವರ ಮೇಲೆ ದಬ್ಬಾಳಿಕೆ ಹೆಚ್ಚಿಸಿ, ಕೊನೆಗೆ ತನ್ನ ಅಧಿಕಾರ ಉಳಿಸುವುದಕ್ಕಾಗಿ, ತುರ್ತುಪರಿಸ್ಥಿತಿಯಂತಹ ಫ್ಯಾಸಿಸ್ಟ್ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆಂಬುದನ್ನು ನಮ್ಮ ದೇಶದ ಚರಿತ್ರೆ ತೋರಿಸಿಕೊಟ್ಟಿದೆ.

ನೌಕರಿಗಾಗಿ ಶಿಕ್ಷಣ, ಸಿರಿವಂತರಿಗಷ್ಟೇ ಶಿಕ್ಷಣ ಸೌಲಭ್ಯ, ಭವಿಷ್ಯವನ್ನು ಅಂಧಕಾರದಲ್ಲಿ ಎಸೆಯುವ ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆಯಾಗಬೇಕೆಂದು ಯುವಕರು ಹೋರಾಡುತ್ತಿದ್ದಾರೆ. ಬೆಲೆಯೇರಿಕೆ. ಅತಿಪ್ರಸರಣ. ನಿರುದ್ಯೋಗದ ವಿರುದ್ಧ ಕಾರ್ಮಿಕರೂ. ಜನಸಾಮಾನ್ಯರೂ ಯುದ್ಧ ಹೂಡಿದ್ದಾರೆ. ಭೂಮಿ ಹಕ್ಕಿಗಾಗಿ, ರೈತರು ಚಳುವಳಿ ನಡೆಸಿದ್ದಾರೆ. ದೇಶ ಎದುರಿಸುತ್ತಿರುವ ಸಮಸ್ಯೆಗಳಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಕಾರ್ಯಕ್ರಮವೊಂದನ್ನು ಜನತೆಯ ಮುಂದಿಟ್ಟಿದೆ.

ಏಕಸ್ವಾಮ್ಯ ಮನೆತನಗಳ ರಾಷ್ಟ್ರೀಕರಣ, ನ್ಯಾಯಸಮ್ಮತವಾದ ಆದಾಯ ಮತ್ತು ವೇತನ ನೀತಿ, ಜಮೀನ್ದಾರಿ ಪದ್ಧತಿಯ ರದ್ದತಿ, ರೈತರಿಗೆ ಎಲ್ಲಾ ತರದ ಸವಲತ್ತುಗಳು, ಕೃಷಿಕೂಲಿಗಾರರಿಗೆ ಕನಿಷ್ಠ ವೇತನ, ಗ್ರಾಮೀಣ ನಿರುದ್ಯೋಗಿಗಳಿಗೆ ಉದ್ಯೋಗ ನೀಡಲು ಬೃಹತ್ ಯೋಜನೆಗಳನ್ನು ಕೈಗೊಳ್ಳುವುದು, ಕಾರ್ಮಿಕ ವರ್ಗಕ್ಕೆ ಕನಿಷ್ಠ ವೇತನ, ಕಾರ್ಖಾನೆಗಳ ರಾಷ್ಟ್ರೀಕರಣ, ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆ, ಪುಕ್ಕಟೆ ಶಿಕ್ಷಣ, ಹರಿಜನ-ಗಿರಿಜನರಿಗೆ ಸೌಲಭ್ಯಗಳು, ರಾಜ್ಯಗಳಿಗೆ ಹೆಚ್ಚು ಸ್ವಯಂ ಅಧಿಕಾರ, ಮುಂತಾದ ಅಂಶಗಳನ್ನೊಳಗೊಂಡ ಕಾರ್ಯಕ್ರಮ.

ಇಂದಿರಾಗಾಂಧಿಯ ಸರ್ವಾಧಿಕಾರದ ವಿರುದ್ಧ, ಪ್ರಜಾಪ್ರಭುತ್ವ-ನಾಗರೀಕ ಹಕ್ಕುಗಳ ರಕ್ಷಣೆಗಾಗಿ, ದೇಶದ ಜನತೆ 1977ರಲ್ಲಿ ಸರ್ವಾಧಿಕಾರಿ ವಿರುದ್ಧ ಮತನೀಡಿ ಜನತಾ ಪಾರ್ಟಿಯನ್ನು ಅಧಿಕಾರದ ಗದ್ದುಗೆಗೇರಿಸಿದರು. ಆದರೆ ಜನತಾ ಪಾರ್ಟಿ ಬಂಡವಾಳಶಾಹಿ ಮಾರ್ಗದಲ್ಲೇ ಅಧಿಕಾರ ಮುಂದುವರಿಸಿ ಜನರ ಆಶೋತ್ತರಗಳನ್ನು ಪೂರೈಸಲು ವಿಫಲಗೊಂಡಿತು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮುಖಂಡತ್ವದಲ್ಲಿ ಎಡ ಮತ್ತು ಪ್ರಜಾಪ್ರಭುತ್ವರಂಗ ರಚಿಸಿ, ನಿಶ್ಚಿತ ಕಾರ್ಯಕ್ರಮದಡಿಯಲ್ಲಿ ಸರ್ವಾಧಿಕಾರದ ಮತ್ತು ಬಂಡವಾಳಶಾಹಿ ನೀತಿ ವಿರುದ್ಧ ಹೋರಾಡಬೇಕೆಂದು ಕರೆ ಕೊಟ್ಟಿದೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ. ಪಶ್ಚಿಮ ಬಂಗಾಲ, ತ್ರಿಪುರ, ಕೇರಳ ರಾಜ್ಯದ ಜನತೆ ಈ ಕಾರ್ಯಕ್ರಮಕ್ಕೆ ಓಗೊಟ್ಟು, ಸರ್ವಾಧಿಕಾರಿ-ಬಂಡವಾಳಶಾಹಿ ಶಕ್ತಿಗಳನ್ನು ಇತ್ತೀಚಿನ ಚುನಾವಣೆಯಲ್ಲಿ ಸೋಲಿಸಿ ದೇಶದ ಜನತೆಗೆ ಹೊಸ ದಾರಿ ತೋರಿಸಿಕೊಟ್ಟಿದೆ. ದೇಶದ ಹಲವಾರೆಡೆಗಳಲ್ಲಿ ಹಿಂದುಳಿದವರ ಮೇಲೆ ಅತ್ಯಾಚಾರ, ಜಾತೀಯ-ಭಾಷಾ ಗಲಭೆಗಳು ನಡೆಯುತ್ತಿರುವಾಗ, ಪಶ್ಚಿಮ ಬಂಗಾಲದಲ್ಲಿ ಮಾತ್ರ ಅಂಥ ಘಟನೆಗಳು ಘಟಿಸದಿರುವುದು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆ ಅತ್ಯಂತ ಹೆಮ್ಮೆಯ ಸಂಗತಿ. ಸಮಾಜದಲ್ಲಿ ಮೂಲಭೂತವಾದ ಆರ್ಥಿಕ, ರಾಜಕೀಯ, ಸಾಮಾಜಿಕ ಬದಲಾವಣೆಯಾಗಿ ಹೊಸ ಸಮಾಜ ನಿರ್ಮಾಣವಾದರೆ ಮಾತ್ರ ನಮ್ಮ ದೇಶ ಎದುರಿಸುತ್ತಿರುವ ಸಮಸ್ಯೆಗಳಿಗೆ ಪೂರ್ಣ ಪರಿಹಾರ ಸಿಗಲು ಸಾಧ್ಯ. ಅಂಥ ಹೊಸ ಪರಿಸರದಲ್ಲಿ ಜನರ ವಿಚಾರ, ಆಚಾರ, ತಿಳುವಳಿಕೆಯಲ್ಲೂ ಕ್ರಾಂತಿಕಾರಿ ಬದಲಾವಣೆಯಾಗುತ್ತದೆ. ಈಗಿರುವ ಆರ್ಥಿಕ-ರಾಜಕೀಯ-ಸಾಮಾಜಿಕ ಸಂಬಂಧಗಳನ್ನು ಮುಂದುವರಿಸಿಕೊಂಡು ಹೋಗಿ, ದೇವರೊಬ್ಬರಿಂದಲೇ ಬದಲಾವಣೆ ಮಾಡಲು ಸಾಧ್ಯ, ಜನರಲ್ಲಿ ಸುವಿಚಾರ ಹೊಳೆಯಲು ಸಾಧ್ಯವೆಂದು ಹೇಳುವ ವಿಚಾರಕ್ಕೆ ಆಧುನಿಕ ಯುಗದಲ್ಲಿ ಆಧಾರಗಳಿಲ್ಲೆಂಬ ವಿಷಯ ಮನವರಿಕೆಯಾಗುತ್ತಿದ್ದರೂ ಕೂಡ, ತಮ್ಮ ವರ್ಗದ ಹಿತರಕ್ಷಣೆ ಮಾಡಿಕೊಳ್ಳುವ ದುರುದ್ದೇಶದಿಂದ ಶಾಸ್ತ್ರೀಯವಲ್ಲದ ಸಿದ್ಧಾಂತಗಳ ಮೂಲಕ ಹೊಸ ವಿಚಾರ ಧಾಳೆಯಲ್ಲಿ ಮುಂದುವರಿಯುವ ಜನರಲ್ಲಿ ಗೊಂದಲ, ಸಂಶಯ ಉಂಟುಮಾಡುವ ಸುವ್ಯವಸ್ಥಿತ ಯೋಜನೆ ನಡೆದಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ, ಪ್ರಜಾಪ್ರಭುತ್ವ ಶಕ್ತಿಗಳು, ಸುಸಂಘಟಿತ ರೈತ-ಕಾರ್ಮಿಕ ವರ್ಗ, ಯುವಜನತೆ ಈ ಕುತಂತ್ರಗಳ ವಿರುದ್ಧ ಹೋರಾಡಿ, ಎಡ ಮತ್ತು ಪ್ರಜಾಪ್ರಭುತ್ವರಂಗದ ಕಾರ್ಯಕ್ರಮವನ್ನು ಪ್ರಚಾರಮಾಡಿ, ಬಲಿಷ್ಠವಾದ ರಂಗ ರಚಿಸಿ, ಅದರ ಸರಕಾರ ರಚನೆಯಾಗುವ ದಿಸೆಯಲ್ಲಿ ಕಾರ್ಯಪ್ರವೃತ್ತರಾಗುವುದು ಈ ಸಂಧಿಗ್ದ ಕಾಲದ ಪ್ರಮುಖ ಕರ್ತವ್ಯ. ಇದನ್ನು ಸಾಧಿಸಲು ಮುಂದುವರಿಯೋಣ.

ಯುರೋ ಕಮ್ಯುನಿಸಂ

—ವಸಂತ



ಅಂತರಾಷ್ಟ್ರೀಯ ಕಮ್ಯುನಿಸ್ಟ ಚಳುವಳಿಯಲ್ಲಿ "ಯುರೋ ಕಮ್ಯುನಿಸಂ" ಎಂದು ಕರೆಯಲ್ಪಡುತ್ತಿರುವ ಒಂದು ಹೊಸ ಪ್ರಕ್ರಿಯೆ (Phenomenon) ಎಲ್ಲರ ಗಮನ ಸೆಳೆದಿದೆ. ಇದನ್ನು ಒಂದು ಹೊಸ ವಾದವಾಗಿಯೂ ಪ್ರತಿಬಿಂಬಿಸಲಾಗುತ್ತಿದೆ. ಅಂತರಾಷ್ಟ್ರೀಯ ಎಡ ಪಂಥದ ಬೇರೆ ಬೇರೆ ವಿಭಾಗಗಳಲ್ಲಿ ಇದು ಅತ್ಯಂತ ಚರ್ಚಾಸ್ಪದ ವಿಷಯವಾಗಿದೆ. ಈ ಬೆಳವಣಿಗೆಯನ್ನು ಬೇರೆ ಬೇರೆ ವಿಭಾಗಗಳು ಬೇರೆ ರೀತಿಯಲ್ಲಿ ವಿವರಿಸಿವೆ.

ಯುರೋಕಮ್ಯುನಿಸಂ, ಅದರ ಹೆಸರು ಸೂಚಿಸುವಂತೆ, ಕಮ್ಯುನಿಸಂನ ಯುರೋಪಿನ ವಿಶಿಷ್ಟ ರೂಪ ಅಥವಾ ಯುರೋಪಿನ ಕಮ್ಯುನಿಸ್ಟ ಪಕ್ಷಗಳೆಲ್ಲಾ ಪ್ರತಿಪಾದಿಸುತ್ತಿರುವ ಹೊಸ ಸಿದ್ಧಾಂತವಲ್ಲ. ಪಶ್ಚಿಮ ಯುರೋಪಿನ ಪ್ರಮುಖ ಕಮ್ಯುನಿಸ್ಟ ಪಕ್ಷಗಳಾದ ಸ್ಪೈನ್, ಇಟಲಿ, ಫ್ರಾನ್ಸಿನ ಪಕ್ಷಗಳು ಅಭಿವೃದ್ಧ ಬಂಡವಾಳಶಾಹಿ ದೇಶಗಳಲ್ಲಿ ಸಮಾಜವಾದೀ ಸಮಾಜ ನಿರ್ಮಿಸುವ ಹೋರಾಟದಲ್ಲಿ ಅನುಸರಿಸುವ ನೀತಿಗಳಲ್ಲಿ ತರಬೇಕೆಂದಿರುವ ಮೂಲಭೂತ ಬದಲಾವಣೆಗಳು, ಹಾಗೂ ಆ ಪಕ್ಷಗಳ ಅನುಭವ, ವಿಶ್ಲೇಷಣೆಯ ಬೆಳಕಿನಲ್ಲಿ ಮಾರ್ಕ್ಸವಾದದ ಬೇರೆ ವಿವರಣೆ ಇವುಗಳ ಸಮುಚ್ಚಯಕ್ಕೆ ಬಿದ್ದಿರುವ ಹೆಸರು. ಯುರೋಕಮ್ಯುನಿಸಂ ಎಂಬುದು ಈ ಪಕ್ಷಗಳು ಈ ತಮ್ಮ ನಿಲುವುಗಳಿಗೆ ಕೊಟ್ಟಿರುವ ಹೆಸರಲ್ಲ, ಬದಲಾಗಿ ಹೆಚ್ಚಾಗಿ ಪತ್ರಕರ್ತರು ಈ ರೀತಿ ಈ ನಿಲುವುಗಳನ್ನು ಕರೆದು, ಬಳಕೆಗೆ ಬಂದಿರುವ ಹೆಸರು.

ತೊಗ್ಲಿಯಾತ್ತಿ ದಾಖಲೆ :

ಯುರೋಕಮ್ಯುನಿಸಂ ಎಂದು ಹೆಸರು ತಾಳಿರುವ ನಿಲುವುಗಳ ಮೂಲವನ್ನು ಇಟಾಲಿಯನ್ ಕಮ್ಯುನಿಸ್ಟ ಪಾರ್ಟಿಯ ನಾಯಕ "ತೊಗ್ಲಿಯಾತ್ತಿ" ಬರೆದ "ತೊಗ್ಲಿಯಾತ್ತಿ ದಾಖಲೆ" ಎಂದು ಪ್ರಸಿದ್ಧವಾದ ದೀರ್ಘಲೇಖನದಲ್ಲಿ ಕಾಣಬಹುದು. ಸೋವಿಯೆತ್ ಕಮ್ಯುನಿಸ್ಟ ಪಕ್ಷದ 1956ರ 20ನೇ ಅಧಿವೇಶನದಲ್ಲಿ ಪ್ರಕಟವಾದ ಸ್ಟಾಲಿನ್ ಕಾಲದ ಕೆಲವು ಬೆಳವಣಿಗೆಗಳ ಹಿನ್ನಲೆಯಲ್ಲಿ ತೊಗ್ಲಿಯಾತ್ತಿ ಮತ್ತು ಇಟಲಿಯನ್ ಪಕ್ಷ ಧ್ವನಿಸಿದ ಅಂತರಾಷ್ಟ್ರೀಯ ಕಮ್ಯುನಿಸ್ಟ ಚಳುವಳಿಯಲ್ಲಿ ಬಹುಕೇಂದ್ರವಾದದ ಘೋಷಣೆಯಲ್ಲಿ ಸಹ ಈ ನಿಲುವುಗಳ ಮೂಲರೂಪ ಕಾಣಬಹುದು. ತೊಗ್ಲಿಯಾತ್ತಿ ದಾಖಲೆಯಲ್ಲಿ ರಷ್ಯಾ–ಚೀನಾ ವೈಷಮ್ಯದ ಬಗ್ಗೆ ಸಹ ಚರ್ಚೆ ಇದೆ.

ತೊಗ್ಲಿಯಾತ್ತಿ ದಾಖಲೆಯ ಮುಖ್ಯ ಅಂಶಗಳು :

ಬೂರ್ಜ್ವಾ ಪ್ರಭುತ್ವದ ಒಳಗೆ ಅಧಿಕಾರವನ್ನು [illegible] ಜನರ ಪಕ್ಷ ಗೆದ್ದು ಆ ಪ್ರಭುತ್ವವನ್ನು ಒಳಗಿನಿಂದಲೇ ಕ್ರಮೇಣವಾಗಿ ಶಾಂತಿಯುತವಾಗಿ ಬದಲಾಯಿಸುತ್ತಾ ಪುನರ್ನವೀಕರಿಸುತ್ತಾ ಸಮಾಜವಾದದೆಡೆಗೆ ಸಾಗುವ ಹೊಸ ತಂತ್ರ (strategy). ರಷ್ಯಾ ಮತ್ತು ಇತರ ಯುರೋಪಿನ ಸಮಾಜವಾದಿ ದೇಶಗಳಲ್ಲಿನ ಸಾಮಾಜಿಕ ರಾಜಕೀಯ ಬೆಳವಣಿಗೆಗಳ ಬಗ್ಗೆ ಟೀಕೆ; ಅಂತರಾಷ್ಟ್ರೀಯ ಕಮ್ಯುನಿಸ್ಟ ಚಳುವಳಿಯ ರಾಷ್ಟ್ರೀಯ ವಿಭಾಗಗಳ ಪೂರ್ಣ ಸ್ವಾತಂತ್ರ್ಯ, ಸಾರ್ವಭೌಮತ್ವದ ಬಗ್ಗೆ ಇತ್ತು.

ಈ ನಿಲುವುಗಳು ಇಟಾಲಿಯನ್ ಪಕ್ಷದೊಳಗೆ ಸುಮಾರು ಸುಮಾರು ದಶಕಕ್ಕೂ ಕಾಲ ಖಚಿತಗೊಳ್ಳುತ್ತಿದ್ದು, 70ರ ದಶಕದಲ್ಲಿ ಈ ನಿಲುವುಗಳ ಬಗ್ಗೆ ಅದು ಇತರ ಯುರೋಪಿನ ಕಮ್ಯುನಿಸ್ಟ ಪಕ್ಷಗಳೊಂದಿಗೆ ವಿಚಾರ ವಿನಿಮಯ ನಡೆಸಿತು. ಈ ವಿಚಾರ ವಿನಿಮಯ ಫಲವಾಗಿ 1975ರ ಜುಲೈಯಲ್ಲಿ ಸ್ಪೈನ್ ಮತ್ತು ಇಟಾಲಿಯನ್ ಕಮ್ಯುನಿಸ್ಟ ಪಕ್ಷಗಳ ಹಲವು ನಿಲುವುಗಳ ಬಗ್ಗೆ ಸಾಮಾನ್ಯ ಒಪ್ಪಿಗೆ ಸೂಚಿಸುವ ಜಂಟಿ ಘೋಷಣೆ ಹೊರಡಿಸಿದವು. ನವಂಬರ್ 75ರಲ್ಲಿ ರೋಮ್‌ನಲ್ಲಿ ಫ್ರೆಂಚ್ ಮತ್ತು ಇಟಾಲಿಯನ್ ಪಕ್ಷಗಳ ಜಂಟಿ ಘೋಷಣೆ ಏಪ್ರಿಲ್ 1976ರಲ್ಲಿ ಬ್ರಿಟಿಷ್ ಮತ್ತು ಇಟಾಲಿಯನ್ ಪಕ್ಷಗಳ ಜಂಟಿ ಘೋಷಣೆ, ಸಪ್ಟೆಂಬರ್ 75ರಲ್ಲಿ ಜಪಾನ್ ಮತ್ತು ಇಟಾಲಿಯನ್ ಪಕ್ಷಗಳು ಟೋಕ್ಯೋದಲ್ಲಿ ಹೊರಡಿಸಿದ ಘೋಷಣೆ, ಸ್ವಲ್ಪ ಸಮಯದ ನಂತರ ಫ್ರೆಂಚ್ ಮತ್ತು ಜಪಾನ್‌ನ ಪಕ್ಷಗಳು ಪಕ್ಷದ ಪ್ರಣಾಳಿಕೆಗಳಿಂದ ಕಾರ್ಮಿಕವರ್ಗದ ಸರ್ವಾಧಿಕಾರವನ್ನು ಸ್ಥಾಪಿಸುವ ಉದ್ದೇಶವನ್ನು ತೆಗೆದುಹಾಕಿದ್ದು; ಇವುಗಳಿಂದ 'ಯುರೋಕಮ್ಯುನಿಸಂ' ಧೋರಣೆಗಳು ಒಂದು ಮುಖ್ಯ ಅಂತರಾಷ್ಟ್ರೀಯ ಬೆಳವಣಿಗೆಯಾಗಿ ಗಮನ ಸೆಳೆಯುವಂತಾಗಿದೆ.

ಕ್ರಾಂತಿಯ ಬದಲು ಪುನರ್ನವೀಕರಣ :

ಯುರೋ ಕಮ್ಯುನಿಸಂನ ಮುಖ್ಯ ಸೈದ್ಧಾಂತಿಕ ನಿಲುವುಗಳು ಈ ಮೇಲೆ ತಿಳಿಸಿರುವ ಜಂಟಿ ಘೋಷಣೆಗಳಲ್ಲಿ, ಆದರಲ್ಲೂ ಮುಖ್ಯವಾಗಿ ಫ್ರೆಂಚ್ ಮತ್ತು ಇಟಾಲಿಯನ್ ಪಕ್ಷಗಳ ಘೋಷಣೆಯಲ್ಲಿ, 1976ರ ಫ್ರೆಂಚ್ ಪಕ್ಷದ 22ನೇ ಅಧಿವೇಶನ ಅಂಗೀಕರಿಸಿದ ನಿರ್ಣಯದಲ್ಲಿ, ಸ್ಪೈನ್ ಪಕ್ಷದ ಕಾರ್ಯದರ್ಶಿ ಸ್ಯಾಂಟಿಯಾಗೋ ಕ್ಯಾರಿಲ್ಲೋ ಬರೆದಿರುವ ಪುಸ್ತಕ "ಯುರೋಕಮ್ಯುನಿಸಂ ಮತ್ತು ಪ್ರಭುತ್ವ" ಎಂಬ ಪುಸ್ತಕದಲ್ಲಿ ಹಾಗೂ 1976ರಲ್ಲಿ ಯುರೋಪಿನ ಪಕ್ಷಗಳ ಸಮ್ಮೇಳನದಲ್ಲಿ ಈ ಪಕ್ಷಗಳ ನಾಯಕರು ಅದರಲ್ಲೂ ಮುಖ್ಯವಾಗಿ ಇಟಾಲಿಯನ್ ಪಕ್ಷದ ಮಹಾಕಾರ್ಯದರ್ಶಿ ಎನ್ರಿಕೋ ಬರ್ಲಿಂಗರ್ ಮಾಡಿದ ಭಾಷಣ ಇವುಗಳಲ್ಲಿ ಸ್ಪಷ್ಟವಾಗಿ ಮೂಡಿ ಬಂದಿವೆ.

ಯುರೋ ಕಮ್ಯುನಿಸಂನ ನಿಲುವುಗಳಲ್ಲಿ ಅತಿ ಮುಖ್ಯವಾದುದು ಎಂದರೆ ಅಭಿವೃದ್ಧ ಬಂಡವಾಳಶಾಹಿ ದೇಶಗಳಲ್ಲಿ, ಅದರಲ್ಲೂ ಪಶ್ಚಿಮ ಯುರೋಪಿನ ದುಡಿಯುವ ಜನರ ಪಕ್ಷಗಳು ಅಗಾಧವಾಗಿ ಬೆಳೆದಿರುವ ದೇಶಗಳಲ್ಲಿ ಬೂರ್ಜ್ವಾ ಪ್ರಭುತ್ವ ಕಿತ್ತೊಗೆಯುವ ಸಮಾಜವಾದೀ ಕ್ರಾಂತಿ ಅಗತ್ಯವಿಲ್ಲ, ಇಂತಹ ಕ್ರಾಂತಿಯ ಮಾತು ಅಸಂಬದ್ಧ ಎಂಬುದು. ಇದರ ಬದಲು ಬೂರ್ಜ್ವಾ ಪ್ರಭುತ್ವದ ಚೌಕಟ್ಟಿನೊಳಗೆ ಅಧಿಕಾರದ ಸ್ಥಾನಗಳನ್ನು ಗೆದ್ದು, ಅದನ್ನು ಒಳಗಿನಿಂದಲೇ ಕ್ರಮೇಣ ಪುನರ್ನಿರ್ಮಿಸುವ ಮೂಲಕ ಸಮಾಜವಾದದೆಡೆಗೆ ಸಾಗುವ ಹೊಸ ತಂತ್ರವನ್ನು ಯುರೋ ಕಮ್ಯುನಿಸಂ ಅನುಕರಿಸಬಯಸುತ್ತದೆ. ಪುನರ್ನವೀಕರಣ ಮತ್ತು ಪ್ರಗತಿ (Renewal and progress) ಇದು ಯುರೋ ಕಮ್ಯುನಿಸಂನ ಮುಖ್ಯ ಘೋಷಣಾ ಶಬ್ದಗಳು. ಇವು ಸಾಮಾನ್ಯವಾಗಿ ಬಳಸಲ್ಪಡುವ ಕ್ರಾಂತಿ ಮತ್ತು ಸಮಾಜವಾದಗಳನ್ನು ಕೈಬಿಟ್ಟು ಅವುಗಳ ಬದಲಾಗಿ ಉಪಯೋಗಿಸಲ್ಪಡುವ ಶಬ್ದಗಳು.

ಕಾರ್ಮಿಕರ ಸರ್ವಾಧಿಕಾರವಲ್ಲ, ಪ್ರಜಾಸತ್ತಾತ್ಮಕ ಸಮಾಜವಾದ:

ಯುರೋ ಕಮ್ಯುನಿಸ್ಟರ ಪ್ರಕಾರ ಅವರ ದೇಶಗಳಲ್ಲಿ ಪ್ರಭುತ್ವ ಪ್ರಜಾಸತ್ತಾತ್ಮಕವಾದ ಹಾಗೂ ನಿಷ್ಪಕ್ಷಪಾತಿಯಾದ ಪ್ರಭುತ್ವ (state) ಮತ್ತು ಸ್ವತಂತ್ರ ನ್ಯಾಯಾಂಗ ಇದೆ. ಇವು ಬೂರ್ಜ್ವಾ ವರ್ಗದ ಕೊಡುಗೆಗಳಲ್ಲ, ಬದಲಾಗಿ ದುಡಿಯುವ ಜನರ ದೀರ್ಘ ಹೋರಾಟದ ಫಲಗಳು. ಆದ್ದರಿಂದ ಸಮಾಜವಾದೀ ನಿರ್ಮಾಣದ ಚಳುವಳಿಯಲ್ಲಿ ಇವುಗಳನ್ನು ಕಾದಿರಿಸಿ, ಬೆಳೆಸುವದು ಮುಖ್ಯ. ಸಮಾಜವಾದವೆಂದರೆ ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯದ ಮೇಲಿನ ಹಂತವಾಗಿದ್ದು, ಇದು ಆರ್ಥಿಕ, ಸಾಮಾಜಿಕ, ರಾಜಕೀಯ ಜೀವನದ ಸತತ ಪ್ರಜಾಪ್ರಭುತ್ವೀಕರಣದಿಂದ ಮಾತ್ರ ಸಾಧ್ಯ. ಆದ್ದರಿಂದ ಯುರೋ ಕಮ್ಯುನಿಸ್ಟ ಪಕ್ಷಗಳು ತಾವು ನಿರ್ಮಿಸಬಯಸುವ ಸಮಾಜವಾದಿ ಸಮಾಜದಲ್ಲೂ ರಾಜಕೀಯ ಪಕ್ಷಗಳ ಬಹುಳತೆ, ವಿರೋಧ ಪಕ್ಷಗಳ ಅಸ್ತಿತ್ವ, ಚಟುವಟಿಕೆಗಳನ್ನು ಮುಕ್ತ ಚುನಾವಣೆಗಳ ಆಧಾರದ ಮೇಲೆ ಆಗಾಗ ಬೇರೆ ಬೇರೆ ಪಕ್ಷಗಳು, ಮೈತ್ರಿಕೂಟಗಳು ಅಧಿಕಾರಕ್ಕೆ ಬರುವ ಪದ್ಧತಿಯನ್ನು ಒಪ್ಪಿಕೊಳ್ಳುತ್ತವೆ. ಅಲ್ಲದೇ ಸಮಾಜವಾದೀ ಉತ್ಪಾದನಾ ಸಂಬಂಧಗಳನ್ನು ಸಮಾಜವಾದೀ ವಿತರಣೆ ಹಾಗೂ ಬೇರೆ ವ್ಯವಸ್ಥೆಯನ್ನು (ಬೂರ್ಜ್ವಾ ಆಸ್ತಿ ಸಂಬಂಧಗಳನ್ನು ನಾಶಪಡಿಸದೆ) ತರಲು ಪ್ರಯತ್ನಿಸಲಾಗುವದು. ಯುರೋ ಕಮ್ಯುನಿಸ್ಟರ ಪ್ರಕಾರ ಇವೆಲ್ಲಾ ಸಾಧ್ಯವಾಗುವದು ಈ ದೇಶಗಳಲ್ಲಿ ಕಾರ್ಮಿಕ ವರ್ಗ ಹೆಚ್ಚುಕಡಿಮೆ ಬಹುಸಂಖ್ಯಾತರಾಗಿರುವದರಿಂದ ಇದರಿಂದಾಗಿ ಶುದ್ಧ (ವರ್ಗಾಸಕ್ತಿಯಿಲ್ಲದ) ಪ್ರಜಾಪ್ರಭುತ್ವ ಸಾಧ್ಯವಾಗುತ್ತದೆ ಇದರಿಂದಾಗಿಯೇ ರಷ್ಯಾದಂತಹ ದೇಶಗಳಲ್ಲಿ ಅಗತ್ಯಬಿದ್ದ ಕಾರ್ಮಿಕವರ್ಗದ ಸರ್ವಾಧಿಕಾರ ಈ ದೇಶಗಳಲ್ಲಿ ಅಗತ್ಯವಿಲ್ಲ. ಆದ್ದರಿಂದಲೇ ಯುರೋ ಕಮ್ಯುನಿಸಂ ಒಪ್ಪುವ ಈ ಪಕ್ಷಗಳು ಕಾರ್ಮಿಕ ವರ್ಗದ ಸರ್ವಾಧಿಕಾರವನ್ನು ತಮ್ಮ ಪ್ರಣಾಳಿಕೆಯಿಂದ ಕೈಬಿಟ್ಟಿವೆ. ಈ ಪಕ್ಷಗಳ ಪ್ರಕಾರ ಸರ್ವಾಧಿಕಾರ ಎಂಬ ಶಬ್ದವೇ ಹಿಟ್ಲರ್ ಮುಂತಾದ ಸರ್ವಾಧಿಕಾರಗಳನ್ನು ನೆನಪಿಗೆ ತರುವದರಿಂದ ಶಾಂತಿಯುತ "ಪ್ರಜಾಸತ್ತಾತ್ಮಕ ಸಮಾಜವಾದ"ಕ್ಕೆ ಬದ್ಧರಾಗಿರುವ ಈ ಪಕ್ಷಗಳು ಈ ಪರಿಕಲ್ಪನೆಯನ್ನು ಬಿಟ್ಟುಕೊಟ್ಟಿವೆ ಇದರ ಬದಲು ದುಡಿಯುವ ಜನರ ಅಧಿಪತ್ಯ (hegemony)ವನ್ನು ಸ್ಥಾಪಿಸುವದು ಈ ಪಕ್ಷಗಳ ಗುರಿ. ಶಾಂತಿಯುತ ಬದಲಾವಣೆ ಸಾಧ್ಯತೆ ಹೆಚ್ಚಾಗಿರುವದಕ್ಕೆ ಯುರೋ ಕಮ್ಯುನಿಸ್ಟರು ಕೊಡುವ ಇನ್ನೊಂದು ಕಾರಣ: ಈ ದೇಶಗಳಲ್ಲಿ ಇಂದು ಪ್ರಭುತ್ವ ಗುತ್ತೇದಾರಿ ಬಂಡವಾಳಶಾಹಿ ಶಕ್ತಿಗಳ ಅಧಿಪತ್ಯದಲ್ಲಿದೆ. ಆದರೆ ಗುತ್ತೇದಾರಿ ಬಂಡವಾಳಶಾಹಿಗೆ ಎಲ್ಲಾ ವರ್ಗಗಳ ವಿರೋಧ ಇದೆ, ದುಡಿಯುವ ವರ್ಗಗಳಲ್ಲದ ವರ್ಗಗಳು ಸಹ ಇದಕ್ಕೆ ಬದ್ಧ ವಿರೋಧ ವ್ಯಕ್ತಪಡಿಸುತ್ತಿವೆ ಆದ್ದರಿಂದ ಚುನಾವಣೆಗಳಲ್ಲಿ ಗುತ್ತೇದಾರಿ ಬಂಡವಾಳಶಾಹಿಯ ವಿರುದ್ಧ ಪ್ರಜಾಸತ್ತಾತ್ಮಕ ತೀರ್ಪುಪಡೆಯುವದರಿಂದ ಅವರ ಅಧಿಪತ್ಯವನ್ನು ಕೊನೆಗಾಣಿಸಬಹುದು.

ಆರ್ಥಿಕ ರಂಗದಲ್ಲಿ ಸಮಾಜವಾದಿ ವ್ಯವಸ್ಥೆಯತ್ತ ಮುನ್ನಡೆ ಸಹ, ಸಮಾಜದ ಮುಖ್ಯ ಉತ್ಪಾದನಾ ಸಾಧನ ವಿನಿಮಯಗಳ ಮೇಲೆ ಕ್ರಮೇಣ ಸಾರ್ವಜನಿಕ ಹತೋಟಿ ಮತ್ತು ಅವುಗಳ [illegible] ಸಾಧಿಸಬಹುದು.

ಯುರೋಕಮ್ಯುನಿಸ್ಟರ ಸಮಾಜವಾದ ಬೆಳೆಸುವ ತಂತ್ರದಲ್ಲಿ ಇನ್ನೊಂದು ಮುಖ್ಯಭಾಗ ಬಂಡವಾಳಶಾಹಿ ಸಮಾಜದ ಸೈದ್ಧಾಂತಿಕ ಅಸ್ತ್ರಗಳಾಗಿರುವ ರೇಡಿಯೋ, ಟಿ.ವಿ., ಸಿನೇಮಾ, ಪತ್ರಿಕೆಗಳು ಮುಂತಾದವುಗಳನ್ನು ಒಳಗಿನಿಂದಲೇ ಬದಲಾಯಿಸಿ ದುಡಿಯುವ ಜನತೆಯ ಹೋರಾಟದ ಅಸ್ತ್ರಗಳಾಗಿ ಮಾರ್ಪಡಿಸುವದು, ಪ್ರಭುತ್ವದ ದಮನಕಾರಿ ಅಸ್ತ್ರಗಳಾದ ಪೋಲೀಸು, ಸೈನ್ಯಗಳ ಸಿಬ್ಬಂದಿಯಲ್ಲಿ ರಾಜಕೀಯ ಮತ್ತು ಸೈದ್ಧಾಂತಿಕ ಪ್ರಚಾರ ಮೂಲಕ ಅವನ್ನು ಆಳುವ ವರ್ಗಗಳ ಅಸ್ತ್ರಗಳಾಗಿ ಅವು ಬಳಕೆಯಾಗದಂತೆ ಅವುಗಳ ಮನ ವೊಲಿಸುವದು.

ಚಾರಿತ್ರಿಕ ಒಪ್ಪಂದ :

ಯುರೋ ಕಮ್ಯುನಿಸ್ಟ ಪಕ್ಷಗಳ ತುರ್ತಿನ ರಾಜಕೀಯ ಕಾರ್ಯಕ್ರಮ ಎಂದರೆ ಸೋಷಲಿಷ್ಟರು, ಕ್ರಿಶ್ಚಿಯನ್ನರು ಮುಂತಾದ ಉಳಿದ ಗುತ್ತೇದಾರಿ ವಿರೋಧಿ ಶಕ್ತಿಗಳೊಂದಿಗೆ ಹೊಂದಾಣಿಕೆಯೊಂದಿಗೆ ಗುತ್ತೇದಾರಿ ವಿರೋಧಿ ರಂಗ ಕಟ್ಟುವದು. ಇಟಾಲಿಯನ್ ಪಕ್ಷ ಈ ರಂಗವನ್ನು 'ಚಾರಿತ್ರಿಕ ಒಪ್ಪಂದ' (Historic compromise) ಎಂದು ಕರೆದಿದೆ.

ಈ ಯುರೋ ಕಮ್ಯುನಿಸ್ಟ ಪಕ್ಷಗಳು ಒಂದು ಕ್ರಾಂತಿಕಾರಿ ಪಕ್ಷದ ಲೆನಿನ್‌ವಾದಿ ಪರಿಕಲ್ಪನೆಯನ್ನು ಬಹೇಷ್ಟು ಕೈಬಿಟ್ಟಿವೆ. ದುಡಿಯುವ ಜನರ ಚಳುವಳಿಯಲ್ಲಿ ಮಾರ್ಕ್ಸವಾದಿ-ಲೆನಿನ್‌ವಾದಿ ಸಿದ್ಧಾಂತ ಮತ್ತು ಕಮ್ಯುನಿಸ್ಟ ಪಕ್ಷಗಳ ಪ್ರಮುಖ ಸೈದ್ಧಾಂತಿಕ ಪಾತ್ರವನ್ನು ಅಲ್ಲಗಳೆಯುತ್ತಾ, ಒಂದು ವಿಶಿಷ್ಟ ಸಮಸ್ಯೆಗೆ ಬೇರೆಬೇರೆ ಪಕ್ಷಗಳು, ಬೇರೆಬೇರೆ ಸಿದ್ಧಾಂತಗಳು ತಮ್ಮ ಪರಿಹಾರ ಒದಗಿಸಲು ಸ್ಪರ್ಧಿಸಬೇಕೆಂಬ ನಿಲುವುಗಳೊಂದಿಗೆ ಇದು ಸ್ಪಷ್ಟವಾಗಿದೆ. ಇದಲ್ಲದೆ ಕ್ರಾಂತಿಕಾರಿ ತಂತ್ರ ಮತ್ತು ರಾಜಕೀಯ ವಿಷಯಗಳನ್ನು ಬಿಟ್ಟು ಬೇರೆ ಯಾವುದೇ ವಿಷಯದ ಮೇಲೂ ಅಭಿಪ್ರಾಯ ಪ್ರಕಟಿಸುವದಿಲ್ಲ ಹಾಗೂ ಈ ಉಳಿದ ವಿಷಯಗಳ ಬಗ್ಗೆ ಸದಸ್ಯರು ಯಾವದೇ ಅಭಿಪ್ರಾಯ ಹೊಂದಿರಬಹುದು ಎಂಬ ಹೇಳಿಕೆ ಸಹ ಇದಕ್ಕೆ ಪುಷ್ಟಿಕೊಡುತ್ತದೆ.

ರಷ್ಯಾಕ್ಕೆ ವಿರೋಧ, ನಾಟೋಕ್ಕೆ ಬೆಂಬಲ :

ಯುರೋ ಕಮ್ಯುನಿಸ್ಟ ಪಕ್ಷಗಳು ಅದರಲ್ಲೂ ಸ್ಪೈನಿನ ಕಮ್ಯುನಿಸ್ಟ ಪಕ್ಷ "ಸೋವಿಯತ್ ಮಾದರಿ"ಯ ಸಮಾಜವಾದಿ ಕ್ರಾಂತಿ ವಿರೋಧಿಸುವದು ಮಾತ್ರವಲ್ಲದೇ, ಸೋವಿಯತ್ ರಷ್ಯಾ ಮತ್ತು ಇತರ ಸಮಾಜವಾದಿ ದೇಶಗಳ ಕೂಟವನ್ನು ಇನ್ನೊಂದು ಅಧಿಕಾರ ಬಣ ಎಂದು ವರ್ಣಿಸುತ್ತವೆ. ಅಮೇರಿಕನ್ ಸಾಮ್ರಾಜ್ಯವಾದಿ ಮತ್ತು ಸಮಾಜವಾದಿ ಬಣಗಳಿಂದ ಸಮಾನ ಅಂತರ ಇವುಗಳ ವಿದೇಶಿ ನೀತಿ. ವಾರ್ಸಾ ಒಪ್ಪಂದದ ಸಮಾಜವಾದಿ ಬಣದ ಸೈನ್ಯಗಳಿಗೆ [illegible]ವಾಗಿ ಸಮತೋಲ ಸಾಧಿಸು

ಯುರೋಪಿನಲ್ಲಿ ನಾಟೋ ಸೈನ್ಯಗಳ ಮುಂದುವರಿಕೆ ಅನಿವಾರ್ಯ. ಅಲ್ಲದೇ ತಮ್ಮ ದೇಶಗಳು ನಾಟೋದಿಂದ ಹಿಂತೆಗೆಯುವ ಬೇಡಿಕೆ ಸಹ ಕೈಬಿಡಲಾಗಿದೆ. ಈಗ ಎರಡು ಧೃವಗಳಿರುವ ಸಮತೋಲನೆಗೆ ಪ್ರಯತ್ನಿಸುವದು ಯುರೋ ಕಮ್ಯುನಿಸಂ ಗುರಿ. ಬಹುಧ್ರುವ ಸಮತೋಲಿಸಿ ಎಂದರೆ ಇವೆರಡು ಬಣಗಳಿಗೆ ವಿರುದ್ಧವಾಗಿರುವ ಇನ್ನೊಂದು ಯುರೋಪಿನ ದೇಶಗಳ ಬಣ. ಯುರೋ ಕಮ್ಯುನಿಸ್ಟ್ ಪಕ್ಷಗಳು ಹೆಚ್ಚುಹೆಚ್ಚಾಗಿ ತಮ್ಮನ್ನು ಸಮಾಜವಾದಿ ದೇಶಗಳಿಗೆ ಅದರಲ್ಲೂ ರಷ್ಯಾಕ್ಕೆ ವಿರೋಧವಾಗಿರುವ ಪಕ್ಷ ಎಂದು ತಮ್ಮ ದೇಶದಲ್ಲಿ ಪ್ರತಿಬಿಂಬಿಸಲು ಪ್ರಯತ್ನಿಸುತ್ತಿವೆ. ಇವು ಯುರೋ ಕಮ್ಯುನಿಸಂನ ಮುಖ್ಯ ನಿಲುವುಗಳು. ಇವುಗಳನ್ನು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಸಿದ್ಧಾಂತದ ಮತ್ತು ಜಗತ್ತಿನ, ಯುರೋಪಿನ ಅಭಿವೃದ್ಧ ಬಂಡವಾಳಶಾಹಿ ದೇಶಗಳ ಆರ್ಥಿಕ-ರಾಜಕೀಯ - ಸಾಮಾಜಿಕ ರಂಗದ ವಾಸ್ತವಿಕತೆಯ ಆಧಾರದಲ್ಲಿ ಈಗ ವಿಶ್ಲೇಷಿಸಬೇಕಾಗುತ್ತದೆ.

ಯುರೋ ಕಮ್ಯುನಿಸಂ ಮುನ್ನೋಟ, ವಾಸ್ತವಿಕತೆಯ ತಪ್ಪುಗ್ರಹಿಕೆ :

ಬೂರ್ಜ್ವಾ ಪ್ರಭುತ್ವವನ್ನು ಕಿತ್ತೊಗೆಯದೆ ಆ ಚೌಕಟ್ಟಿನೊಳಗೆ ಪಾರ್ಲಿಮೆಂಟ್ ಮುಂತಾದ ಅಧಿಕಾರ ಸ್ಥಾನಗಳನ್ನು ದುಡಿಯುವ ಜನರ ಪಕ್ಷಗಳು ಪಡೆದು ಆ ಪ್ರಭುತ್ವವನ್ನು ಶಾಂತಿಯುತವಾಗಿ ಒಳಗಿನಿಂದಲೇ ಪುನಃ ನವೀಕರಿಸುತ್ತಾ ಪ್ರಜಾಸತ್ತಾತ್ಮಕ ಸುಧಾರಣೆಗಳಿಂದ, ಪ್ರಜಾಸತ್ತಾತ್ಮಕ ಆರ್ಥಿಕ ಯೋಜನೆಯಿಂದ ಕ್ರಮೇಣ ವಿಕಾಸಹೊಂದುತ್ತಾ ಸಮಾಜವಾದದತ್ತ ಸಾಗುವದು; ಇದಕ್ಕೆ ಅವರು ಮುಖ್ಯವಾಗಿ ಮೂರು ಕಾರಣಗಳನ್ನು ಕೊಡುತ್ತಾರೆ. ಈ ದೇಶಗಳಲ್ಲಿ ಕಾರ್ಮಿಕವರ್ಗ ಬಹುಸಂಖ್ಯಾತವಾಗಿರುವದು; ಸಮಾಜವಾದದ ಶತ್ರುವಾದ ಗುತ್ತೇದಾರಿ ಬಂಡವಾಳಶಾಹಿಯ ಸಾಮಾಜಿಕ ಆಧಾರ ಬಹಳ ಕಿರಿದಾಗಿದ್ದು ಅದು ಉಳಿದೆಲ್ಲಾ ಸಾಮಾಜಿಕ ವರ್ಗಗಳಿಂದ ಪೂರ್ಣವಾಗಿ ಪ್ರತ್ಯೇಕಿಸಲ್ಪಟ್ಟಿರುವವು; ಈ ದೇಶಗಳ ಪ್ರಭುತ್ವಗಳು ಪ್ರಜಾಸತ್ತಾತ್ಮಕವಾಗಿ ನಿಷ್ಪಕ್ಷಪಾತವಾಗಿ ಇವೆ. ಈ ಕಾರಣಗಳಿಂದಲೇ "ಕಾರ್ಮಿಕ ವರ್ಗದ ಸರ್ವಾಧಿಕಾರ" ಯುರೋಪಿನ ದೇಶಗಳಲ್ಲಿ ಅಗತ್ಯವಿಲ್ಲವೆಂದು ಕೈಬಿಡಲಾಗಿದೆ.

ಯುರೋಪಿನ ಗುತ್ತೇದಾರಿ ಪ್ರಭುತ್ವಗಳು ಕ್ರಮೇಣ ಉಳಿದ ಸಾಮಾಜಿಕ ವರ್ಗಗಳಿಂದ ಪ್ರತ್ಯೇಕಗೊಳ್ಳುತ್ತಿರುವದೇನೋ ನಿಜ. ಆದರೆ ಇನ್ನೂ ಭೀಕರ ಸ್ವರೂಪ ಹೊಂದಿರುವ ಪ್ರಭುತ್ವ. ಅದಕ್ಕೆ ಇನ್ನೂ ವಿವಿಧ ವರ್ಗಗಳನ್ನು ಮರಳುಗೊಳಿಸುವ, ದಮನಗೊಳಿಸುವ ಶಕ್ತಿ ಇದೆ ಎಂಬುದನ್ನು ಮರೆಯಬಾರದು. ಅಷ್ಟೇ ಅಲ್ಲದೆ ಗುತ್ತೇದಾರಿ ಅಲ್ಲದೆ ಬಂಡವಾಳಶಾಹಿಗಳು ಸಮಾಜವಾದ ತರುವದರಲ್ಲಿ ಯಾವದೇ ರೀತಿಯಲ್ಲೂ ಸಹಕರಿಸುತ್ತಾರೆ ಅಂದುಕೊಳ್ಳುವುದು ಮೂರ್ಖತನ

ಕಾರ್ಮಿಕವರ್ಗದ ಸರ್ವಾಧಿಕಾರ ಬೇಕಾಗುವದು ಕಾರ್ಮಿಕವರ್ಗ ಅಲ್ಪಸಂಖ್ಯಾತವಾಗಿರುವದರಿಂದಲ್ಲ, ಆಳುವ ವರ್ಗಗಳು ತಮ್ಮ ಹಿತಾಸಕ್ತಿಗೆ ಧಕ್ಕೆಯಾಗುವ ಕ್ರಾಂತಿಯನ್ನು ದಮನ ಮಾಡಲು ಹಿಂಸಾಚಾರಕ್ಕೆ ಇಳಿಯುತ್ತವೆ ಎಂಬ ಕಾರಣದಿಂದ. ಆದ್ದರಿಂದ ಆಳುವ ವರ್ಗಗಳನ್ನು ಸಶಸ್ತ್ರ ಹೋರಾಟದಲ್ಲಿ ಕಿತ್ತೊಗೆಯುವದು, ಮತ್ತು ಕ್ರಾಂತಿ ಆದ ಮೇಲೆ ಅವುಗಳನ್ನು ದಮನ ಮಾಡುವದು ಪುನಃ ಸಂಘಟಿಸದಂತೆ ನೋಡಿಕೊಳ್ಳುವದು ಅತಿ ಮುಖ್ಯ. ಅಲ್ಲದೆ ಕಾರ್ಮಿಕ ವರ್ಗದ ಸರ್ವಾಧಿಕಾರ ಇರುವದು ಬಂಡವಾಳಶಾಹಿ ವಿರುದ್ಧ ಮಾತ್ರ. ಉಳಿದೆಲ್ಲಾ ದುಡಿಯುವ ವರ್ಗಗಳೊಂದಿಗೆ ಅದು ಮೈತ್ರಿಯೊಂದಿಗಿರುತ್ತದೆ. ಆದ್ದರಿಂದ ಶೇ:ಡಾ 98 ಜನರ ಮಟ್ಟಿಗೆ ಅದು ಪ್ರಜಾಪ್ರಭುತ್ವವೇ. ಆದ್ದರಿಂದ ಇದು ಹಿಟ್ಲರ್, ಮುಸೋಲಿನಿ, ಫ್ರಾಂಕೋರನ್ನು ನೆನಪಿಗೆ ತರುವ ಪ್ರಶ್ನೆ ಇಲ್ಲ.

ಇನ್ನು ಈ ದೇಶಗಳ ಪ್ರಭುತ್ವ ಪ್ರಜಾಸತ್ತಾತ್ಮಕವಾಗಿದೆ ಇತ್ಯಾದಿ ಸಹ ಭ್ರಮೆ. ಈ ಪ್ರಜಾಪ್ರಭುತ್ವ ಚಾರಿತ್ರಿಕ ವಿಕಾಸ ಮತ್ತು ಇದರ ವರ್ಗಸ್ವರೂಪದ ಬಗ್ಗೆ ಕಣ್ಣು ಮುಚ್ಚಿಕೊಂಡವರು ಮಾತ್ರ ಈ ರೀತಿ ತಿಳಿಯಲು ಸಾಧ್ಯ. ಇಟಲಿಯಲ್ಲಿ ಮುಸೊಲಿನಿ ಆಳ್ವಿಕೆಯಲ್ಲಿ, ಸ್ಪೈನ್‌ನಲ್ಲಿ ಫ್ರಾಂಕೋ ಆಳ್ವಿಕೆಯಲ್ಲಿ ಈ ಪ್ರಜಾಸತ್ತಾತ್ಮಕ ಪ್ರಭುತ್ವ ಎಲ್ಲಿತ್ತು?

ಬೂರ್ಜ್ವಾ ಪ್ರಭುತ್ವದ ಚೌಕಟ್ಟಿನೊಳಗೆ ಸಮಾಜವಾದಿ ಉತ್ಪಾದನಾ ಸಂಬಂಧಗಳನ್ನು ತರುವದೂ, ಬೂರ್ಜ್ವಾ ವರ್ಗದ ಆಸ್ತಿ ಹಕ್ಕನ್ನು ಬದಲಾಯಿಸದೆ ರಾಜಕೀಯ, ಆರ್ಥಿಕ ಹಕ್ಕು ಕಿತ್ತುಕೊಳ್ಳದೆ ಸಮಾಜವಾದಿ ಬಳಕೆ ಮತ್ತು ವಿತರಣೆ ಜಾರಿಗೆ ತರುವದು ಶಾಂತಿಯುತವಾಗಿ ಅಥವಾ ಬೇರೆ ಯಾವದೇ ರೀತಿಯಲ್ಲೂ ಸಾಧ್ಯವಿಲ್ಲ.

"ಶಾಂತಿಯುತ" ಬದಲಾವಣೆ, ಚರಿತ್ರೆಯ ಪಾಠಗಳು :

ಬೂರ್ಜ್ವಾ ಪ್ರಭುತ್ವದೊಳಗೆ ಅಧಿಕಾರ ಸ್ಥಾನಗಳನ್ನು ಗೆದ್ದುಕೊಂಡು, ಆ ಪ್ರಭುತ್ವವನ್ನು ಒಳಗಿನಿಂದಲೇ ಬದಲಾಯಿಸುವದೂ ಸಾಧ್ಯವಿಲ್ಲ. ಕೆಲವು ದೇಶಗಳಲ್ಲಿ ಕೆಲವು ಸಂದರ್ಭಗಳಲ್ಲಿ ಬೂರ್ಜ್ವಾ ಪ್ರಭುತ್ವದ ಚೌಕಟ್ಟಿನೊಳಗೆ ಅಧಿಕಾರದ ಸ್ಥಾನಗಳನ್ನು ಶಾಂತಿಯುತವಾಗಿ ಗೆಲ್ಲುವ ಸಂದರ್ಭ ಎಡಪಕ್ಷಗಳಿಗೆ ಬರಬಹುದು. ಆದರೆ ಎಂದೂ ಅದನ್ನು ಶಾಂತಿಯುತವಾಗಿಯೇ ಭದ್ರಪಡಿಸುವುದಾಗಲಿ ಮುಂದುವರಿಸಿಕೊಂಡು ಹೋಗುವದಾಗಲಿ ಸಾಧ್ಯವಿಲ್ಲ. ಸೋತ ಪ್ರತಿಗಾಮಿ ಶಕ್ತಿಗಳನ್ನು ದಮನಮಾಡದೆ, "ಪ್ರಜಾಸತ್ತಾತ್ಮಕ ಹಕ್ಕು"ಗಳನ್ನು ಅವುಗಳಿಗೆ ನೀಡಿದರೆ ಅವು ಹಿಂಸಾತ್ಮಕವಾಗಿ ಪ್ರತಿಕ್ರಾಂತಿ ನಡೆಸುತ್ತವೆ. ಇದಕ್ಕೆ ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ ತಿಳಿಯುತ್ತದೆ. 1936ರ ಸ್ಪ್ಯಾನಿಷ್ ರಿಪಬ್ಲಿಕ್, 1953ರ ಇರಾನಿನ ಸೋಷಲಿಸ್ಟ್ ಸರಕಾರ, 1974ರ ಚಿಲಿಯ ಅಲೆಂಡೆ ಸರಕಾರಗಳು ಶಾಂತಿಯುತ, ಪ್ರಜಾಸತ್ತಾತ್ಮಕ ಚುನಾವಣೆಗಳಿಂದ ಅಧಿಕಾರಕ್ಕೆ ಬಂದರೂ ಸಾಮಾಜಿಕ ಬದಲಾವಣೆಯ ತೀವ್ರ ಕಾರ್ಯಕ್ರಮಗಳನ್ನು ಕೈಕೊಂಡಾಗ ಅವನ್ನು ಪ್ರತಿಗಾಮಿಗಳು ಸಾಮ್ರಾಜ್ಯಶಾಹಿ ಸಹಾಯದಿಂದ ಕಿತ್ತೊಗೆದವು. ಚಿಲಿಯದು ಇತ್ತೀಚಿನ ದಾರುಣ ಉದಾಹರಣೆ. ಈ ಸಂದರ್ಭಗಳಲ್ಲಿ ಈ ದೇಶಗಳ ಪ್ರಭುತ್ವದ ಪ್ರಜಾಸತ್ತಾತ್ಮಕತೆಯಾಗಲಿ, ನ್ಯಾಯಾಂಗದ ನಿಷ್ಪಕ್ಷಪಾತತೆಯಾಗಲಿ ಪ್ರತಿಗಾಮಿ ಶಕ್ತಿಗಳಿಗೆ ರಾಜಕೀಯ ಸಂಘಟನಾ ಅಧಿಕಾರ ಕೊಟ್ಟ ಉದಾರ ಬುದ್ಧಿಯಾಗಲಿ ಸಹಾಯಕ್ಕೆ ಬರಲಿಲ್ಲ. ಯುರೋಪಿನಲ್ಲೂ ದುಡಿಯುವ ವರ್ಗಗಳು ಸಶಸ್ತ್ರವಾಗಿರದಿದ್ದರೆ, ಬರಿಯ ಚುನಾವಣೆಯಲ್ಲಿ ಸೋತ ಕೂಡಲೇ ಅಧಿಕಾರ ಬಿಟ್ಟುಕೊಡುತ್ತವೆ, ಪ್ರತಿಕ್ರಾಂತಿ ಸಂಘಟಿಸುವದಿಲ್ಲ ಅಥವಾ ಹೊರಗಿನ ಅಮೇರಿಕಾ ಮುಂತಾದ ಸಾಮ್ರಾಜ್ಯಶಾಹಿ ಶಕ್ತಿಗಳು ಕೈಕಟ್ಟಿ ಕುಳಿತುಕೊಳ್ಳುತ್ತವೆ ಎಂದುಕೊಳ್ಳುವದು ತೀರಾ ಅವಾಸ್ತವಿಕ ಹಾಗೂ ಮೂರ್ಖತನ.

ಹಾಗೆಯೇ ಬರಿಯ ಸೈದ್ಧಾಂತಿಕ, ರಾಜಕೀಯ ಪ್ರಚಾರದಿಂದ ಪೋಲೀಸ, ಸೈನ್ಯವನ್ನು ನಿಷ್ಕ್ರಿಯ ಮಾಡುವದಾಗಲಿ, ಪ್ರಭುತ್ವ ಗೆದ್ದುಕೊಳ್ಳದೆ ಟಿ.ವಿ, ರೇಡಿಯೋ ಮುಂತಾದ ಸೈದ್ಧಾಂತಿಕ ಸಾಧನಗಳನ್ನು ಗೆದ್ದುಕೊಂಡು ಉಪಯೋಗಿಸುವದೂ ಸಾಧ್ಯವಿಲ್ಲ. ಪೋಲೀಸ, ಸೈನ್ಯಗಳಿಗೆ ಕ್ರಾಂತಿಮಾಡುವ ದೃಢ ನಿರ್ಧಾರ ಹೊಂದಿರುವ ಜನ ಸಮುದಾಯ ಎದುರಾದಾಗ ಮಾತ್ರ ಸೈದ್ಧಾಂತಿಕ ಪ್ರಚಾರದಿಂದ ಅದರ ಒಂದು ಭಾಗವನ್ನು ನಿಷ್ಕ್ರಿಯ ಮಾಡುವದು ಅಥವಾ ಗೆದ್ದುಕೊಳ್ಳುವದು ಸಾಧ್ಯವಾಗುತ್ತದೆ.

ಬರ್ನ್‌ಸ್ಟೀನ್ ವಾದದ ಹೊಸ ರೂಪ :

ಯುರೋ ಕಮ್ಯುನಿಸಂನ ಈ ಹೊಸ ಸಮಾಜವಾದ ತರುವ ತಂತ್ರ (Strategy) ವಿಫಲವಾಗುವದು ನಿಶ್ಚಯ, ಅಷ್ಟೇ ಅಲ್ಲ ಅದು ಅವರು ಹೇಳುವಂತೆ ಹೊಸದೂ ಅಲ್ಲ. 20ನೇ ದಶಕದ ಯುರೋಪಿನ ಜನತಾಂತ್ರಿಕ ಸಮಾಜವಾದದ ಪ್ರವರ್ತಕರಾದ ಬರ್ನ್‌ಸ್ಟೀನ್ ಮತ್ತು ಕೌತ್ಸಕೀಯವರ ವಾದದ ಹೊಸರೂಪ ಅಷ್ಟೇ. 20ರ ದಶಕದಲ್ಲಿ ಶಾಂತಿಯುತವಾದಿ ಸಮಾಜವಾದ ಬರುವ ಸಾಧ್ಯತೆ ಇಟಲಿ, ಜರ್ಮನಿ ಮುಂತಾದ ಸಮಾಜವಾದಿ ಪಕ್ಷ ಬಲವಾಗಿದ್ದ ಕಡೆ ಇದೆ ಎಂಬ ಅವರ ಸಿದ್ಧಾಂತದ ಗತಿ ಏನಾಯ್ತು ಅಂತ ಎಲ್ಲರಿಗೂ ತಿಳಿದಿದೆ.

ಯುರೋ ಕಮ್ಯುನಿಸಂ ತನ್ನ ಈ ಹೊಸ ವಾದದಲ್ಲಿ ವರ್ಗ ಸಂಘರ್ಷ, ಕಾರ್ಮಿಕವರ್ಗದ ಸರ್ವಾಧಿಕಾರ, ಪ್ರಭುತ್ವದ ವರ್ಗಸ್ವರೂಪ ಮುಂತಾದವುಗಳನ್ನು ಪರಿಷ್ಕರಿಸುವ ಮೂಲಕ, ಮಾರ್ಕ್ಸ್‌ವಾದ - ಲೆನಿನ್‌ವಾದದ ತಿರುಳನ್ನು ತಿರಸ್ಕರಿಸಿದೆ ಎಂದು ಬೇರೆ ಹೇಳಬೇಕಾಗಿಲ್ಲ.

ರಷ್ಯಾ ಮತ್ತು ಇತರ ಸಮಾಜವಾದಿ ದೇಶಗಳನ್ನು ಮತ್ತು ಸಾಮ್ರಾಜ್ಯಶಾಹಿ ದೇಶಗಳನ್ನು ಒಂದೇಯಾಗಿ ಪರಿಗಣಿಸುವದು ಸಹ ಸರಿಯಾದ ನೀತಿಯಲ್ಲ. ಯುರೋಪಿನಲ್ಲಿ ಸಮಾಜವಾದಿ ಕ್ರಾಂತಿಗೆ (ಅದು ಯಾವ ವಿಧಾನದಿಂದಲೇ ಆಗಲಿ) ಅಪಾಯ ಇರುವದು ಸಮಾಜವಾದಿ ದೇಶಗಳ ವಾರ್ಸಾ ಒಪ್ಪಂದ ಸೈನ್ಯಗಳಿಂದಲ್ಲ, ಸಾಮ್ರಾಜ್ಯಶಾಹಿ ದೇಶಗಳ ನಾಟೋ ಸೈನ್ಯಗಳಿಂದ ರಷ್ಯಾ ಮತ್ತಿತರ ಸಮಾಜವಾದಿ ದೇಶಗಳ ಕೆಲವು ವಿದೇಶಿ ನೀತಿಗಳನ್ನು ಅಥವಾ ಆಂತರಿಕ ನೀತಿಗಳನ್ನು ಟೀಕಿಸುವದರಲ್ಲಿ ತಪ್ಪೇನಿಲ್ಲವಾದರೂ ಇವು ಸಾಮ್ರಾಜ್ಯಶಾಹಿ ವಿರೋಧಿ ಅಂತರಾಷ್ಟ್ರೀಯ ರಂಗದ ಪ್ರಮುಖ ಭಾಗ ಹಾಗೂ ಅವು ಸಮಾಜವಾದಿ ವ್ಯವಸ್ಥೆಯನ್ನು ಎಲ್ಲೆಡೆ ಬಲಪಡಿಸುವುದು ಸಮಾಜವಾದಿ ಕ್ರಾಂತಿಗೆ, ಹೋರಾಟಕ್ಕೆ ಪೂರಕ ಎಂಬುದನ್ನು ಮರೆಯುವದು. ಯುರೋ ಕಮ್ಯುನಿಸಂ ಈ ತಪ್ಪನ್ನು ಮಾಡುತ್ತಿದೆ.

ಸ್ವಾಗತಾರ್ಹ ಧೋರಣೆಗಳು :

ಇದರ ಅರ್ಥ ಯುರೋ ಕಮ್ಯುನಿಸಂ ಪ್ರತಿನಿಧಿಸುವ ಎಲ್ಲಾ ನಿಲುವುಗಳೂ ಅಥವಾ ಈ ಬೆಳವಣಿಗೆ ಪೂರ್ಣವಾಗಿ ನಕಾರಾತ್ಮಕವಾಗಿವೆ ಎಂದಲ್ಲ. ಇದನ್ನು ಪ್ರತಿಪಾದಿಸುತ್ತಿರುವ ಮೂರು ಪಕ್ಷಗಳೂ ಫ್ಯಾಸಿಸ್ಟ್ ವಿರೋಧಿ ಹೋರಾಟಕ್ಕೆ ವೀರ ನಾಯಕತ್ವಕೊಟ್ಟ ಭವ್ಯವಾದ ಚಾರಿತ್ರಿಕ ಪರಂಪರೆ ಇದೆ. ಎರಡನೆಯ ಮಹಾಯುದ್ಧದ ನಂತರ ಸಹ ಈ ಪಕ್ಷಗಳು ದುಡಿಯುವ ವರ್ಗಗಳ ಹೋರಾಟದಲ್ಲಿ ಅಗ್ರಗಣ್ಯವಾಗಿವೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಎಡ ಚಳುವಳಿಯಲ್ಲಿ ಒಂದು ಥರದ ಸ್ಥಗಿತತೆ ಬಂದಿದೆ. ಬಂಡವಾಳಶಾಹಿ ವ್ಯವಸ್ಥೆ ತೀವ್ರ ಆರ್ಥಿಕ, ಸಾಮಾಜಿಕ, ರಾಜಕೀಯ ಬಿಕ್ಕಟ್ಟು ಎದುರಿಸುತ್ತಿದ್ದರೂ, ದೀರ್ಘ ಚರಿತ್ರೆ ಇರುವ ಪಾರ್ಲಿಮೆಂಟರಿ ಪದ್ಧತಿಯಲ್ಲಿ ದುಡಿಯುವ ವರ್ಗಗಳಿಗೂ ಇನ್ನೂ ಪೂರ್ಣ ನಂಬಿಕೆ ಹೋಗಿಲ್ಲ. ಆದ್ದರಿಂದ ಬಿಕ್ಕಟ್ಟಿನ ಪರಿಣಾಮವಾಗಿ ವರ್ಗಗಳೂ ತೀವ್ರಗಾಮಿಯಾಗುತ್ತಿದ್ದರೂ (Radicalige) ಬೂರ್ಜ್ವಾ ಚೌಕಟ್ಟನ್ನು ಪ್ರಶ್ನಿಸುವ ಹಂತಕ್ಕೆ ಬಂದಿಲ್ಲ. ಯುರೋಪಿನ ಸಾಮಾನ್ಯ ಮಾರುಕಟ್ಟೆಮುಂತಾದವುಗಳ ಮೂಲಕ ದೇಶದೇಶಗಳ ನಡುವಣ ಸಂಬಂಧ ಗಾಢವಾಗಿದ್ದು ಯಾವದೇ ಒಂದು ದೇಶದಲ್ಲಿ ದುಡಿಯುವ ವರ್ಗ ಅಧಿಕಾರ ಕಿತ್ತುಕೊಳ್ಳುವದಾದರೂ ಅಂತರಾಷ್ಟ್ರೀಯ ಸಾಮ್ರಾಜ್ಯಶಾಹಿಯಿಂದ ನಾಟೋ ಮಿಲಿಟರಿ ಕೂಟದ ಹಸ್ತಕ್ಷೇಪ, ಆರ್ಥಿಕ ದಿಗ್ಬಂಧನೆ ಮೂಲಕ ಅದು ಸೋಲುವ ಸಂಭವ ಹೆಚ್ಚು. ಆದ್ದರಿಂದ ಯುರೋಪಿನ ಬೇರೆಬೇರೆ ದೇಶಗಳ ದುಡಿಯುವ ವರ್ಗದ ಚಳುವಳಿಗಳು ಸಹಕರಿಸುವದು, ವಿಚಾರ ವಿನಿಮಯ ಮಾಡುವದು, ಸಾಮಾನ್ಯ ಕಾರ್ಯಕ್ರಮ ಹಾಕಿಕೊಳ್ಳುವದು ಖಂಡಿತ ಸ್ವಾಗತಾರ್ಹ. ಅಲ್ಲದೇ ದೇಶದೊಳಗೆ ಹೊಸ ಸನ್ನಿವೇಶದಲ್ಲಿ ಈಗ ಇರುವ ದುಡಿಯುವ ವರ್ಗಗಳ ಬೆಂಬಲವನ್ನು ಉಳಿಸಿಕೊಂಡು, ಅವನ್ನು ಇನ್ನೂ ಹೆಚ್ಚು ತೀವ್ರಗಾಮಿಯಾಗಿಸುತ್ತ ವರ್ಗ ಆಧಾರವನ್ನು ಇನ್ನೂ ವಿಶಾಲಗೊಳಿಸಲು ಉಳಿದ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೊಂದಿಗೆ ಐಕ್ಯರಂಗ ನಿರ್ಮಿಸುವದು ಸಹ ತೀರಾ ಅಗತ್ಯ. ಸ್ವಾಗತಾರ್ಹ. ರಷ್ಯಾ ಮತ್ತು ಇತರ ಸಮಾಜವಾದಿ ದೇಶಗಳಲ್ಲಿನ ಬೆಳವಣಿಗೆಗಳನ್ನು ಗಮನಿಸುವದು, ತಪ್ಪುಗಳನ್ನು ವಿಶ್ಲೇಷಿಸಿ ತಮ್ಮ ಚಳುವಳಿಯಲ್ಲಿ ಅದನ್ನು ಸರಿಪಡಿಸಲು ಪ್ರಯತ್ನಿಸುವದು ಸಹ ತೀರಾ ಅಗತ್ಯ.

ಈ ಕ್ಲಿಷ್ಟ ಸನ್ನಿವೇಶದಲ್ಲಿ ಈವರೆಗೆ ಅನುಸರಿಸಿದ ತಂತ್ರಗಳನ್ನು ಪುನಃ ವಿಮರ್ಶಿಸುವದು, ಹೊಸ ತಂತ್ರಗಳನ್ನು ಯೋಚಿಸುವದು ಅಗತ್ಯ. ಆದರೆ ಇವೆಲ್ಲವನ್ನು ಮಾಡುವಾಗ ಮಾರ್ಕ್ಸ್‌ವಾದ-ಲೆನಿನ್‌ವಾದದ ಮೂಲಭೂತ ಅಂಶಗಳನ್ನು ಕೈಬಿಡುವಂತಹ ಯಾವ ವಿಶೇಷ ಬೆಳವಣಿಗೆಯೂ ಈ ದೇಶಗಳಲ್ಲಾಗಿಲ್ಲ ಎಂಬುದಷ್ಟೇ ಈ ಮೇಲಿನ ಟೀಕೆಗಳ ಸಾರಾಂಶ.

ಯುರೋ ಕಮ್ಯುನಿಸಂ ಹುಟ್ಟು, ಕೆಲವು ವಿವರಣೆಗಳು :

ಇನ್ನು "ಯುರೋ ಕಮ್ಯುನಿಸಂ" ಈ ವಾದದ ಹುಟ್ಟಿಗೆ ನಿಜವಾದ ಕಾರಣಗಳನ್ನು ಹುಡುಕಲು ಪ್ರಯತ್ನಿಸಬೇಕು.

ಯುರೋಪಿನ ಬಂಡವಾಳಶಾಹಿ ದೇಶಗಳಲ್ಲಿ ಕಮ್ಯುನಿಸ್ಟರ "ಕಾರ್ಮಿಕರ ಅಂತರಾಷ್ಟ್ರೀಯತೆ"ಯ ಪರಿಕಲ್ಪನೆಯನ್ನು ವಿಕೃತಗೊಳಿಸಿ ಇವರು ರಷ್ಯನ್ ಏಜೆಂಟರೆಂದು ಬೂರ್ಜ್ವಾ ಬುದ್ಧಿಜೀವಿಗಳು, ಪತ್ರಿಕೆ, ಪುಸ್ತಕ ಪ್ರಚಾರ ಮಾಧ್ಯಮಗಳು ದೂಷಿಸುತ್ತಿದ್ದವು. "ಕಾರ್ಮಿಕರ ಸರ್ವಾಧಿಕಾರ"ದ ಪರಿಕಲ್ಪನೆಯನ್ನು ವಿಕೃತಗೊಳಿಸಿ ಅಪಪ್ರಚಾರ ಮಾಡುತ್ತಿದ್ದವು. ಸಮಾಜವಾದಿ ದೇಶಗಳಲ್ಲಿ "ಕಾರ್ಮಿಕರ ಸರ್ವಾಧಿಕಾರ"ದ ಕೆಲವು ತಪ್ಪುಗಳನ್ನು ಅದರಲ್ಲೂ ಸ್ಟಾಲಿನ್ ಕಾಲದ ಘಟನೆಗಳನ್ನು ಅತಿರಂಜಿತಗೊಳಿಸಿ, ವಿಕೃತಗೊಳಿಸಿ ಈ ಅಪಪ್ರಚಾರ ಉಪಯೋಗಿಸುತ್ತಿದ್ದವು. ಇದನ್ನು ಉತ್ತರಿಸುವ ಒಂದು ಪ್ರಯತ್ನ ಇದಾಗಿರಬೇಕು.

2ನೇ ಮಹಾಯುದ್ಧಾನಂತರ ಅಭಿವೃದ್ಧಿದೇಶಗಳಬಂಡವಾಳಶಾಹಿವ್ಯವಸ್ಥೆಯಲ್ಲಿ ತೀವ್ರಬದಲಾವಣೆಗಳಾಗಿವೆ. 60ರ ದಶಕದ ವರೆಗಿದ್ದ, ಸಾಕಷ್ಟು ದೀರ್ಘವಾಗಿದ್ದ ಬಿಕ್ಕಟ್ಟಿಲ್ಲದ ಸಮೃದ್ಧಿ (Boom) ಹೇಗೆ ಸಾಧ್ಯವಾಯಿತು

(25ನೇ ಪುಟ ನೋಡಿ)



ಸರ್ದಾರ್ ಭಗತ್‌ಸಿಂಗ್

(5ನೇ ಪುಟದಿಂದ)

ಭಗತ್‌ಸಿಂಗರಿಗೆ ಯಾವದೇ ಧರ್ಮದಲ್ಲಿ ನಂಬಿಕೆ ಇರಲಿಲ್ಲ; ಅವರು ನಾಸ್ತಿಕವಾದಿಯಾಗಿದ್ದರು. ಅವರು ಹುತಾತ್ಮರಾದನಂತರ ಕೆಲವು ಆರ್ಯಸಮಾಜಿಗಳು ಭಗತ್‌ಸಿಂಗರನ್ನು ಆರ್ಯಸಮಾಜಿಯೆಂತಲೂ, ಕೆಲವು ಸಿಕ್ಖರು "ಅವರು ಸಿಕ್ಖರೆಂತಲೂ", ಆರ್. ಎಸ್. ಎಸ್.ನವರು "ಅವರು ಹಿಂದೂ ರಾಷ್ಟ್ರ ಸಿದ್ಧಾಂತದಲ್ಲಿ ನಂಬಿಕೆ ಇಟ್ಟವರೆಂತಲೂ" ಮುಖವಾಡ ತೊಡಿಸಲು ಯತ್ನಿಸಿದರು. ಭಗತ್‌ಸಿಂಗರ ಮಾತಿನಲ್ಲಿ ಹೇಳುವದಾದರೆ "ನಾನೊಬ್ಬ ಮಾನವೀಯ ಭಾವನೆ ಒಳಗೊಂಡಿರುವ ಸಾಮಾನ್ಯ ಮನುಷ್ಯ" ಎಂದು ಹೇಳುತ್ತಿದ್ದರು. ಬ್ರಿಟಿಷ್ ಸಾಮ್ರಾಜ್ಯವಾದಿಗಳಿಗೆ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಸೇವೆಗೈಯುತ್ತಿದ್ದ ಧಾರ್ಮಿಕ ಕೋಮುವಾದಿ ಧುರೀಣರನ್ನು ಭಗತ್‌ಸಿಂಗರು ದ್ವೇಷಿಸುತ್ತಿದ್ದರು. ಕೋಮುಗಲಭೆಗಳಿಂದ ಬ್ರಿಟಿಷ್ ಆಡಳಿತ ಬಲವಾಗಿ ಭಾರತ ಗುಲಾಮಗಿರಿಯಲ್ಲೇ ಇರಬೇಕಾಗಿ ಬರಬಹುದಾದ ಅಪಾಯದ ಬಗ್ಗೆಯೂ ಸಂಪೂರ್ಣ ಅರಿವಿದ್ದವರಾಗಿದ್ದರು. ಭಗತ್‌ಸಿಂಗ್ ಮತ್ತವರ ಸಂಗಾತಿಗಳು "ರಾಷ್ಟ್ರೀಯ ಕ್ರಾಂತಿಕಾರಿ"ಗಳಾಗಿದ್ದು ಯಾವದೇ ರೀತಿಯಿಂದಾದರೂ ಬ್ರಿಟಿಷರನ್ನು ಒದ್ದೋಡಿಸಿ ಭಾರತಕ್ಕೆ ಸ್ವಾತಂತ್ರ್ಯ ಮತ್ತು ಸಮಾಜವಾದವನ್ನು ತರುವ ಪೂರ್ಣ ಅಭಿಲಾಷೆ ಹೊಂದಿದವರಾಗಿದ್ದರು. ಭಾರತದ ಸ್ವಾತಂತ್ರ್ಯದ ಶತ್ರುಗಳಾದ ಬ್ರಿಟಿಷ್ ಸಾಮ್ರಾಜ್ಯವಾದಿಗಳು ಭಗತ್‌ಸಿಂಗ್ ಮತ್ತವರ ಸಂಗಾತಿಗಳನ್ನು ಭಯೋತ್ಪಾದಕರೆಂದೂ, ಅರಾಜಕವಾದಿಗಳೆಂದೂ ಹಣೆಪಟ್ಟಿ ಅಂಟಿಸಿದ್ದರು. ಅಲ್ಲದೇ ಜನತೆಯಲ್ಲೂ ಇದೇ ಭಾವನೆಯನ್ನು ರೂಪಿಸಲು ಯತ್ನಿಸುತ್ತಿತ್ತು. ಭಗತ್‌ಸಿಂಗರು ಅಪ್ರತಿಮ ತ್ಯಾಗದ ಪ್ರತೀಕವಾಗಿದ್ದರು. ತಮ್ಮನ್ನು ಪ್ರಾಮಾಣಿಕವಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಅರ್ಪಿಸಿಕೊಂಡಿದ್ದರು. ದುಡಿಯುವ ಜನತೆಯನ್ನು ಅಪಾರವಾಗಿ ಶೋಷಿಸುತ್ತಿದ್ದ ಬ್ರಿಟಿಷ್ ಸಾಮ್ರಾಜ್ಯವಾದಿಗಳನ್ನು ಹಾಗೂ ಅವರ ಬಾಲಬಡುಕರನ್ನು ತಿರಸ್ಕರಿಸುತ್ತಿದ್ದರು. ತಮ್ಮ ಧ್ಯೇಯಕ್ಕೆ ಯಾವದೇ ತ್ಯಾಗಕ್ಕೂ ಸಿದ್ಧರಾಗಿದ್ದರು. ಬ್ರಿಟಿಷ್ ಗುಲಾಮಗಿರಿಯ ವಿರುದ್ಧ ಯಾವದೇ ರೀತಿಯ ಅಂದರೆ ಹಿಂಸಾತ್ಮಕ, ಅಹಿಂಸಾತ್ಮಕ ಹೋರಾಟಗಳಿಗೆ ಪರವಾಗಿದ್ದರು. ಪಂಜಾಬ್‌ನ ರೈತಕಾರ್ಮಿಕ ವರ್ಗದಲ್ಲಿ ಇನ್ನೂ ಮಾರ್ಕ್ಸ್‌ವಾದೀ ದೃಷ್ಟಿಕೋನದ ಸಂಘಟನೆ ರೂಪುಗೊಂಡಿರಲಿಲ್ಲ. ಬ್ರಿಟಿಷ್ ಆಳ್ವಿಕೆಯನ್ನು ಕೊನೆಗೊಳಿಸಲು ಹೋರಾಟದಲ್ಲಿ ತಮ್ಮತಮ್ಮ ಪ್ರಾಣವನ್ನು ಸಮರ್ಪಿಸಲು ಹಾತೊರೆಯುತ್ತಿದ್ದರು. ಪಂಡಿತ ರಾಮ್‌ಪ್ರಸಾದ ಬಿಸ್ಮಿಲ್‌ರ ಖ್ಯಾತ ಕವನ (ಗಜಲ) ಸರ್‌ಫರೋಶಿ ಕೀ ತಮನ್ನಾ ಅಬ್ ಹಮಾರಾ ದಿಲ್‌ಮೇ ಹೈ" (ನಮ್ಮ ತಲೆಗಳನ್ನು ಅರ್ಪಿಸಲು ನಮ್ಮ ಹೃದಯಗಳು ಕಾತುರವಾಗಿದೆ) ಅವರ ಆದರ್ಶವಾಗಿತ್ತು.

ಕೀರ್ತಿ ಸಂಪಾದಕ ಬಳಗವನ್ನು ಬಿಟ್ಟಮೇಲೆ ಬಿಹಾರ್, ಯು.ಪಿ.ಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ "ಹಿಂದುಸ್ತಾನ್ ರಿಪಬ್ಲಿಕ್ ಸೋಷಲಿಸ್ಟ್ ಆರ್ಮಿ" ಸಂಘಟನೆಯಲ್ಲಿ ತೊಡಗಿಕೊಂಡರು. ಅಪ್ರತಿಮ ಸಾಹಸಿ, ಮಹಾನ್ ಹೋರಾಟಗಾರ ಚಂದ್ರಶೇಖರ ಆಜಾದ್ ಭಗತ್‌ಸಿಂಗರ ಮಿಲನ ಬೆಂಕಿಗಾಳಿ ಒಟ್ಟಿಗೆ ಸೇರಿದಂತಾಯಿತು. ಭಗತ್‌ಸಿಂಗರ ಬೌದ್ಧಿಕ ನಿಲವು ಆ ಸಂಘಟನೆಗೆ ವಿಶಿಷ್ಟ ಮೆರಗನ್ನು ನೀಡಿತು. ಹೆಚ್. ಎಸ್. ಆರ್. ಎ. ಉತ್ತರ ಭಾರತದ ಹಳ್ಳಿ ಪಟ್ಟಣಗಳಿಗೆ ವ್ಯಾಪಿಸಲು ತುಂಬಾ ಶ್ರಮಪಟ್ಟರು.

1928–29ರ ಅವಧಿಯಲ್ಲಿ ಭಾರತದ ಯುವಕರಲ್ಲಿ ಹೊಸ ಜಾಗೃತಿ ಉಂಟಾಗಿತ್ತು. ಹೆಚ್ಚುಹೆಚ್ಚು ವಿದ್ಯಾರ್ಥಿ ಸಂಘಟನೆಗಳು ಪ್ರಾರಂಭಿಸಲ್ಪಟ್ಟವು. ಪಂಜಾಬ್‌ನ ನೌಜವಾನ ಭಾರತ ಸಭಾದ ಚಟುವಟಿಕೆ ವಿಸ್ತೃತಗೊಂಡಿದ್ದು ಇದಕ್ಕೆ ನಿದರ್ಶನವಾಗಿತ್ತು. ರಶಿಯನ್ ಸಮಾಜವಾದೀ ಕ್ರಾಂತಿ, ಅದರ ನೇತಾರ ಕಾಂ. ಲೆನಿನ್‌ರ ಪ್ರಭಾವ ಯುವಕರಲ್ಲಿ ಮೂಡಿತ್ತು. ಬುದ್ಧಿಜೀವಿ ಯುವಕರಿಗೆ ಲೆನಿನ್‌ರ ಹೆಸರು ಸ್ಫೂರ್ತಿದಾಯಕವಾಗಿತ್ತು. ಕಾಂಗ್ರೆಸ್ ಸಾಮೂಹಿಕ ಚಳುವಳಿಯಿಂದ ದೂರಸರಿದಿದ್ದು ಗಾಂಧೀಯವರು ಕೆಲವು ರಚನಾತ್ಮಕ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. (ಗಾಂಧಿ ಮತ್ತು ಅವರ ಆಪ್ತ ಅನುಯಾಯಿಗಳಿಗೆ ಮಾತ್ರ ನೇಮಿತವಾಗಿದ್ದ 1930 "ಉಪ್ಪಿನ ಸತ್ಯಾಗ್ರಹ" ಇದಕ್ಕೆ ನಿದರ್ಶನ) ಪಂಜಾಬ್‌ನಲ್ಲಿ ನೌಜವಾನ ಭಾರತಸಭಾ ಮಾತ್ರ ಧೈರ್ಯದಿಂದ ಬಹಿರಂಗವಾಗಿ ಕಾರ್ಯನಿರ್ವಹಿಸುತ್ತಿತ್ತು. ಕಮ್ಯುನಿಸ್ಟ್ ಗುಂಪುಗಳು ರೈತ ಕಾರ್ಮಿಕ ಪಕ್ಷದ ಮೂಲಕ, ಟ್ರೇಡ್ ಯೂನಿಯನ್‌ಗಳ ಮೂಲಕ ರಾಜಕೀಯ ಚಟುವಟಿಕೆಗಳನ್ನು ನಿರ್ವಹಿಸುತ್ತಿತ್ತು. ಯು.ಪಿ. ಬಿಹಾರ್ ಮತ್ತು ಬಂಗಾಳದಲ್ಲಿರುವ ಕ್ರಾಂತಿಕಾರಿಗಳು ದೇಶದಲ್ಲಿರುವ ರಾಜಕೀಯ ನಿಶ್ಶಬ್ದತೆಯನ್ನು ಭೇದಿಸಲು ಹವಣಿಸುತ್ತಿದ್ದರು.

1928ರಲ್ಲಿ ಭಾರತದ ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆ ಸೂಚಿಸಲು ಬ್ರಿಟಿಷ್ ಸರಕಾರ ಸೈಮನ್ ಕಮೀಷನ್‌ನ್ನು ನಿಯಮಿಸಿತು. ಕೇವಲ ಬ್ರಿಟಿಷ್ ಪ್ರತಿನಿಧಿಗಳನ್ನು ಹೊಂದಿದ್ದ ಈ ನಿಯೋಗವನ್ನು ದೇಶದ ಪ್ರಮುಖ ರಾಜಕೀಯ ಪಕ್ಷಗಳು ತಿರಸ್ಕರಿಸಿದವು, ದೇಶದಲ್ಲಿ ಹೊಸ ಜಾಗೃತಿ ಉಂಟಾಯಿತು. ಆಯೋಗ ಭೇಟಿ ನೀಡಿದ ಪ್ರತಿ ನಗರಗಳಲ್ಲೂ ಹರತಾಳ, ವಿರೋಧಿ ಪ್ರದರ್ಶನಗಳು ಸಂಘಟಿಸಲ್ಪಟ್ಟವು. ದೇಶಾದ್ಯಂತ "ಸೈಮನ್ ವಾಪಸ್ ಹೋಗಿ" (Simon Go Back) ಘೋಷಣೆ ಧ್ವನಿಸತೊಡಗಿತು. 1928 ಅಕ್ಟೋಬರ್ 30 ರಂದು ಸೈಮನ್ ನಿಯೋಗ ಲಾಹೋರಕ್ಕೆ ಆಗಮಿಸಿತು. ಎಲ್ಲ ಪಕ್ಷಗಳ ಜಂಟಿಸಭೆ ನಡೆದು ಸೈಮನ್‌ನಿಯೋಗವನ್ನು ಬಹಿಷ್ಕರಿಸಲು ನಿರ್ಧರಿಸಿದವು.

ಹಿಂದಿನ ದಿನ ಅಂದರೆ ಅಕ್ಟೋಬರ್ 29ರಂದು ಲಾಹೋರ್‌ನ ಸೀನಿಯರ್ ಸುಪರಿಂಟೆಂಡೆಂಟ್ ಆಫ್ ಪೋಲೀಸ್ (SSP) ಜನ ಗುಂಪು ಸೇರುವುದನ್ನೂ, ಮೆರವಣಿಗೆ ಹೊರಡಿಸುವುದನ್ನೂ ನಿಷೇಧಿಸಿದ ತಕ್ಷಣ ಅದೇ ದಿನ ಸಭೆ ನಡೆದು ಈ ಆಜ್ಞೆಯನ್ನು ಧಿಕ್ಕರಿಸಲು ತೀರ್ಮಾನಿಸಲಾಯಿತು. ಅಕ್ಟೋಬರ್ 30ರಂದು ಸಹಸ್ರಾರು ಜನರ ಮೆರವಣಿಗೆ ಹೊರಡಿಸಲ್ಪಟ್ಟಿತು. ಮೆರವಣಿಗೆಯ ನೇತೃತ್ವವನ್ನು ಪಂಜಾಬ್‌ನ ಪ್ರಸಿದ್ಧ ಜನನಾಯಕ ಲಾಲಾ ಲಜಪತ್ ರಾಯ್‌ರು ವಹಿಸಿದ್ದರು. ಕಪ್ಪು ಬಾವುಟಗಳನ್ನು ಹೊತ್ತು "ಸೈಮನ್ ಹಿಂತಿರುಗಿ," "ನಮಗೆ ಪೂರ್ಣ ಸ್ವಾತಂತ್ರ್ಯ ಬೇಕು" ಇತ್ಯಾದಿ ಘೋಷಣೆಗಳನ್ನು ಪ್ರಚಂಡವಾಗಿ ಮೊಳಗಿಸುತ್ತ ಮೆರವಣಿಗೆ ಶಾಂತಯುತವಾಗಿ ಸಾಗಿತ್ತು. ಈ ಶಾಂತಿಯುತ ಮೆರವಣಿಗೆಯನ್ನು ಪೋಲೀಸರು ಪ್ರಚೋದಿಸಿ ಬರ್ಬರ ಲಾಠೀ ಪ್ರಹಾರವನ್ನು ಪ್ರಾರಂಭಿಸಿದರು. ಮೆರವಣಿಗೆಯ ಮುಂಚೂಣಿಯಲ್ಲಿದ್ದ ಲಾಲಾಜಿ ಮತ್ತಿತರರಿಗೆ ಲಾಠೀ ಹೊಡೆತಗಳು ಬಿದ್ದು ಗಂಭೀರಗಾಯಗಳಾದವು. ಲಾಲಾಜಿ ಧರೆಗೆ ಒರಗುವ ಮೊದಲ "ಮೈ ಏಕ್‌ಏಕ್ ಲಾಠೀಕೋ ಬದ್‌ಲಾಲೂಂಗಾ" (ನಾನು ಒಂದೊಂದು ಲಾಠೀ ಪೆಟ್ಟನ್ನು ಹಿಂದಿರುಗಿಸುತ್ತೇನೆ) ಎಂದು ಘರ್ಜಿಸುತ್ತಿದ್ದರು. ಈ ಏಟುಗಳ ಪರಿಣಾಮವಾಗಿ ಜರ್ಜರಿತರಾಗಿ ಲಾಲಾಜಿಯವರು ನವೆಂಬರ 17 ರಂದು ಮರಣಹೊಂದಿದರು. ಈ ಘಟನೆಯಿಂದ ಇಡೀ ದೇಶ ದಿಗ್ಭ್ರಾಂತವಾಯಿತು. 29 ನವೆಂಬರದಂದು ದೇಶಾದ್ಯಂತ "ಲಾಲಾ ಲಜಪತ್ ರಾಯರ ಸ್ಮರಣ ದಿನವನ್ನು ಆಚರಿಸಲಾಯಿತು. ಈ ಘಟನೆ ಕ್ರಾಂತಿಕಾರಿಗಳ ಹೃದಯದಲ್ಲಿ ಕಿಚ್ಚೆಬ್ಬಿಸಿತು. ಲಾಲಾಜಿ ಕೊನೆಯುಸಿರೆಳೆಯುವ ಮುನ್ನ ಉದ್ಗರಿಸಿದ ಕೊನೆಯ ಮಾತುಗಳನ್ನು ನಿಜಮಾಡಲು ಕಂಕಣಬದ್ಧರಾದರು.

ಲಾಹೋರ್‌ನಲ್ಲಿ ಹೆಚ್. ಎಸ್. ಆರ್. ಎ.ನ ಕೇಂದ್ರಸಮಿತಿ 1928 ಡಿಸೆಂಬರ್ 10ರಂದು ಸಭೆಸೇರಿ ಲಾಲಾಜಿ ಸಾವಿಗೆ ಕಾರಣನಾದ ಎಸ್. ಎಸ್. ಪಿ. ಸ್ಕಾಟ್‌ನನ್ನು ಮುಗಿಸಿಬಿಡಲು ತೀರ್ಮಾನಿಸಿದರು. ಇದಕ್ಕಾಗಿ ಸುವ್ಯವಸ್ಥಿತ ಯೋಜನೆಯೊಂದನ್ನು ರೂಪಿಸಲಾಯಿತು. ಡಿಸೆಂಬರ್ 17ರಂದು ಮಧ್ಯಾಹ್ನ ಲಾಹೋರ ಡಿ. ಎ. ವಿ. ಕಾಲೇಜ ಬಳಿ ಇದ್ದ ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್‌ರ ಆಫೀಸಿನಿಂದ ಎ.ಎಸ್.ಪಿ. ಸ್ಯಾಂಡರ್ಸ್ ಹೊರಬಂದನು. ಆತನೇ ಸ್ಕಾಟ್ ಎಂಬ ಗ್ರಹಿಕೆಯಿಂದ ರಾಜಗುರು ಮುನ್ನುಗ್ಗಿ ಸ್ಯಾಂಡರ್ಸ್‌ನ ತಲೆಗೆ ಗುಂಡಿಟ್ಟರು. ಸ್ಯಾಂಡರ್ಸ್ ನೆಲಕ್ಕೆ ಬಿದ್ದ. ಭಗತ್‌ಸಿಂಗ್ ಕೂಡಲೇ ಓಡಿಬಂದು ಅವನಿಗೆ ಐದಾರು ಗುಂಡಿಟ್ಟು ಅಲ್ಲಿಂದ ಪಾರಾದರು. ಲಾಹೋರ್ ಜನತೆ ಕ್ರಾಂತಿಕಾರಿಗಳ ಈ ಕ್ರಮದಿಂದ ಉತ್ಸಾಹಿತರಾದರು. ಇಡೀ ದೇಶದಲ್ಲಿ ತಮ್ಮ ಈ ಕಾರ್ಯ ಹೊಸ ಜಾಗೃತಿ ಮೂಡಿಸುವದೆಂದು ಸರ್ದಾರ್ ಭಗತ್‌ಸಿಂಗ್ ಮತ್ತವರ ಸಂಗಾತಿಗಳು ಭಾವಿಸಿದರು. ಸ್ಯಾಂಡರ್ಸ್ ಕೊಲೆಯ ನಂತರ ಪೋಲೀಸರು ತೀವ್ರವಾಗಿ ಕ್ರಾಂತಿಕಾರಿಗಳ ಬೇಟೆಗೆ ಆರಂಭಿಸಿದರು. ಆದರೆ ಯಾರೂ ಪತ್ತೆಯಾಗಲಿಲ್ಲ. ಲಾಹೋರ್ ಗೋಡೆಗಳ ಮೇಲೆ ಹೆಚ್. ಎಸ್. ಆರ್. ಎ. ಧ್ಯೇಯ ಧೋರಣೆಗಳನ್ನೊಳಗೊಂಡ ಕೆಂಪು ಕರಪತ್ರಗಳು ಕಾಣಿಸಲಾರಂಭಿಸಿದವು.

ದೇಶದಲ್ಲಿ ಹೊಸ ಬೆಳವಣಿಗೆಗಳು ಕಂಡುಬಂದವು. ಕಲಕತ್ತೆಯಲ್ಲಿ 1928 ಡಿಸೆಂಬರದಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನ ಕೆಲವು ಪುರೋಗಾಮಿ ಕಾರ್ಯಕ್ರಮಗಳನ್ನು ರೂಪಿಸಿತು ದೇಶಾದ್ಯಂತ ಯುವಕರು ಹೊಸ ಹುರುಪಿನಿಂದ ಚಟುವಟಿಕೆಯಲ್ಲಿ ತೊಡಗಿದರು. ಬಾಂಬೈಯಲ್ಲಿ ಇದೇ ಸಮಯದಲ್ಲಿ 1 ಲಕ್ಷ 50 ಸಾವಿರ ಟೆಕ್ಸ್‌ಟೈಲ್ ಕಾರ್ಮಿಕರ ಪ್ರಚಂಡ ಮುಷ್ಕರ ಸಂಘಟಿಸಲ್ಪಟ್ಟಿತು. ಹೆಚ್. ಎಸ್. ಆರ್. ಎ.ನ ಕ್ರಾಂತಿಕಾರಿಗಳು ಶಸ್ತ್ರಾಸ್ತ್ರ ಸಂಗ್ರಹಿಸುವ ಹೊಸ ಯುವಕರನ್ನು ಸಂಘಟನೆಗೆ ಭರ್ತಿಮಾಡುವ ಇತ್ಯಾದಿ ಪಕ್ಷವನ್ನು ಬಲಪಡಿಸುವ ಕಾರ್ಯದಲ್ಲಿ ತೊಡಗಿದರು. ಬಾಂಬ್‌ಗಳನ್ನು ತಯಾರಿಸುವದನ್ನು ಕಲಿಸಲು ಕಲಕತ್ತೆಯಿಂದ ಜತೀನ್‌ದಾಸರನ್ನು ಕರೆಯಿಸಲಾಯಿತು. 1929 ಏಪ್ರಿಲ್‌ನಲ್ಲಿ ದೇಶಾದ್ಯಂತ ಕಮ್ಯುನಿಸ್ಟರು ಮತ್ತು ಟ್ರೇಡ್‌ಯೂನಿಯನ್ ಧುರೀಣರು (ಮೀರತ್ ಮೊಕದ್ದಮೆ)ಗಳನ್ನು ಬಂಧಿಸಲಾಯಿತು. ಸರಕಾರದ ಈ ಕ್ರಮವನ್ನು ಪ್ರತಿಭಟಿಸಿ ಅನೇಕ ಸ್ಥಳಗಳಲ್ಲಿ ಮತಪ್ರದರ್ಶನಗಳು ನಡೆದವು.

ಕಮ್ಯುನಿಸ್ಟ್‌ರ ಈ ಬಂಧನ ಸಹಜವಾಗಿ ಕ್ರಾಂತಿಕಾರಿಗಳನ್ನು ಕೆರಳಿಸಿತು. ಕ್ರಾಂತಿಕಾರಿಗಳಲ್ಲಿ ತಮ್ಮ ಹೋರಾಟ, ದಾಳಿಗಳ ನೈಜ ಉದ್ದೇಶವನ್ನು ಜನತೆಗೆ ಪ್ರಚುರಪಡಿಸಬೇಕೆಮ್ಬುವ ಅಭಿಪ್ರಾಯ ಬಲವಾಗತೊಡಗಿತು. ಬಾಂಬ್‌ದಾಳಿ ಕೊಲೆ ಇತ್ಯಾದಿಗಳು ಭಾರತದ ಸ್ವಾತಂತ್ರ್ಯಕ್ಕಾಗಿ, ಪ್ರಸಕ್ತ ಸಮಾಜ ವ್ಯವಸ್ಥೆ ಬದಲಾಯಿಸಲು ತಾವು ನಿರೂಪಿಸಿರುವ ಯೋಜನೆಯ ಅಂಗಗಳು ಎಂದು ಪ್ರಚುರಪಡಿಸುವ ಯೋಚನೆ ಮಾಡಲಾಯಿತು. ಏಕೆಂದರೆ ಬ್ರಿಟಿಷ್ ಸರಕಾರ ಕ್ರಾಂತಿಕಾರಿಗಳ ಬಗ್ಗೆ ಅತೀ ಕುತ್ಸಿತ ಪ್ರಚಾರದಲ್ಲಿ ತೊಡಗಿತ್ತು. ಈ ವಿಚಾರವನ್ನು ಹೆಚ್. ಎಸ್. ಆರ್. ಎ. ನ ಕೇಂದ್ರಸಮಿತಿ ಸಭೆಸೇರಿ ದೆಹಲಿಯಲ್ಲಿ ನಡೆಯುತ್ತಿರುವ ಕೇಂದ್ರ ವಿಧಾನ ಸಭೆಯ ಮೇಲೆ ಬಾಂಬೆಸೆಯಲು ತೀರ್ಮಾನಿಸಿತು.

ಏಪ್ರಿಲ್ 8, 1929ರಂದು ಭಗತ್‌ಸಿಂಗ್ ಮತ್ತು ಬಟುಕೇಶ್ವರ ದತ್ತರು ಕೂಡಿ ಕೇಂದ್ರ ವಿಧಾನಸಭೆ ನಡೆಯುತ್ತಿರುವ ಸ್ಥಳದಲ್ಲಿ ಬಾಂಬನ್ನೆಸೆದರು. 1929 ಜೂನ್ 6ರಂದು ಅವರಿಬ್ಬರೂ ಕೂಡಿ ದೆಹಲಿ ಹೈಕೋರ್ಟಿನಲ್ಲಿ ಚರಿತ್ರಾರ್ಹ ಹೇಳಿಕೆ ನೀಡಿದರು. "ಈ ದಾಳಿಯು ಯಾವುದೇ ಒಬ್ಬ ವ್ಯಕ್ತಿಯ ಮೇಲೆ ಮಾಡಿದುದಲ್ಲ. ಒಂದು ಸಂಸ್ಥೆಯ ಮೇಲೆ ಮಾಡಿದುದು. ಕೇಂದ್ರ ವಿಧಾನಸಭೆಯು ನಿಷ್ಪ್ರಯೋಜಕ ಮಾತ್ರವಲ್ಲ, ಅಪಾರವಾಗಿ ಕೇಡು ಮಾಡಬಲ್ಲ ಅಧಿಕಾರ ಪಡೆದಿದೆ. ಈ ಕಾರಣದಿಂದ ನಾವು ಅದನ್ನು ವಿರೋಧಿಸುತ್ತೇವೆ. ಜಗತ್ತಿಗೆ ಭಾರತದ ತೇಜೋವಧೆ ಹಾಗೂ ಅಸಹಾಯಕತೆಯನ್ನು ಎತ್ತಿ ತೋರಿಸುವ ಸಲುವಾಗಿ ಮಾತ್ರ ಅದು ಅಸ್ತಿತ್ವದಲ್ಲಿದೆ. ಬೇಜವಾಬ್ದಾರಿ ನಿರಂಕುಶ ಪ್ರಭುತ್ವದ ಪ್ರತೀಕ ಅದು".

"ರಾಷ್ಟ್ರೀಯ ಆಕಾಂಕ್ಷೆಗಳು ಮೇಲಿಂದ ಮೇಲೆ ಕಸದ ಬುಟ್ಟಿಗೆ ತೂರಲ್ಪಟ್ಟಿವೆ. ಸಭೆಯು ಮಾನ್ಯ ಮಾಡಿದ ಗಂಭೀರವಾದ ನಿರ್ಣಯಗಳು ಭಾರತದ ಪಾರ್ಲಿಮೆಂಟ್ ಎಂದು ಕರೆಯಲ್ಪಡುವ ಈ ಸದನದಲ್ಲಿ ಕಾಲುಕಸವಾಗಿದೆ. ಚುನಾಯಿತ ಸದಸ್ಯರು ತಿರಸ್ಕರಿಸಿದ ಸಲಹೆಗಳು ಮೇಲಧಿಕಾರಿಗಳ ರುಜುಮಾತ್ರದಿಂದ ಕಾನೂನುಗಳಾಗಿವೆ. ಈ ಸಂಸ್ಥೆ ಮೇಲೆ ಥಳುಕಾದ ಟೊಳ್ಳು ಪ್ರದರ್ಶನ".

"ಕಿವುಡನಿಗೆ ಕೇಳಿಸಲೆಂದು, ಲಕ್ಷಿಸದವರಿಗೆ ಸಮಯದಲ್ಲಿ ಒಂದು ಎಚ್ಚರಿಕೆಯಾಗಲೆಂದು ಉದ್ದೇಶಿಸಿ ನಾವು ಬಾಂಬುಗಳನ್ನೆಸೆದೆವು. ಜೀವಹತ್ಯೆ ಮಾಡುವದೋ ಇಲ್ಲವೇ ಆಸ್ತಿಪಾಸ್ತಿಗಳಿಗೆ ಹಾನಿಮಾಡುವದೋ ನಮ್ಮ ಉದ್ದೇಶವಾಗಿದ್ದರೆ ನಾವು ಈಗ ಬಳಸಿದ ಬಾಂಬುಗಳಿಗಿಂತ ಪ್ರಭಲವಾದುವುಗಳನ್ನು ಬಳಸುತ್ತಿದ್ದೆವು. ಹೆಚ್ಚು ಜನ ಕೂಡಿ ಕುಳಿತಿದ್ದ ಜಾಗಕ್ಕೆ ಗುರಿಯಿಡಬಹುದಾಗಿತ್ತು. ಅಥವಾ ನಮ್ಮ ಗುರಿಗೆ ಸಿಲುಕುವಷ್ಟೇ ದೂರದಲ್ಲಿದ್ದ ಸೈಮನ್ ಅವರತ್ತ ಎಸೆಯಬಹುದಾಗಿತ್ತು."

"ಹಾನಿಮಾಡಲು ಬಲವನ್ನು ಬಳಸಿದರೆ ಮಾತ್ರ ಅದು ಹಿಂಸೆಯಾಗುತ್ತದೆ; ಅನೀತಿಯಾಗುತ್ತದೆ. ನ್ಯಾಯವಾದ ಉದ್ದೇಶಕ್ಕಾಗಿ ಬಲವನ್ನು ಉಪಯೋಗಿಸಿದರೆ ಅದಕ್ಕೆ ನೀತಿಯ ಬೆಂಬಲವಿದೆ ಗುರುಗೋವಿಂದ ಸಿಂಗ್, ಶಿವಾಜಿ, ಕಮಾಲ್‌ಪಾಷಾ, ರೇಜಾಖಾನ್, ವಾಷಿಂಗಟನ್, ಗ್ಯಾರಿಬಾಲ್ಡಿ ಮತ್ತು ಲೆನಿನ್ ಈ ಮಹಾಪುರುಷರಿಗೆ ಸ್ಫೂರ್ತಿ ನೀಡಿದ ಮಹೋನ್ನತ ಆದರ್ಶಗಳೇ ನಮಗೂ ಮೇಲ್ಪಂಕ್ತಿಗಳು.

"ನಾವೇ ನಾವಾಗಿ, ನಾವು ಮಾಡಿದ ಕಾರ್ಯಕ್ಕೆ ವಿಧಿಸಲ್ಪಡುವ ಶಿಕ್ಷೆಗೆ ಒಪ್ಪಿಕೊಂಡಿದ್ದೇವೆ. ಭಾವನೆಗಳನ್ನು ಕೊಲ್ಲಲು ಸಾಧ್ಯವಿಲ್ಲವೆಂಬುದನ್ನು ಸಾಮ್ರಾಜ್ಯಶಾಹಿ ಶೋಷಕರು ಅರಿತುಕೊಳ್ಳಲಿ. ಎರಡು ಸಾಮಾನ್ಯ ಜೀವಗಳನ್ನು ಹೊಸಕಿ ಹಾಕುವದರಿಂದ ರಾಷ್ಟ್ರವನ್ನು ಹೊಸಕಿ ಹಾಕುವದು ಸಾಧ್ಯವಿಲ್ಲ".

"ಸಮಾಜವಾದದ ಆಧಾರದ ಮೇಲೆ ಸಮಾಜವು ಪುನರ್ರೂಪುಗೊಳ್ಳಬೇಕು. ಅದುವರೆಗೆ ಮನುಷ್ಯನಿಂದ ಮನುಷ್ಯನ, ದೇಶದಿಂದ ದೇಶದ

(25ನೇ ಪುಟ ನೋಡಿ)

ಸರ್ದಾರ್ ಭಗತ್‌ಸಿಂಗ್

(24ನೇ ಪುಟದಿಂದ)

ಶೋಷಣೆ ಕೊನೆಗೊಳ್ಳುವದಿಲ್ಲ: ಮಾನವಕೋಟಿಯು ಅನುಭವಿಸುತ್ತಿರುವ ದಾರುಣ ಕಷ್ಟಗಳು ಕೊನೆಗೊಳ್ಳುವದಿಲ್ಲ....

ಜೂನ್ 12 ರಂದು ವಿಚಾರಣೆ ನಡೆದು ಭಗತ್‌ಸಿಂಗ್ ಮತ್ತು ದತ್‌ರಿಗೆ ನ್ಯಾಯಾಧೀಶರು ಜೀವಾವಧಿ ಕಾರಾಗೃಹವಾಸದ ಶಿಕ್ಷೆಯನ್ನು ವಿಧಿಸಿದರು. ಸ್ಯಾಂಡರ್ಸ್ ಹತ್ಯೆಯ ಪ್ರಕರಣದಲ್ಲಿ ಪೋಲೀಸ್ ತನಿಖೆ ನಡೆದೇ ಇತ್ತು. 1929 ಏಪ್ರಿಲ್ ತಿಂಗಳಲ್ಲಿ ಪೋಲೀಸರಿಗೆ ಸಿಕ್ಕಿದ ಸಣ್ಣ ಸುಳಿವು ಅನೇಕ ಕ್ರಾಂತಿಕಾರಿಗಳ ಬಂಧನಕ್ಕೆ ಕಾರಣವಾಯಿತು. ಲಾಹೋರ್‌ನಲ್ಲಿ ಬಾಂಬ್ ಫ್ಯಾಕ್ಟರಿ ನಡೆಸುತ್ತಿದ್ದ ಸ್ಥಳದಲ್ಲಿ ಸುಖದೇವ್, ಕಿಶೋರಿಲಾಲ್ ಇನ್ನಿತರರು ಬಂಧಿತರಾದರು. ಅದೇ ದಿನ ಬಿಲಾಸ್‌ಪುರ ರೇಲ್ವೆ ನಿಲ್ದಾಣದಲ್ಲಿ ಮೇ 15ರಂದು ಸಹರನ್‌ಪುರದಲ್ಲಿ ಹೀಗೆ ಸುಮಾರು 20 ಜನ ಕ್ರಾಂತಿಕಾರಿಗಳು ಬಂಧಿತರಾದರು. ಅವರಲ್ಲಿ ಹಂಸರಾಜ ಮೋಹ್ರಾ, ಹಾಗೂ ಮತ್ತಿಬ್ಬರು HSRAನ ಕೇಂದ್ರ ಸಮಿತಿ ಸದಸ್ಯರು, ಸರಕಾರಿ ಸಾಕ್ಷಿಗಳಾಗಿ ಪರಿವರ್ತಿತರಾದರು. HSRAನ ಪ್ರಧಾನ ದಂಡನಾಯಕ ಚಂದ್ರಶೇಖರ ಅಜಾದ್ ಮಾತ್ರ ಕೊನೆಯವರೆಗೂ ಬಂಧಿತರಾಗಲಿಲ್ಲ. (ಕ್ರಾಂತಿಕಾರಿ ಸಹೋದ್ಯೋಗಿಯೊಬ್ಬನ ವಿಶ್ವಾಸದ್ರೋಹದಿಂದ ಪೋಲೀಸರಿಗೆ ಸುಳಿವುದೊರೆತು ಅಲಹಾಬಾದ್ ಅಲ್ಫ್ರೆಡ್ ಪಾರ್ಕ್‌ನಲ್ಲಿ ಪೋಲೀಸರೊಂದಿಗೆ ನಡೆದ ವೀರೋಚಿತ ಹೋರಾಟದಲ್ಲಿ ಮೃತರಾದರು.) ಅದುವರೆಗೆ ಬಂಧಿತರಾಗದ ರಾಜಗುರು ಮತ್ತು ಬಿಜಯ್ ಸಿನ್ಹಾ ಮುಂದೆ ಬಂಧಿತರಾದರು, ಭಗತ್‌ಸಿಂಗ್, ರಾಜಗುರು, ಸುಖದೇವ್, ಬಟುಕೇಶ್ವರದತ್ತ, ಜತೀಂದ್ರನಾಥದಾಸ, ಅಜಯಘೋಷ ಮತ್ತಿತರ 13 ಜನರು ಈ ಮೊಕದ್ದಮೆಯಲ್ಲಿ ಬಂಧಿತರಾದರು, ಮೊಕದ್ದಮೆ "ಲಾಹೋರ್ ಮೊಕದ್ದಮೆ" ಎಂದು ಇತಿಹಾಸಪ್ರಸಿದ್ಧವಾಗಿದೆ. ಈ ಬಂಧಿತರಾದ ಕ್ರಾಂತಿಕಾರಿಗಳ ಮೇಲೆ ಹೊರಿಸಿದ ಅಪಾದನೆಗಳಲ್ಲಿ ಪ್ರಮುಖವಾದವುಗಳೆಂದರೆ (1) ಸ್ಯಾಂಡರ್ಸ್ ಹತ್ಯೆ. (2) ಕೇಂದ್ರ ವಿಧಾನಸಭೆಯ ಮೇಲೆ ಬಾಂಬ್‌ದಾಳಿ (3) ಕಲಕತ್ತೆ ಲಾಹೋರ್, ಸಹರಾನ್‌ಪುರ, ಬಿಲಾಸ್‌ಪುರಗಳಲ್ಲಿ ಬಾಂಬುಗಳ ತಯಾರಿಕೆ (4) ಕಾಕೋರಿ ಮೊಕದ್ದಮೆಯಲ್ಲಿ ಬಂಧಿತರಾದ ಆರೋಪಿಗಳನ್ನು ಬಿಡಿಸಲು ಯತ್ನಿ[illegible]. ಜುಲೈ 1929ರಲ್ಲಿ ವಿಚಾರಣೆ ಶುರುವಾಯಿತು. ಈ ಮೊದಲೇ ಜೀವಾವಧಿ ಶಿಕ್ಷೆಗೊಳಗಾಗಿದ್ದ ಭಗತ್‌ಸಿಂಗ ಮತ್ತು ಬಟುಕೇಶ್ವರ ದತ್ತರನ್ನೂ ಈ ಲಾಹೋರ್ ಮೊಕದ್ದಮೆಯಲ್ಲಿ ಆರೋಪಿಗಳನ್ನಾಗಿ ಮಾಡಿದರು.

1929ರ ಜುಲೈ 10ರಂದು ಆರಂಭವಾದ ಮೊಕದ್ದಮೆ 1930 ಅಕ್ಟೋಬರ್ 7ರಂದು ಮುಗಿಯಿತು. ಭಗತ್‌ಸಿಂಗ, ರಾಜಗುರು ಮತ್ತು ಸುಖದೇವರಿಗೆ ಮರಣದಂಡನೆ. ಕಿಶೋರಿ ಲಾಲ್, ಜೈದೇವ್, ಡಾ|| ದಯಾಪ್ರಸಾದ ಇತರ ಇಬ್ಬರು ಒಟ್ಟು ಐದು ಜನರಿಗೆ ಜೀವಾವಧಿ ಶಿಕ್ಷೆ. ಒಬ್ಬರಿಗೆ 7 ವರ್ಷ, ಮತ್ತೊಬ್ಬರಿಗೆ 3ವರ್ಷ ಈ ರೀತಿ ಶಿಕ್ಷೆಗಳು ವಿಧಿಸಲ್ಪಟ್ಟವು. ಸಾಕ್ಷಿಗಳ ಅಭಾವ ಮತ್ತು ಭಗತ್‌ಸಿಂಗರ ಹೇಳಿಕೆ ಕಾರಣ ಒಂದಿಬ್ಬರು ಬಿಡುಗಡೆಯಾದರು.

ಲಾಹೋರ್ ಸೆರೆಮನೆಗೆ ತಳ್ಳಲ್ಪಟ್ಟ ಭಗತ್‌ಸಿಂಗ್ ಮತ್ತವರ ಸಂಗಾತಿಗಳಿಗೆ ಅಪಾರ ಚಿತ್ರಹಿಂಸೆ ಕೊಡಲಾಯಿತು. ಖೂನಿ, ದರೋಡೆ ಮಾಡಿದ ಕೈದಿಗಳೊಂದಿಗಿಡುವ ಬದಲು ರಾಜಕೀಯ ಕೈದಿಗಳಾಗಿ ಪರಿಗಣಿಸಬೇಕೆಂದು ಇವರು ಪ್ರತಿಭಟಿಸಿದರು. ಆಹಾರ ತ್ಯಜಿಸಿದರು. ಬಲಾತ್ಕಾರದಿಂದ ತಿನಿಸಿದ ಆಹಾರವನ್ನು ಹೊರಹಾಕಲು ಕ್ರಾಂತಿಕಾರಿಗಳು ನೊಣಗಳನ್ನು ಹಿಡಿದು ತಿಂದು ಆಹಾರವನ್ನು ವಾಂತಿ (Omit) ಮಾಡಿಕೊಳ್ಳುತ್ತಿದ್ದರು.

ಈ ಅರವತ್ತ ಮೂರು ದಿನಗಳ ಭೀಕರ ಉಪವಾಸ ಸತ್ಯಾಗ್ರಹದ ಹೋರಾಟದಲ್ಲಿ ತ್ಯಾಗದ ತುತ್ತ ತುದಿಯನ್ನು ಮುಟ್ಟಿ ಜಲೇಂದ್ರನಾಥದಾಸರು ಆತ್ಮಾರ್ಪಣೆ ಮಾಡಿಕೊಂಡರು. ಜೈಲುಗೇಟ್ ಹೊರಗೆ ಅಂತ್ಯಸಂಸ್ಕಾರ ನಡೆದಾಗ SSP ಹ್ಯಾಮಿಲ್ಟನ್ ಹ್ಯಾರಿಂಗ ಸೇರಿ ಎಲ್ಲ ಜೈಲು ಅಧಿಕಾರಿಗಳು ಜಲೇಂದ್ರನಾಥದಾಸರ ಸಾವಿಗೆ ದುಃಖಪಟ್ಟರು. ಅವರ ಅಪ್ರತಿಮ ತ್ಯಾಗಕ್ಕೆ ತಲೆಬಾಗಿದರು. ಕೈದಿಗಳ ಬೇಡಿಕೆಗಳನ್ನು ಪರಿಶೀಲಿಸಲು ಸರಕಾರ ಕೊನೆಗೆ ಒಪ್ಪಿಕೊಂಡಿತ್ತು. ಈ ಸಮಯಕ್ಕೆ ಕರಾಚಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯುತ್ತಿತ್ತು. ಜನತೆ ದೇಶಾದ್ಯಂತ ಭಗತ್‌ಸಿಂಗ್ ಹಾಗೂ ಇತರರನ್ನು ಬಿಡುಗಡೆಮಾಡಲು ಒಕ್ಕೊರಲಿನಿಂದ ಕೂಗುತ್ತಿದ್ದರು. ಗಾಂಧೀ ಇರ್ವಿನ್ ಮಾತುಕತೆ ಸಮಯದಲ್ಲಿ ಈ ಕ್ರಾಂತಿಕಾರಿಗಳನ್ನು ಬಿಡುಗಡೆ ಮಾಡುವ ಬೇಡಿಕೆಯನ್ನು ಗಾಂಧೀ ಮಂಡಿಸುವರೆಂದು ಭಾವಿಸಲಾಗಿತ್ತು. ಆದರೆ ವಿಷಾದದ ಅಂಶವೆಂದರೆ ಗಾಂಧೀ ಈ ಬಗ್ಗೆ ಚಕಾರವೆತ್ತಲಿಲ್ಲ.

ದೀರ್ಘಕಾಲದ ವಿಚಾರಣೆಯ ಕಪಟ ನಾಟಕದ ನಂತರ ಮಾರ್ಚ್ 23, 1931 ಸಾಯಂಕಾಲ 7-45ಕ್ಕೆ ಸರ್ದಾರ್ ಭಗತ್ ಸಿಂಗ್, ರಾಜಗುರು ಮತ್ತು ಸುಖದೇವರನ್ನು ಗಲ್ಲಿಗೇರಿಸಲಾಯಿತು. ಗಲ್ಲಿಗೇರಿಸುವ ಸಮಯದಲ್ಲೂ "ಬ್ರಿಟಿಷ್ ಸಾಮ್ರಾಜ್ಯಶಾಹಿ ನಾಶವಾಗಲಿ," "ಕ್ರಾಂತಿ ಚಿರಾಯುವಾಗಲಿ" ಎಂಬ ಘೋಷಣೆಗಳೊಂದಿಗೆ ನೇಣುಗಂಬಕ್ಕೆ ಕತ್ತನ್ನೊಡ್ಡಿದರು. ಈ ಸಮಯಕ್ಕೆ ಭಗತ್ ಸಿಂಗರಿಗೆ ಕೇವಲ 24 ವರ್ಷ ವಯಸ್ಸು ಮಾತ್ರ, ಈ ರೀತಿ ಅಪ್ರತಿಮ ಸಂಗಾತಿ, ಮಹಾನ್ ಯೋಧ ಭಗತ್‌ಸಿಂಗರು ತಮ್ಮ ಇಬ್ಬರು ಸಂಗಾತಿಗಳೊಂದಿಗೆ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮನ್ನು ಸಮರ್ಪಿಸಿಕೊಂಡರು.

ಇಂದು ಭಗತ್‌ಸಿಂಗರ ಕನಸಿನ (ಆದರ್ಶದ) ಒಂದು ಭಾಗ ಅಂದರೆ ಭಾರತದ ಸ್ವಾತಂತ್ರ್ಯವೇನೋ ದೊರೆತಿದೆ. ಆದರೆ ಅವರ ಕನಸಿನ ಇನ್ನೊಂದು ಭಾಗ "ಭಾರತದಲ್ಲಿ ಸಮಾಜವಾದ" ತರುವಷ್ಟು ಇನ್ನೂ ಕನಸಾಗಿಯೇ ಉಳಿದಿದೆ. ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಬದಲು ದೇಶಿ ಭೂಮಾಲೀಕ ಬಂಡವಾಳಗಾರರು ಜನತೆಯನ್ನು ಅಪಾರವಾಗಿ ಶೋಷಿಸುತ್ತಿದ್ದಾರೆ. ಭಗತ್‌ಸಿಂಗ ಮತ್ತವರ ಸಂಗಾತಿಗಳ ವಿಚಾರಸರಣಿಯನ್ನು ಒಪ್ಪಲು (ಸ್ವಾತಂತ್ರ್ಯ ಹೋರಾಟದ ಬಗ್ಗೆ) ಸಾಧ್ಯವಿಲ್ಲವಾದರೂ ಅವರುಗಳ ತ್ಯಾಗ, ಧೈರ್ಯ ಪ್ರಶಂಸನೀಯವಾದುದು. ಯುವಜನತೆಯ ಆದರ್ಶದ ಸಂಕೇತವಾದ ಸರ್ದಾರ್ ಭಗತ್‌ಸಿಂಗರ ಕನಸಾದ ಸಮಾಜವಾದವನ್ನು ನನಸು ಮಾಡಲು ಶ್ರಮಿಸುವ ಹೊಣೆ ಇಂದಿನ ಯುವಜನಾಂಗದ ಮೇಲಿದೆ.

(ಸಾಧಾರ: ವಿವಿಧ ಮೂಲಗಳಿಂದ)

o

ಯುರೋ ಕಮ್ಯುನಿಸಂ

(22ನೇ ಪುಟದಿಂದ)

ಎಂಬುದರ ಬಗ್ಗೆ ಎಲ್ಲಾ ಮಾರ್ಕ್ಸ್‌ವಾದಿಗಳು ಒಪ್ಪುವ ನಿಖರವಾದ ವಿವರಣೆ ಕೊಡಲಾಗಿಲ್ಲ. ಇದರ ನಂತರ ಬಂಡವಾಳಶಾಹಿ ಪುನಃ ಬಿಕ್ಕಟ್ಟಿನಲ್ಲಿ ಸಿಲುಕಿ ಬಿದ್ದಿದ್ದು, ಇನ್ನೊಂದು. ದೀರ್ಘ ಬಿಕ್ಕಟ್ಟಿಲ್ಲದ ಅವಧಿ ಬರುವದಿಲ್ಲ ಎಂಬ ಭರವಸೆ ಇಲ್ಲ. ಹೀಗೆ ಕಳೆದ 2-3 ದಶಕಗಳಲ್ಲಿ ಬಂಡವಾಳಶಾಹಿಯ ವ್ಯವಸ್ಥೆಯ ನಿಯಮಗಳು ಪಡೆದಿರುವ ವಿಶಿಷ್ಟ ರೂಪವನ್ನು ಅರ್ಥಮಾಡಿಕೊಳ್ಳುವದು ಬಹಳ ಕ್ಲಿಷ್ಟವಾಗಿರುವದು ಕೆಲವು ಕಮ್ಯುನಿಸ್ಟ್ ವಿಭಾಗಗಳಲ್ಲಿ ಹತಾಶೆಗೆ ಕಾರಣವಾಗಿದೆ. ಇನ್ನೂ ಕೆಲವರಲ್ಲಿ ಕ್ರಾಂತಿ ಇಲ್ಲದೆ ಬಂಡವಾಳಶಾಹಿ ವ್ಯವಸ್ಥೆ ಸುಧಾರಿಸಲು ಸಾಧ್ಯವಾದೀತೇನೋ ಎಂಬ ಭ್ರಮೆಗೆ ಕಾರಣವಾಗಿದೆ. ಈ ಭ್ರಮೆಗೆ, ಹತಾಶೆಗೆ ಯಾವುದೇ ಅಭಿವೃದ್ಧ ಬಂಡವಾಳಶಾಹಿ ದೇಶದಲ್ಲಿ ಸಮಾಜವಾದಿ ಕ್ರಾಂತಿ ಆಗದಿರುವದು ಇನ್ನೊಂದು ಕಾರಣ.

ಯುರೋ ಕಮ್ಯುನಿಸಂನ ಈ ಬೆಳವಣಿಗೆಯನ್ನು ಬೇರೆಬೇರೆ ಶಕ್ತಿಗಳು ತಮ್ಮತಮ್ಮ ಉಪಯೋಗಕ್ಕೆ ಬಳಸಿಕೊಳ್ಳುತ್ತಿವೆ. ಸಾಮ್ರಾಜ್ಯಶಾಹಿ ಪ್ರಚಾರಯಂತ್ರ ಇದನ್ನು ಕಮ್ಯುನಿಸ್ಟ್ ವಿರೋಧಿ ಪ್ರಚಾರಕ್ಕೆ ಬಳಸಿಕೊಂಡಿದೆ. ಯುರೋಪಿನ ಸೋಷಲಿಸ್ಟರು ಯುರೋ ಕಮ್ಯುನಿಸಂ ತಮ್ಮ ವಾದಕ್ಕೆ ಹತ್ತಿರಹತ್ತಿರ ಬರುತ್ತಿದೆ ಎಂದು ಸಂತೋಷಪಟ್ಟರೆ, ಟ್ರಾಟಸ್ಕಿವಾದಿಗಳು, ಯುರೋ ಕಮ್ಯುನಿಸಂ ಒಂದು ದೇಶದಲ್ಲಿ ಸಮಾಜವಾದ ನಿರ್ಮಿಸಬಹುದು ಎಂಬ ತಪ್ಪು ಸಿದ್ಧಾಂತದ ವಿಕೃತ ಫಲ; ಈ ಬೆಳವಣಿಗೆ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪಕ್ಷಗಳು ಕ್ರಾಂತಿಕಾರಿಯಾಗಿಲ್ಲ ಹಾಗೂ ತಮ್ಮ "ಶಾಶ್ವತ ಕ್ರಾಂತಿ" ಸಿದ್ಧಾಂತವೇ ಸರಿ ಎಂದು ಸಮರ್ಥಿಸಿಕೊಳ್ಳುತ್ತಿದ್ದಾರೆ. ಎಡ ದುಸ್ಸಾಹಸವಾದಿಗಳೂ ಈ ಸನ್ನಿವೇಶವನ್ನು ದುಡಿಯುವ ವರ್ಗಗಳ ಹಾದಿ ತಪ್ಪಿಸಲು ಉಪಯೋಗಿಸುವ ಸಾಧ್ಯತೆ ಇದೆ.

ಯುರೋ ಕಮ್ಯುನಿಸ್ಟ್ ಪಕ್ಷಗಳೊಳಗೆ, ಈ ನೀತಿಗಳ ಬಗ್ಗೆ ಪೂರ್ಣ ಒಮ್ಮತವಿಲ್ಲ. 1978ರ ಫ್ರೆಂಚ್ ಚುನಾವಣೆ ಮತ್ತು ಇತ್ತೀಚಿನ ಇಟಲಿಯ ಪರಿಣಾಮಗಳು, ಈ ನೀತಿ ಯಾವ ರೀತಿಯಲ್ಲೂ ಪಕ್ಷಗಳ ಸಾಮಾನ್ಯ ಬೆಳವಣಿಗೆಗಾಗಲೀ ಅಥವಾ ಚುನಾವಣಾ ಆಧಾರವನ್ನು ವಿಸ್ತಾರಗೊಳಿಸಲಿಕ್ಕೇ ಆಗಲಿ ಸಹಾಯಕವಾಗಿಲ್ಲ ಎಂದು ತೋರಿಸಿಕೊಟ್ಟಿವೆ. ಆದ್ದರಿಂದ ಈ ಪಕ್ಷಗಳಲ್ಲಿ ಅದರಲ್ಲೂ ಇಟಲಿ, ಫ್ರಾನ್ಸ್‌ನ ಪಕ್ಷಗಳು ಪುನಃ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಸಿದ್ಧಾಂತಗಳ ಸರಿಯಾದ ಹಾದಿಗೆ ಬರುವ ಸಾಧ್ಯತೆ ಇದೆ. ಈ ರೀತಿ ಆಗುವದೆಂದು ಸಮಾಜವಾದಿ ಕ್ರಾಂತಿಯ ಪರವಾದ ಮತ್ತು ಪ್ರಗತಿಪರ ಶಕ್ತಿಗಳು ಆಶಿಸಬೇಕಾಗಿದೆ.

●

ಶೋಷಣೆ, ಜಾತಿ ಮತ್ತು ಆಯೋಗಗಳು

(15ನೇ ಪುಟದಿಂದ)

ಹಣವಂತರಾದ ಪ್ಲಾಂಟರುಗಳಿಗೂ ಪ್ರಭಾವಶಾಲಿಗಳಾದ ಪುಡಾರಿಗಳಿಗೂ ಧರ್ಮಾರ್ಥವೆಂಬಂತೆ ಕೊಡಲಾಗಿದೆ. ರಾಜಕೀಯ ಅನುಗ್ರಹಕ್ಕಾಗಿ ಅಪ್ರಾಮಾಣಿಕರೂ ಆಳುವ ಪಕ್ಷದ ಬಾಲಬಡುಕರೂ ಆದವರನ್ನು ಭೂಮಂಚಾಯ್ತಿಗಳಿಗೆ ನೇಮಿಸಿರುವುದರಿಂದ ದುರ್ಬಲರಾದ ಕೆಳವರ್ಗದ ಕೃಷಿಕರಿಗೆ ನ್ಯಾಯ ದೊರೆಯುವುದು ಬಹಳ ಅಪರೂಪವಾಗಿದೆ. ಇನ್ನು ಸ್ಥಳೀಯ ಸಂಸ್ಥೆಗಳಿಗೆ ಶಾಸನಸಭೆಗಳಿಗೆ ಮೀಸಲಾಗಿ ಇರಿಸಿರುವ ಚುನಾಯಿತ ಸ್ಥಾನಗಳು ಆಳುವ ಪಕ್ಷದ ಮುಖಂಡರ ಬಾಲಬಡುಕರಿಗೆ ಮಾತ್ರ ಸಿಗುತ್ತವೆ.

ಇಂತಹ ಪರಿಸ್ಥಿತಿಯಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ತುಳಿಯಲ್ಪಟ್ಟ ವರ್ಗಗಳು ತಮ್ಮ ವರ್ಗಹಿತ್ತೈಷಿಗಳು ಯಾರು, ತಮ್ಮ ಶೋಷಣೆಯೇ ಬಂಡವಾಳವಾಗಿ ಉಳ್ಳವರು ಯಾರು ಎಂಬುದನ್ನು ಗುರುತಿಸಿ ವರ್ಗ ಹೋರಾಟದ ಆಧಾರದ ಮೇಲೆ ಒಗ್ಗೂಡಿದಾಗ ಮಾತ್ರ ತಾವು ಈ ದೇಶದ ಸಂಪತ್ತಿನ ನಿಜವಾದ ವಾರಸುದಾರರಾಗಬಲ್ಲರು. ಇಂಥವರ ಸಂಘಟನೆ, ಇವರ ಹೋರಾಟಕ್ಕೆ ಬೆಂಬಲ ಮತ್ತು ಮಾರ್ಗದರ್ಶನ ಎಡಪಕ್ಷಗಳ ಪ್ರಮುಖ ಜವಾಬ್ದಾರಿಯಾಗಿದೆ.

●

ಲೆನಿನ್ ತೋರಿಸಿದ ದಾರಿ

—ಡಾ|| ಜಿ. ರಾಮಕೃಷ್ಣ

ಈಗ್ಗೆ ನೂರಹತ್ತು ವರ್ಷಗಳ ಹಿಂದೆ ಜನಿಸಿದ ಲೆನಿನ್ ಜಗತ್ತಿನ ಶೋಷಿತ ಜನಸಮುದಾಯಕ್ಕೆ ಹೋರಾಟದ ಮಾರ್ಗದರ್ಶಿಯಾಗಿದ್ದಾರೆ. 1902-3ರ ವರ್ಷಗಳಲ್ಲಿ ಅವರು ಲಂಡನ್ ಮತ್ತು ಪ್ಯಾರಿಸ್‌ಗಳಲ್ಲಿ ವಾಸವಾಗಿದ್ದು ರಷ್ಯಾದ ವ್ಯವಸಾಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಆಳವಾದ ಅಧ್ಯಯನದಲ್ಲಿ ತೊಡಗಿದ್ದರು. ಕೃಷಿ ಕ್ಷೇತ್ರದ ನ್ಯೂನತೆಗಳನ್ನು ಗುರುತಿಸಿ ಅವುಗಳಿಗೆ ಸಮಗ್ರವಾದ ಪರಿಹಾರವನ್ನು ದೊರಕಿಸಿಕೊಡುವುದು ಆ ಅಧ್ಯಯನದ ಮುಖ್ಯೋದ್ದೇಶವಾಗಿತ್ತು. ರೈತಾಪಿ ಜನರ ಮಧ್ಯ ತಕ್ಕಮಟ್ಟಿನ ಪ್ರಭಾವವನ್ನು ಹೊಂದಿದ್ದ "ಸಮಾಜವಾದಿ ಕ್ರಾಂತಿಕಾರಿ" ಪಕ್ಷವೆಂದು ಕರೆದುಕೊಳ್ಳುತ್ತಿದ್ದ ಪಕ್ಷದ ಅನೇಕ ನಿಲುವುಗಳನ್ನು ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದ ವೀಕ್ಷಿಸಿ ಅವುಗಳು ಹೇಗೆ ಅಪಾಯಕಾರಿ ಸಿದ್ಧಾಂತಗಳಾಗಿದ್ದುವೆಂಬುದನ್ನು ಎತ್ತಿ ತೋರಿಸುವಂತಹ ಅನೇಕ ಲೇಖನಗಳನ್ನು ಲೆನಿನ್ 1902-3ರ ವರ್ಷಗಳಲ್ಲಿ ಬರೆದು ಪ್ರಕಾಶಿಸಿದ್ದರು. "ರಷ್ಯದಲ್ಲಿ ಬಂಡವಾಳಶಾಹಿಯ ಬೆಳವಣಿಗೆ" ಎಂಬ ಗ್ರಂಥವನ್ನು 1899ರಲ್ಲೇ ಪ್ರಕಟಿಸಿದ್ದ ಲೆನಿನ್ 1903ರಲ್ಲಿ "ಹಳ್ಳಿಯ ಬಡವರಿಗೆ" ಎಂಬ ಪ್ರಮುಖ ಕಿರುಹೊತ್ತಿಗೆಯನ್ನು ಬರೆದು ಅದೇ ವರ್ಷದ ಮೇ ತಿಂಗಳಲ್ಲಿ ಜಿನೀವಾದಿಂದ ಅದನ್ನು ಪ್ರಕಟಿಸಿದರು. 1902ರಲ್ಲಿ ರಷ್ಯದಾದ್ಯಂತ ನಡೆದಿದ್ದ ರೈತಸಂಘರ್ಷಗಳ ಹಿನ್ನೆಲೆಯಲ್ಲಿ ಬರೆಯಲಾದ ಈ ಪುಸ್ತಿಕೆಯು ಮೊದಲಿಗೆ ಗುಟ್ಟಾಗಿ ಪ್ರಸಾರವಾಗಬೇಕಾಗಿತ್ತು. ಅತ್ಯಂತ ಸರಳವಾದ ಭಾಷೆ ಮತ್ತು ಶೈಲಿಯಲ್ಲಿ ಬರೆಯಲಾಗಿರುವ ಈ ಕಿರು ಹೊತ್ತಿಗೆಯು ಆಗ್ಗೆ ರಷ್ಯದಲ್ಲಿದ್ದ ವರ್ಗಗಳ ವಿಭಜನೆಯ ಸ್ವರೂಪವನ್ನು ಜನಸಾಮಾನ್ಯರಿಗೆ ಮನೋಜ್ಞವಾದ ರೀತಿಯಲ್ಲಿ ಪರಿಚಯ ಮಾಡಿಕೊಡುತ್ತದೆ. ವರ್ಗಗಳೆಂದರೇನು, ಅವುಗಳನ್ನು ಗುರುತಿಸುವ ಬಗೆ ಹೇಗೆ, ವರ್ಗ ಹೋರಾಟದಲ್ಲಿ ಮೈತ್ರಿಯ ಸಾಧನೆ ಹೇಗುಂಟಾಗುತ್ತದೆ, ಯಾರು ಯಾರೊಡನೆ ಮೈತ್ರಿ ಬೆಳೆಸಿ ಐಕ್ಯದಿಂದ ಹೋರಾಡಬೇಕು, ಅಂತಿಮ ಗುರಿ ಮುಟ್ಟಲು ಕ್ರಾಂತಿಕಾರಿ ಮೆಟ್ಟಲುಗಳು ಯಾವುವು, ಎಂಬಿತ್ಯಾದಿ ಪ್ರಶ್ನೆಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ಸಮಾಜವಾದಿ ಪರಿಹಾರ ಸೂಚಿಸುವುದು ಈ ಪುಸ್ತಿಕೆಯ ಮಹದುದ್ದೇಶ. ವಿವಿಧ ಸ್ತರಗಳಿಗೆ ಸೇರಿದ ಜನ ನಾನಾ ಬಗೆಗಳಲ್ಲಿ ವಿಂಗಡನೆ ಹೊಂದಿರುವ ಭಾರತದಲ್ಲಿ ವರ್ಗ ಹೋರಾಟವು ಸಾಧ್ಯವೂ ಇಲ್ಲ, ಅಗತ್ಯವೂ ಅಲ್ಲ, ಎಂದು ಹೇಳುವುದು ನಮ್ಮಲ್ಲಿ ಕೆಲವರ ವಾಡಿಕೆಯಾಗಿದೆ. ಅಂತಹವರಿಗೆ ಉತ್ತರ ಲೆನಿನ್ನರ ಈ ಕಿರುಹೊತ್ತಿಗೆಯಲ್ಲಿದೆ.

ಅಂದರೆ, 1903ರಲ್ಲಿ ರಷ್ಯದಲ್ಲಿದ್ದ ಪರಿಸ್ಥಿತಿ ಇಂದು ಅದೇ ರೂಪದಲ್ಲಿ ನಮ್ಮಲ್ಲಿದೆ ಮತ್ತು ಅಂದಿನ ವಿಶ್ಲೇಷಣೆ ಯಥಾವತ್ತಾಗಿ ಇಂದು ಅನ್ವಯವಾಗುತ್ತದೆ ಎಂದು ಇದರ ಅರ್ಥವಲ್ಲ. 1903ರ ರಷ್ಯದ ಸಮಾಜ ರಚನೆಗೂ 1980ರ ಭಾರತದ ಸಮಾಜ ರಚನೆಗೂ ಬಹುಮಟ್ಟಿನ ಭಿನ್ನತೆಯುಂಟು. ಆದರೆ ಸಮಾಜ ರಚನೆಯ ಸೂಕ್ಷ್ಮವನ್ನು ವಿಶ್ಲೇಷಿಸಲು ಲೆನಿನ್ ಅನುಸರಿಸಿರುವ ವಿಧಾನವನ್ನು ಕ್ಲುಪ್ತವಾಗಿ ನಾವು ಅನುಸರಿಸಿದರೆ ಇಂದಿನ ನಮ್ಮ ಆಯುಕಟ್ಟಿನಲ್ಲಿ ವರ್ಗಗಳನ್ನು ಹೇಗೆ ವಿಂಗಡಿಸಬಹುದು ಮತ್ತು ಶೋಷಣೆಗೆ ಸಿಲುಕಿರುವ ಜನರಲ್ಲಿ ಯಾವ ರೀತಿಯ ಐಕ್ಯತೆ ಸಾಧಿಸಬಹುದು ಮತ್ತು ಸಾಧಿಸಬೇಕು ಎಂಬುದರ ಅರಿವಾಗುತ್ತದೆ. ಕ್ರಾಂತಿಕಾರಿ ಚಳುವಳಿಯನ್ನು ಕ್ರಮೇಣ ಉನ್ನತ ಹಂತಗಳಿಗೆ ಕೊಂಡೊಯ್ಯಬೇಕಾದರೆ ವರ್ಗಭೇದವನ್ನು ಕೂಲಂಕಷವಾಗಿ ಗ್ರಹಿಸಬೇಕಾದ್ದು ಅತ್ಯವಶ್ಯಕ. ಲೆನಿನ್ನರ ಜೀವಿತಕಾಲದಲ್ಲಿ ಸಹ ಈ ಪ್ರಶ್ನೆ ಅವರಿಗೆ ಪದೇಪದೇ ಎದುರಾಗುತ್ತಿತ್ತು. ಲಿಯಾನ್ ಟ್ರಾಟ್‌ಸ್ಕಿ ಪ್ರಕಾರ ಅಂದಿನ ಪರಿಸ್ಥಿತಿಯಲ್ಲಿ ಕಾರ್ಮಿಕರು ಯಾರೊಡನೆಯೂ ಮೈತ್ರಿ ಬೆಳೆಸಿ ಹೋರಾಟ ನಡೆಸುವುದು ಅಶಕ್ಯವಾಗಿತ್ತು. ಏಕೆಂದರೆ, ಮಾರ್ಕ್ಸ್ ಅವರು ತಿಳಿಸಿದ್ದಂತೆ ಸಮಾಜವಾದಿ ಮುನ್ನಡೆಯನ್ನು ಸಾಧಿಸಲು ಕಾರ್ಮಿಕ ವರ್ಗವೊಂದೇ ಬದ್ಧವಾಗಿತ್ತು. (ಮಾರ್ಕ್ಸ್ ಹಾಗೆ ಹೇಳಿದ್ದರೆಂದು ಟ್ರಾಟ್‌ಸ್ಕಿಯ ವಾದವಾಗಿತ್ತು.) ಮೈತ್ರಿ ಬೆಳೆಸಲು ಸಮಾಜವಾದಿ ಕಾರ್ಯಕ್ರಮದಲ್ಲಿ ನಂಬುಗೆಯಿದ್ದ ಬೇರೆ ಇನ್ನಾವ ವರ್ಗವಿತ್ತು? ರೈತಾಪಿಗಳೊಡನೆ ಮೈತ್ರಿ ಸಾಧ್ಯವಿರಲಿಲ್ಲ. ಏಕೆಂದರೆ ರೈತರಲ್ಲಿ ಭೂಹೀನರಾಗಿದ್ದವರು ಸ್ವಂತ ಭೂಮಿಪಡೆಯಲು ಕಾತುರರಾಗಿದ್ದರು, ಮತ್ತು ಕಡಿಮೆ ಪ್ರಮಾಣದ ಭೂಮಿಯನ್ನು ಹೊಂದಿದವರು ಅದನ್ನು ಹೆಚ್ಚಿಸಿಕೊಳ್ಳಲು ಇಚ್ಛಿಸುವಂಥವರು. ಅವರಿಗೆ ಸಮಾಜವಾದವೆಂದರೆ ಭೂಮಿಯನ್ನೆಲ್ಲಾ ಒಟ್ಟು ಸಮಾಜದ ಆಸ್ತಿಯನ್ನಾಗಿ ಪರಿವರ್ತಿಸುವುದಲ್ಲ. ಆದರೆ ಕಾರ್ಮಿಕವರ್ಗದ ದೃಷ್ಟಿಯಲ್ಲಿ ಸಮಾಜವಾದವೆಂದರೆ ಉತ್ಪಾದನಾ ಸಾಮಗ್ರಿಗಳನ್ನು ಸಮಾಜದ ಹಿಡಿತಕ್ಕೆ ತರುವುದು. ಹೀಗಾಗಿ ಕಾರ್ಮಿಕರ ಮತ್ತು ರೈತರ ಹಿತಾಸಕ್ತಿಗಳು ಭಿನ್ನವಾಗಿವೆಯಾದ್ದರಿಂದ ಕ್ರಾಂತಿಕಾರಿ ಹೋರಾಟದಲ್ಲಿ ಅವರು ಮೈತ್ರಿ ಬೆಳೆಸಿಕೊಂಡು ಸಹಭಾಗಿಗಳಾಗಲು ಸಾಧ್ಯವಿಲ್ಲ. ಇದು ಸಂಕ್ಷೇಪದಲ್ಲಿ ಟ್ರಾಟ್‌ಸ್ಕಿಯ ವಾದವಾಗಿತ್ತು. ಈ ವಾದವನ್ನು ಮಾರ್ಕ್ಸ್‌ವಾದಿ ದೃಷ್ಟಿಕೋನದ ಸರಿಯಾದ ವ್ಯಾಖ್ಯಾನವೆಂದು ಬಗೆದಿದ್ದರೆ ರೈತ-ಕಾರ್ಮಿಕರ ಐಕ್ಯಹೋರಾಟ ಸಾಧ್ಯವಿರುತ್ತಿರಲಿಲ್ಲ. ಆದರೆ ಲೆನಿನ್ ಈ ವಾದವನ್ನು ಅವೈಜ್ಞಾನಿಕವಾದುದೆಂದು ತಿರಸ್ಕರಿಸಿದರು. ಅವರ ವಾದ ಸುಮಾರು ಹೀಗಿತ್ತು: ಸದ್ಯದ ಪರಿಸ್ಥಿತಿಯಲ್ಲಿ ಸಮಾಜವಾದಿ ಗುರಿಯನ್ನು ರೈತರು ಮತ್ತು ಕಾರ್ಮಿಕರು ಬೇರೆಬೇರೆ ರೀತಿಗಳಲ್ಲಿ ಅರ್ಥಮಾಡಿಕೊಳ್ಳಬಹುದು. ಹಾಗೆಂದಮಾತ್ರಕ್ಕೆ ಸಮಾಜವಾದವೆಂದರೆ ಅಷ್ಟಕ್ಕೇ ಸೀಮಿತವಾಗಿರುವ ಸಿದ್ಧಾಂತವೆಂದರ್ಥವಲ್ಲ. ಸಮಾಜವಾದಿ ವ್ಯವಸ್ಥೆಯು ಒಂದೇ ಏಟಿಗೆ ಅಸ್ತಿತ್ವಕ್ಕೆ ಬರುವಂತಹ ಮಾಂತ್ರಿಕ ಸೃಷ್ಟಿಯಲ್ಲ. ಚಾರಿತ್ರಿಕವಾಗಿ ಸಮಾಜವು ಹಂತಹಂತವಾಗಿ ಬದಲಾವಣೆ ಹೊಂದುತ್ತದೆ. ಅಂತಹ ಬದಲಾವಣೆಗಳಲ್ಲಿ ಎಲ್ಲಿ ಗುಣಾತ್ಮಕ ಬದಲಾವಣೆ ಉಂಟಾಗುತ್ತದೋ ಅದನ್ನು ಕ್ರಾಂತಿಕಾರಿ ಬದಲಾವಣೆ ಎನ್ನುತ್ತೇವೆ. ಭೂಮಾಲಿಕನ ದಾಸ್ಯದಲ್ಲಿ ತೊಳಲಿ ತನ್ನ ದುಡಿಮೆಯ ಫಲವನ್ನೆಲ್ಲಾ ಅವನಿಗೆ ಒಪ್ಪಿಸುವಂತಹ ಕ್ರೂರ ವ್ಯವಸ್ಥೆಗೆ ಬದಲಾಗಿ ರೈತನೊಬ್ಬ ಭೂಮಿಯನ್ನು ತಾನೇ ಸ್ವತಃ ಹೊಂದಿರುವಂತಾಗಿ ತನ್ನ ದುಡಿಮೆಯ ಫಲ ತನಗೇ ದೊರಕಿಸಿಕೊಳ್ಳುವಂತಾದರೆ ಅದು ಅಸಾಮಾನ್ಯವಾದಂತಹ ಬದಲಾವಣೆಯೇ ಸರಿ. ಆದರೆ ಅದು ಹೆಸರಿಗೆ ಮಾತ್ರ ಹಾಗೆ ತೋರುವಂತಿರದೆ ನಿಜಕ್ಕೂ ಒಡೆತನದ ಬದಲಾವಣೆಯಾಗಿರಬೇಕು. ಅಷ್ಟೆ. ಸಣ್ಣ ಹಿಡುವಳಿಗಳನ್ನುಳ್ಳ ರೈತರು ಮತ್ತು ಭೂಹೀನ ರೈತ ಕಾರ್ಮಿಕರು ಭಾರಿ ಜಮೀನ್ದಾರರ ಅಧಿಕ ಆರ್ಥಿಕ ಶಕ್ತಿಯಿಂದಾಗಿ ಅವರ ಶೋಷಣೆಗೆ ಗುರಿಯಾಗಿದ್ದಾರೆ. ಮೂಲಭೂತವಾಗಿ ಅವರ ಹೋರಾಟ ಈ ಭಾರಿ ಭೂಮಾಲಿಕರ ವಿರುದ್ಧ. ಔದ್ಯೋಗಿಕ ಕ್ಷೇತ್ರದಲ್ಲಿ ಶೋಷಣೆಗೆ ಸಿಲುಕಿರುವ ಕಾರ್ಮಿಕರಂತೆ ಇವರೂ ಶೋಷಿತ ವರ್ಗಕ್ಕೆ ಸೇರಿರುವವರೇ ಆಗಿದ್ದಾರೆ. ಅಲ್ಲಿ ಹೇಗೆ ಉತ್ಪಾದನಾ ಸಾಮಗ್ರಿಗಳನ್ನು ಹೇರಳವಾಗಿ ಉದ್ಯೋಗಪತಿಯು ತನ್ನದಾಗಿಸಿಕೊಂಡಿದ್ದಾನೋ ಹಾಗೆ ಇಲ್ಲೂ ಭಾರಿ ಭೂಮಾಲಿಕ ವಿಶೇಷ ಆಸ್ತಿಯಿಂದಾಗಿ ಸರ್ವಶಕ್ತನಾಗಿ ಶೋಷಣೆಯಲ್ಲಿ ತೊಡಗಿದ್ದಾನೆ. ಅಲ್ಲದೆ, ಶೋಷಣೆಯ ಕಾರ್ಯದಲ್ಲಿ ಭಾರಿ ಉದ್ಯೋಗಪತಿ ಮತ್ತು ಭಾರಿ ಭೂಮಾಲಿಕ ಇಬ್ಬರೂ ಮೈತ್ರಿಯುತವಾದ ಐಕ್ಯತೆ ಸಾಧಿಸಿಕೊಂಡಿದ್ದಾರೆ. ಆದ್ದರಿಂದ ಅವರ ಶೋಷಣೆಗೆ ಸಿಲುಕಿರುವವರಲ್ಲೂ ಸಹ ಮೈತ್ರಿಯುತವಾದ ಐಕ್ಯತೆಯು ಹೋರಾಟಕ್ಕೆ ಅವಶ್ಯಕವಾಗಿದೆ, ಮತ್ತು ಐಕ್ಯತೆ ಸಾಧ್ಯ.–ಇದು ಟ್ರಾಟ್‌ಸ್ಕಿಗೆ ಲೆನಿನ್ ನೀಡಿದ ಉತ್ತರ.

ಮಾರ್ಕ್ಸ್‌ವಾದಿ ವಿಶ್ಲೇಷಣೆಯಲ್ಲಿ ಟ್ರಾಟ್‌ಸ್ಕಿ ಸರಿಯೋ ಅಥವಾ ಲೆನಿನ್ ಸರಿಯೋ ಎಂಬ ಪ್ರಶ್ನೆಗೆ ಚರಿತ್ರೆಯಲ್ಲೇ ಉತ್ತರವಿದೆ. ರೈತ-ಕಾರ್ಮಿಕ ಐಕ್ಯಹೋರಾಟದಿಂದ ಲೆನಿನ್ನರ ನಾಯಕತ್ವದಲ್ಲಿ 1917ರ ಮಹಾನ್ ಅಕ್ಟೋಬರ್ ಸಮಾಜವಾದಿ ಕ್ರಾಂತಿ ಜರುಗಿತೆಂಬುದು ಜಗತ್ಪ್ರಸಿದ್ಧವಾಗಿದೆ. ವರ್ಗವಿನ್ಯಾಸದ ರೂಪುರೇಖೆಗಳನ್ನು ಗುರುತಿಸುವಲ್ಲಿ ಲೆನಿನ್ ಯಶಸ್ವಿಯಾದರೆಂಬುದಕ್ಕೆ ಇದಕ್ಕಿಂತಲೂ ಬೇರೆಯಾದ ನಿದರ್ಶನ ಬೇಕಿಲ್ಲ. ಸಿದ್ಧಾಂತವೊಂದು ಸರಿಯೇ ತಪ್ಪೇ ಎಂಬುದಕ್ಕೆ ಕಾರ್ಯತಃ ಉಂಟಾಗುವ ಪರಿಣಾಮ ಅತ್ಯುತ್ತಮವಾದ ಅಳತೆಗೋಲು. ಮಾರ್ಕ್ಸ್‌ವಾದದ ಮೂಲಪಾಠಗಳಲ್ಲಿ ಇದೂ ಒಂದು. ಅದರಂತೆ ಲೆನಿನ್ನರ ಸಿದ್ಧಾಂತವು ಉತ್ಕೃಷ್ಟವಾದ ಸಿದ್ಧಾಂತವಾಗಿದ್ದಿತೆಂಬುದು ನಿರ್ವಿವಾದ. "ಹಳ್ಳಿಯ ಬಡವರಿಗೆ" ಎಂಬ ಕಿರುಹೊತ್ತಿಗೆಯಲ್ಲಿ ಈ ಸಿದ್ಧಾಂತದ ಅಡಿಪಾಯವನ್ನು ಅಚ್ಚುಕಟ್ಟಾಗಿ ನಿರ್ಮಿಸಲಾಗಿದೆ.

ನಗರಗಳ ಮತ್ತು ಹಳ್ಳಿಗಳ ನಡುವೆ, ಕಾರ್ಮಿಕರ ಮತ್ತು ರೈತ ಹಾಗೂ ಕೃಷಿಕಾರ್ಮಿಕರ ನಡುವೆ. ಮತ್ತು ಸಂಘಟಿತರ ಮತ್ತು ಅಸಂಘಟಿತರ ನಡುವೆ ತಿಕ್ಕಾಟವಿದೆಯೆಂದು ಘೋಷಿಸುವ "ಕಿಸಾನ್" ನಾಯಕರ ಘೋಷಣೆ ನಮ್ಮಲ್ಲಿ ಸುಪರಿಚಿತವಾಗಿದೆ. ಆದರೆ ಆ ನಾಯಕರು ಭಾರಿ ಭೂಮಾಲಿಕರ ವಕಾಲತ್ತು ವಹಿಸಿರುವವರು ಎಂಬುದನ್ನು ಮರೆಯಲಾರದು. "ಕಮ್ಯುನಿಸ್ಟರು ಎಂದೆಂದಿಗೂ ರೈತರ ಹಿತೈಷಿಗಳಾಗಲಾರರು" ಎಂದು ಪದೇಪದೇ ಬೊಬ್ಬೆಯಿಡುವ ಚರಣಸಿಂಗ್ ಮಹಾಶಯರ ಉಕ್ತಿಯನ್ನು ಈ ಹಿನ್ನೆಲೆಯಲ್ಲಿ ಮಾತ್ರವೇ ಅರ್ಥೈಸಲು ಸಾಧ್ಯ. ಅವರ ಪ್ರಕಾರ ರೈತರೆಂದರೆ ಭಾರಿ ಭೂಮಾಲಿಕರು. ಅವರ ಮತ್ತು ಕಮ್ಯುನಿಸ್ಟರ ಮೈತ್ರಿ ಸಾಧ್ಯವಿಲ್ಲವೆಂಬುದು ಚರಣಸಿಂಗರ ಆಶಯವಾದರೆ ಅದು ಸರಿಯಾದ ಆಶಯವೇ ಆಗಿದೆ ಏಕೆಂದರೆ ಭಾರಿ ಉದ್ಯೋಗಪತಿಗಳಂತೆ ಭಾರಿ ಭೂಮಾಲಿಕರೂ ಸಹ ಶೋಷಣೆಯ ಸಾಧನೆಗಳನ್ನು ತಮ್ಮಲ್ಲಿ ಕೇಂದ್ರೀಕರಿಸಿಕೊಂಡಿದ್ದಾರೆ. "ಹಸಿರು ಕ್ರಾಂತಿ"ಯ ಫಲವನ್ನು ತಮ್ಮ ಲಾಭವನ್ನಾಗಿಸಿಕೊಂಡಿರುವವರು ಇವರು. ಔದ್ಯೋಗಿಕ ಉಪಕರಣಗಳನ್ನೂ ಬ್ಯಾಂಕುಗಳಿಂದ ಲಭಿಸುವ ಸೌಲಭ್ಯಗಳನ್ನೂ ತಮ್ಮ ಹಿಡಿತದಲ್ಲಿಟ್ಟುಕೊಂಡಿರುವವರು ಇವರು. ಹುಣಿಸೆಕಟ್ಟೆಯ ಶೇಷಗಿರಿಯಪ್ಪನಂತಹವರ ಕೊಲೆಮಾಡುವವರು ಅಥವಾ ಮಾಡಿಸುವವರು ಇವರು. ತಾತಗುಣಿ ಎಸ್ಟೇಟಿನ ಕಾರ್ಮಿಕರನ್ನು ಸದೆಬಡಿಯುವವರು ಇವರು. ಚಿಕ್ಕಮಗಳೂರಿನ ಕಾಫಿ ಪ್ಲಾಂಟೇಷನ್‌ಗಳಲ್ಲಿ ದೈತ್ಯರಂತೆ ವರ್ತಿಸುವವರು ಇವರು. ಬೆಲ್ಚಿ, ನಾರಾಯಣಪುರ–ಪಾರಸ್ ಬೀಘಾಗಳಂತಹ ಕಡೆಗಳಲ್ಲಿ ದಲಿತರನ್ನು ಬೆಂಕಿಹಾಕಿ ಸುಡುವ ಹಿಂಸಾಚಾರ ಪ್ರಕರಣಗಳಿಗೆ ಇವರು ಹೊಣೆ. ಅಂತಹವರ ವರ್ಗ ಐಕ್ಯತೆಯ ವಿರುದ್ಧ ರೈತ-ಕಾರ್ಮಿಕರ ಐಕ್ಯಹೋರಾಟವು ನಮ್ಮ ಇಂದಿನ ವರ್ಗಹೋರಾಟದ ಹಂತದಲ್ಲಿ ಅತಿ ಸ್ವಾಭಾವಿಕವಾಗಿದೆ.

ಯಾವ ಕ್ರಾಂತಿಕಾರಿ ಬದಲಾವಣೆಯಾಗಬೇಕಾದರೂ ಕ್ರಾಂತಿಕಾರಿ ಸಿದ್ಧಾಂತವೊಂದರ, ಕಾರ್ಯಕ್ರಮವೊಂದರ ಅಗತ್ಯವಿದೆ. ಮತ್ತು ಅಂತಹ ಕಾರ್ಯಕ್ರಮವು ಕಾರ್ಯಗತವಾಗಬೇಕಾದರೆ ಕ್ರಾಂತಿಕಾರಿ ಮೈತ್ರಿಯ ಅವಶ್ಯಕತೆಯೂ ಅಷ್ಟೇ ಪ್ರಶಸ್ತವಾದದ್ದು. ಈ ಕಾರಣದಿಂದಲೇ ನಮ್ಮ ಇಂದಿನ ದೈನಂದಿನ ಹೋರಾಟಗಳಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಐಕ್ಯತೆಯು ಮಹತ್ತರವಾದ ಅಂಶವಾಗಿದೆ. ಅಂತಹ ಮೈತ್ರಿಯ ಅಭಾವದಲ್ಲಿ ವಿವಿಧ ಪ್ರಜಾಪ್ರಭುತ್ವವಾದಿ ಶಕ್ತಿಗಳು ಪ್ರತ್ಯೇಕವಾದ ಬಣಗಳಾಗಿ ಉಳಿದು ಚಿಕ್ಕಪುಟ್ಟ ಹೋರಾಟಗಳಲ್ಲಿ ತೊಡಗಬಹುದೇ ವಿನಾ ಹೋರಾಟವನ್ನು ಒಂದು ಉನ್ನತಮಟ್ಟಕ್ಕೆ ಒಯ್ಯಲಾರದೆ ಹೋಗುತ್ತವೆ. ಇಲ್ಲಿ ಗಮನಿಸಬೇಕಾದ ಇನ್ನೊಂದು ಮಹತ್ವದ ಅಂಶವನ್ನು ಎಷ್ಟು ಒತ್ತಿ ಹೇಳಿದರೂ ಸಾಲದು. ಪ್ರಜಾಪ್ರಭುತ್ವದ ಮಾರ್ಗವನ್ನು ಪ್ರತಿಬಂಧಿಸಿ ಸರ್ವಾಧಿಕಾರಿ ಕ್ರಮಗಳನ್ನು ಕೈಗೊಳ್ಳುವ ಭಾರಿ ಭೂಮಾಲಿಕರ ಮತ್ತು ಔದ್ಯೋಗಿಕ ಏಕಸ್ವಾಮ್ಯಗಳ ಪರವಾದ ರಾಜಕೀಯ ಪಕ್ಷ ಅಥವಾ ಪಕ್ಷಗಳನ್ನು ಹಿಮ್ಮೆಟ್ಟಿಸಲು ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಮತ್ತು ಪಕ್ಷಗಳ ಮೈತ್ರಿಯು ಕೇವಲ ಚುನಾವಣಾ ಮೈತ್ರಿಯಾಗಿ ಉಳಿದರೆ ಸಾಲದು. ಅದರಿಂದ ಲಭಿಸಬಹುದಾದ ಪ್ರಯೋಜನ ಬಹಳ ಸೀಮಿತವಾದದ್ದು ಮತ್ತು ಆಂಶಿಕವಾದದ್ದು ಮಾತ್ರ. ಸರ್ವಾಧಿಕಾರಿ ಮತ್ತು ಮತೀಯ ಧೋರಣೆಗಳನ್ನು ಸೋಲಿಸಲು ಅದಕ್ಕಿಂತಲೂ ಹೆಚ್ಚಾಗಿ ನಮಗೆ ಬೇಕಾದದ್ದು ಹೋರಾಟದ ರಂಗದಲ್ಲಿ ಸಕ್ರಿಯವಾದ ಐಕ್ಯತೆ, ಈ ಐಕ್ಯತೆಯಿಂದ ಹೊರಹೊಮ್ಮುವ ಐಕ್ಯತೆಯು ದೃಢವಾದದ್ದು ಮತ್ತು ನೈಜವಾಗಿ ಪರಿಣಾಮಕಾರಿಯಾಗುವಂತಹದು. ಆ ಸಂದರ್ಭದಲ್ಲಿ ಚುನಾವಣಾ ಮೈತ್ರಿಯೂ ಹೆಚ್ಚು ಅರ್ಥವಾಗುತ್ತದೆ.

ಇದಕ್ಕೆಲ್ಲಾ ಮೂಲಭೂತವಾಗಿರುವ ಪ್ರಶ್ನೆ ಇದು: ನಮ್ಮ ಇಂದಿನ ಚಾರಿತ್ರಿಕ ಸಂದರ್ಭದಲ್ಲಿ ವರ್ಗವಿಭಜನೆ ಯಾವ ತೆರನಾದದ್ದು? ಅದನ್ನು ಗುರುತಿಸುವ ಬಗೆ ಹೇಗೆ? ಮೈತ್ರಿ ಯಾರೊಡನೆ ಸಾಧುವಾದದ್ದು ಮತ್ತು ಸಾಧ್ಯವಾದದ್ದು? ಯಾವ ನಿಯಮಿತವಾದ ಕನಿಷ್ಠ ಕಾರ್ಯಕ್ರಮಕ್ಕಾಗಿ ಈ ಮೈತ್ರಿಯನ್ನು ಬೆಳೆಸಬೇಕು ಮತ್ತು ಬಲಯುತವನ್ನಾಗಿಸಬೇಕು?


1902ರಲ್ಲಿ ಲೆನಿನ್ ಅವರು ಪ್ಲೆಖನೋವ್‌ಗೆ ಬರೆದ ಒಂದು ಪತ್ರದಲ್ಲಿ ಹೀಗೆ ನುಡಿದರು: "ವರ್ಗ ಹೋರಾಟದ ಬಗ್ಗೆ ಹಳ್ಳಿಯ ಜನರಿಗೆ ಸರಿಯಾದ ಮಾರ್ಕ್ಸ್‌ವಾದಿ ವಿಶ್ಲೇಷಣೆಯನ್ನು ತಿಳಿಸಿಕೊಡಲು

ನಾನು ಅತ್ಯಂತ ಕಾತುರನಾಗಿದ್ದೇನೆ." ಆ ಕೆಲಸವನ್ನು ಬಹಳ ಸಮರ್ಪಕವಾಗಿ ತಮ್ಮ "ಹಳ್ಳಿಯ ಬಡವರಿಗೆ" ಎಂಬ ಪುಸ್ತಿಕೆಯಲ್ಲಿ ಲೆನಿನ್ ಅವರು ನಿರ್ವಹಿಸಿದ್ದಾರೆ. ಹಳ್ಳಿಗಳ ಪ್ರಜಾ ಸಂಖ್ಯೆಯನ್ನು ಮಾತ್ರ ಗಣನೆಗೆ ತೆಗೆದುಕೊಂಡು ಈ ವಿಶ್ಲೇಷಣೆಯನ್ನು ಲೆನಿನ್ ಮಾಡಿಲ್ಲ. ಅಲ್ಲಿಯ ಜನರಲ್ಲಿರುವ ಆಸ್ತಿಯ ಆಧಾರದ ಮೇಲೆ ಮತ್ತು ಉತ್ಪಾದನಾ ಕಾರ್ಯದಲ್ಲಿ ಅವರೆಲ್ಲರ ನಡುವೆ ಉಂಟಾಗಿರುವ ವಿವಿಧ ಸಂಬಂಧಗಳ ಆಧಾರದ ಮೇಲೆ ಲೆನಿನ್ ಅವರನ್ನೆಲ್ಲಾ ಪ್ರತ್ಯೇಕವಾದ ವರ್ಗಸ್ತರಗಳಿಗೆ ಸೇರಿದ್ದಾರೆಂದು ತರ್ಕಿಸಿದ್ದಾರೆ. ಭಾರಿ ಭೂಮಾಲಿಕರು, ಶ್ರೀಮಂತ ರೈತರು, ಮಧ್ಯಮ ವಿಭಾಗಕ್ಕೆ ಸೇರಿದ ರೈತರು, ಮತ್ತು ಕನಿಷ್ಠ ಪ್ರಮಾಣದ ಭೂಮಿಯ ಒಡೆಯರಾದ ರೈತರು; ಹಾಗೂ ಕೃಷಿ ಕಾರ್ಮಿಕರು, ಎಂದು ನಾಲ್ಕು ವರ್ಗಗಳವರನ್ನು ಲೆನಿನ್ ಹೆಸರಿಸಿ ಆ ವರ್ಗಗಳಿಗೆ ಸೇರಿದವರ ಆರ್ಥಿಕ-ಸಾಮಾಜಿಕ ಶಕ್ತಿ ಮತ್ತು ಸ್ಥಾನಗಳನ್ನು ಲೆನಿನ್ ಗುರುತಿಸಿದ್ದಾರೆ. ಈ ಗುಂಪುಗಳಿಗೆ ಸೇರಿದವರ ನಡುವೆ ವರ್ಗ ಹೋರಾಟ ನಡೆಯುತ್ತಿರುವಾಗ ಕ್ರಾಂತಿಕಾರಿ ಕಾರ್ಯಕ್ರಮಕ್ಕೆ ಬದ್ಧರಾಗಿರುವವರು ಯಾರ ಮೈತ್ರಿಯನ್ನು ಸಾಧಿಸಿ ಹೋರಾಟಗಳಲ್ಲಿ ತೊಡಗುತ್ತಾರೆಂಬುದನ್ನೂ ಲೆನಿನ್ ಸೂಚಿಸಿದ್ದಾರೆ. ಈ ಹೋರಾಟದಲ್ಲಿ ಪಾಲ್ಗೊಳ್ಳಲು ಕಾರ್ಮಿಕರನ್ನು ಅಣಿಗೊಳಿಸುವುದೂ ಲೆನಿನ್ನರ ಧ್ಯೇಯವಾಗಿದ್ದಿತು. ತಮ್ಮ ಅವಿರತ ಹೋರಾಟದಿಂದ ಆಗಲೇ ಕೆಲವು ಪ್ರಜಾಪ್ರಭುತ್ವವಾದಿ ಸುಧಾರಣೆಗಳನ್ನು ಗಳಿಸಿಕೊಂಡಿದ್ದ ಕಾರ್ಮಿಕರ ಜೊತೆಯಲ್ಲಿ ಐಕ್ಯಹೋರಾಟ ನಡೆಸುವುದು ಹಳ್ಳಿಗಳ ಶೋಷಿತ ವರ್ಗಕ್ಕೂ ಹಿತಕರವೆಂಬುದನ್ನು ನಿದರ್ಶನಗಳೊಂದಿಗೆ ಲೆನಿನ್ ಸಾಬೀತುಪಡಿಸಿದ್ದಾರೆ. ಕಾರ್ಮಿಕ ಸಂಘಟನೆಗಳ ರಾಜಕೀಯ ಪ್ರಜ್ಞೆ ಅತ್ಯಂತ ಹಿರಿಯ ಮಟ್ಟವನ್ನು ತಲುಪಿತ್ತೆಂದಾಗಲಿ ಅಥವಾ ಅವರ ಹೋರಾಟದ ಹರಿತ ಸಮಗ್ರವಾಗಿತ್ತೆಂದಾಗಲಿ ಲೆನಿನ್ ಅವರು ಭಾವಿಸುವುದಿಲ್ಲ. ಆದರೆ ಪ್ರಜಾಪ್ರಭುತ್ವವಾದಿ ನೀತಿಗಳಿಗಾಗಿ ಫಲಪ್ರದವಾದ ಕೆಲವು ಹೋರಾಟಗಳನ್ನು ಖಂಡಿತ ಅವರು ನಡೆಸಿದ್ದರೆಂಬುದನ್ನು ಲೆನಿನ್ ಪ್ರಸ್ತಾಪಿಸಿದ್ದಾರೆ. ಲೆನಿನ್ನರ ಮಾರ್ಗಸೂಚಿಯನ್ನು ಅನುಸರಿಸಿ ನಮ್ಮ ಹಳ್ಳಿಗಳ ಇಂದಿನ ವರ್ಗಪ್ರಭೇದಗಳನ್ನು ಪ್ರಖರವಾಗಿ ಗುರುತಿಸಿ ಅವುಗಳಲ್ಲಿ ಶೋಷಿತವರ್ಗಗಳೊಡನೆ ಕಾರ್ಮಿಕವರ್ಗದ ಮೈತ್ರಿ ಸಾಧಿಸಬೇಕಾದ್ದು ಇಂದಿನ ಕ್ರಾಂತಿಕಾರಿ ಚಳುವಳಿಯ ಆದ್ಯಕರ್ತವ್ಯವಾಗಿದೆ.

ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಆಂದೋಳನದಲ್ಲಿ ವರ್ಗಹಿತಾಸಕ್ತಿಗಳು ಹೇಗೆ ಪ್ರತಿಫಲನಗೊಂಡುವೆಂಬುದನ್ನೂ ಇಲ್ಲಿ ಸ್ಮರಿಸಬಹುದು. ಭಾರಿ ಜಮೀನ್ದಾರರ ಮತ್ತು ಭೂಹೀನರ ನಡುವಣ ತಿಕ್ಕಾಟ ಆಗಲೂ ಇತ್ತು. ಆದರೆ ಸ್ವಾತಂತ್ರ್ಯ ಚಳುವಳಿಯು ಆರ್ಥಿಕ ಸ್ವಾತಂತ್ರ್ಯಕ್ಕೆ ಬೇಕಾದ ಚಳುವಳಿಯ ಸ್ವರೂಪವನ್ನು ಒಮ್ಮೆಲೇ ಪಡೆದುಕೊಳ್ಳದೆ ಹೋದದ್ದರಿಂದ ನಮ್ಮಲ್ಲಿ ಆ ಸಮಸ್ಯೆಯು ಈಗ ತೀವ್ರ ಸ್ವರೂಪವನ್ನು ತಳೆದಿದೆ. ಅಂದಿನ ಚಳುವಳಿಯ ನಾಯಕರನ್ನು ದೂಷಿಸುವುದರಿಂದ ಇದಕ್ಕೆ ಪರಿಹಾರ ದೊರಕುವುದಿಲ್ಲ. ವರ್ಗಹೋರಾಟವು ಯಾವುದೋ ಕೆಲವು ನಾಯಕರಿಂದಾಗಿ ತನ್ನ ಸ್ವರೂಪವನ್ನು ಪಡೆದುಕೊಳ್ಳುವುದಿಲ್ಲ. ಚಾರಿತ್ರಿಕ ವಸ್ತುಸ್ಥಿತಿಯೂ ಸಹ ಆ ಸ್ವರೂಪವನ್ನು ನಿಗದಿಗೊಳಿಸುತ್ತದೆ. 1922ರ ಫೆಬ್ರವರಿ 12 ರಂದು ಜರುಗಿದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸ್ವೀಕರಿಸಿದ ಕೆಲವು ನಿರ್ಣಯಗಳಲ್ಲಿ ಇದು ಸ್ಪಷ್ಟವಾಗಿ ಗೋಚರಿಸುತ್ತದೆ. ಚೌರಿಚೌರಾದಲ್ಲಿ ನಡೆದ ಪೋಲೀಸರ ಹತ್ಯೆಯಿಂದಾಗಿ ಗಾಂಧೀಜಿಯವರು ತಮ್ಮ ಅಹಿಂಸಾ ಸತ್ಯಾಗ್ರಹವನ್ನು ಹಿಂತೆಗೆದುಕೊಂಡಿದ್ದುದಾಗಿ ಘೋಷಿಸಿದ್ದರು. 1922ರ ಬರ್ಡೋಲಿ ಕಾರ್ಯಕಾರಿ ಸಮಿತಿ ಸಭೆ ನಡೆದದ್ದು ಈ ಹಿನ್ನೆಲೆಯಲ್ಲಿ. ಕರನಿರಾಕರಣೆಯನ್ನೂ ಆಂದೋಳನದ ಒಂದಂಶವನ್ನಾಗಿ ಘೋಷಿಸಿದ್ದ ಕಾಂಗ್ರೆಸ್, ಸತ್ಯಾಗ್ರಹವನ್ನು ಹಿಂತೆಗೆದುಕೊಂಡಾಗ ಸ್ವೀಕರಿಸಿದ ನಿರ್ಣಯದ ಕೆಲಭಾಗಗಳು ಹೀಗಿವೆ: "ರೈತರಿಂದ ಸರ್ಕಾರಕ್ಕೆ ಬಾಕಿಯಿರುವ ಎಲ್ಲ ತೆರಿಗೆಗಳನ್ನೂ ಪಾವತಿ ಮಾಡುವಂತೆ ಪ್ರಾದೇಶಿಕ ಕಾಂಗ್ರೆಸ್ ಸಮಿತಿಗಳು ರೈತರಿಗೆ ಸಲಹೆ ನೀಡಬೇಕೆಂದು ಈ ಕಾರ್ಯಕಾರಿ ಸಮಿತಿಯು ಆದೇಶ ನೀಡುತ್ತದೆ. ...ಜಮೀನ್ದಾರರಿಗೆ ಕೊಡಬೇಕಾದ ಗುತ್ತಿಗೆ, ಇತ್ಯಾದಿಗಳನ್ನು ರೈತರು ತಡೆಹಿಡಿಯುವುದು ಕಾಂಗ್ರೆಸ್ ನಿರ್ಣಯಗಳಿಗೆ ವಿರೋಧವಾದುದ್ದೆಂದು ರೈತರಿಗೆ ತಿಳುವಳಿಕೆ ನೀಡಬೇಕೆಂದು ಕಾಂಗ್ರೆಸ್ ಕಾರ್ಯಕರ್ತರಿಗೆ ಈ ಕಾರ್ಯಕಾರಿ ಸಮಿತಿಯು ಸೂಚಿಸುತ್ತದೆ....ಜಮೀನ್ದಾರರ ಶಾಸನಬದ್ಧವಾದ ಹಕ್ಕುಗಳಿಗೆ ಚ್ಯುತಿಯುಂಟು ಮಾಡುವುದು ಕಾಂಗ್ರೆಸ್ ಚಳುವಳಿಯ ಉದ್ದೇಶವಲ್ಲವೆಂದು ಈ ಕಾರ್ಯಕಾರಿ ಸಮಿತಿಯು ಜಮೀನ್ದಾರರಿಗೆ ಆಶ್ವಾಸನೆ ನೀಡುತ್ತದೆ. ರೈತರಿಗೇನಾದರೂ ಅಸಮಾಧಾನ ಅಥವಾ ಕುಂದುಕೊರತೆಗಳಿದ್ದರೆ ಅವನ್ನು ಸಂಧಾನಗಳ ಮೂಲಕ ಬಗೆಹರಿಸಿಕೊಳ್ಳಬೇಕೆಂಬುದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಅಭಿಪ್ರಾಯ..." ಲೆನಿನ್ನರ ವರ್ಗಹೋರಾಟದ ಕ್ರಾಂತಿಕಾರಿ ಕಾರ್ಯಕ್ರಮಕ್ಕೂ ವರ್ಗಮೈತ್ರಿಯ ಈ ಬೂರ್ಜ್ವಾ ಕಾರ್ಯಕ್ರಮಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಗಾಂಧೀಜಿಯವರ ನಾಮಬಲದಿಂದ ತಮ್ಮ ರಾಜಕೀಯ ನಾಯಕತ್ವವನ್ನು ಸ್ಥಾಪಿಸಿಕೊಳ್ಳಲು ಹವಣಿಸುತ್ತಿರುವವರಲ್ಲಿ ಗಾಂಧೀಜಿಯವರ ಸಾಮಾಜಿಕ ಪ್ರಜ್ಞೆಯಾಗಲಿ, ನಿಷ್ಠೆಯಾಗಲಿ, ಕಳಕಳಿಯಾಗಲಿ ಉಳಿದಿದೆಯೆಂದು ಯಾರೂ ಭ್ರಮಿಸಲು ಅವಕಾಶವಿಲ್ಲ. ಅವರಲ್ಲಿ ಉಳಿದಿರುವುದು ಕೇವಲ ವರ್ಗ ಹೋರಾಟದ ವಿರೋಧಭಾವನೆ, ವರ್ಗಸಾಮರಸ್ಯದ ಘೋಷಣೆ. 1920ರ ದಶಕದ ವಿಶಿಷ್ಟ ಚಾರಿತ್ರಿಕ ಕಾರಣಗಳಿಂದಾಗಿ ಅಂದು ಆರ್ಥಿಕ ವಿಮೋಚನೆಗಾಗಿ ವರ್ಗಹೋರಾಟದ ಮಾರ್ಗವನ್ನು ಹಿಡಿಯುವುದು ಅಸಾಧ್ಯವಾಗಿದ್ದಿರಬಹುದು. ಆದರೆ 1980ರ ದಶಕದಲ್ಲಿ ಅಂತಹ ಆತಂಕಕಾರಿ ಕಾರಣಗಳಾವುವೂ ಉಳಿದಿಲ್ಲ. ನಮ್ಮ ಸಮಾಜದ ವರ್ಗಭೇದಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ಸೂಕ್ತವಾದ ಮೈತ್ರಿಯನ್ನು ಸಾಧಿಸಿ ಸ್ಫುಟವಾದ ವರ್ಗಹೋರಾಟದಲ್ಲಿ ತೊಡಗಬೇಕಾದ್ದು 1980ರ ದಶಕದ ನಿಖರವಾದ ಕ್ರಾಂತಿಕಾರಿ ಕಾರ್ಯಕ್ರಮವಾಗಿದೆ. ಲೆನಿನ್ನರ ನೂರಹತ್ತನೆಯ ಜನ್ಮೋತ್ಸವದ ಸಂದರ್ಭದಲ್ಲಿ ನಾವವರಿಗೆ ಸೂಚಿಸಬೇಕಾದ ಗೌರವ ಮತ್ತು ಅವರಿಂದ ಪಡೆಯಬಹುದಾದ ಸ್ಫೂರ್ತಿ ಇದರಲ್ಲಿದೆ. ನಮ್ಮ ಸಮಾಜದ ಅಂತರಾಳದ ಬೃಹತ್ ಸಮಸ್ಯೆಗಳಿಗೆ ವೈಜ್ಞಾನಿಕ ಸಮಾಜವೊಂದೇ ನಿಜವಾದ ಪರಿಹಾರ ನೀಡಬಲ್ಲುದು. ಆ ಪರಿಹಾರ ಕಂಡುಕೊಳ್ಳುವುದರಲ್ಲಿ ಲೆನಿನ್ ನಮಗೆ ಮಾರ್ಗದರ್ಶಿ, ದೀವಟಿಗ ಮತ್ತು ಪ್ರೇರಕಶಕ್ತಿ. ಲೆನಿನ್ ಅಮರರಾಗಿರುವುದು ಅವರು ಕ್ರಾಂತಿಶಿಲ್ಪಿಯಾಗಿರುವುದರಿಂದ ಮತ್ತು ಪಥನಿರ್ದೇಶಕರಾಗಿರುವುದರಿಂದ. ಅಂತಹವರ ಮಾರ್ಗದರ್ಶನದಲ್ಲಿ ಹೋರಾಟ ನಡೆಸುವವರು ವಿಜಯಿಗಳಾಗುವುದು ಚಾರಿತ್ರಿಕವಾಗಿ ಅನಿವಾರ್ಯವಾಗಿದೆ. ಇಪ್ಪತ್ತನೆಯ ಶತಮಾನದ ಯುಗಪುರುಷರಾದ ಲೆನಿನ್ ನಮ್ಮ ವಿಮೋಚನೆಗೂ ಕಾರಣಪುರುಷರಾಗುವುದರಲ್ಲಿ ಸಂಶಯಕ್ಕೆ ಎಡೆಯೇ ಇಲ್ಲ. ಆದರೆ ಅದಕ್ಕೆ ಪೂರ್ವಭಾವಿಯಾಗಿ ಅವರು ನಡೆಸಿದಂತಹ ಆರ್ಥಿಕ-ಸಾಮಾಜಿಕ ವಿಶ್ಲೇಷಣೆ ಮತ್ತು ಅದರಿಂದ ನಿರ್ಧರಿತವಾಗುವ ವರ್ಗಹೋರಾಟದಲ್ಲಿ ನಾವು ತೊಡಗಬೇಕಷ್ಟೆ.

●





Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT